ಪುಸ್ತಕ ಪ್ರಪಂಚ

ಸಂಪುಟ ೫೦ ಫೆಬ್ರವರಿ ೨೦೦೦ ಸಂಚಿಕೆ.೫



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೫೦ ಜನವರಿ ೨೦೦೦ ಸಂಚಿಕೆ ೫

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6, Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಅಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ರಾಷ್ಟ್ರ ಪ್ರಗತಿಗೆ ವಿಕೇಂದ್ರೀಕರಣವೇ ಪರಮ ಸಾಧನ

ಪಶ್ಚಿಮ ಬಂಗಾಳ ಸರ್ಕಾರ ಡಾ. ಅಶೋಕ ಮಿತ್ರಾ ಅವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಆಯೋಗವನ್ನು ರಚಿಸಿತ್ತು. ಶಿಕ್ಷಣನೀತಿಯ ಹಿನ್ನೆಲೆಯಲ್ಲದು ಕೇಂದ್ರ- ರಾಜ್ಯ ಸಂಬಂಧಗಳನ್ನು ಸಹ ಕುರಿತು ಚರ್ಚೆ ನಡಸಿ, ವರದಿಯನ್ನು ಸಿದ್ಧಪಡಿಸಿದೆ. ಆ ವರದಿಯ ೧೬ನೆಯ ಅಧ್ಯಾಯವನ್ನಿಲ್ಲಿ 'ಸಂಗ್ರಹಿಸಲಾಗಿದೆ.

ಅನೇಕ ತಿದ್ದುಪಡಿ, ವಿವರಣೆಗಳ ಮೂಲಕ ತನಗನುಕೂಲವಾಗುವಂತೆ ಕೇಂದ್ರ ಸರ್ಕಾರ ರಾಜ್ಯಾಂಗವನ್ನು ಬದಲಾಯಿಸಿಕೊಂಡಿದೆ. ಈ ದೇಶದ ಜನಾಂಗಿಕ, ಭಾಷಿಕ, ಸಾಂಸ್ಕೃತಿಕಾದಿ ವೈವಿಧ್ಯತೆಗಳಿಂದಾಗಿ, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ರಾಜ್ಯಕ್ಕೂ ಸ್ವಾಯತ್ತತೆಯನ್ನು ನೀಡಬೇಕಾದ್ದು ಅತ್ಯಗತ್ಯ. ಸಂಖ್ಯಾ ಬಾಹುಳ್ಯವಿರುವ, ಬಹುಮುಖೀ ವೈವಿಧ್ಯದ, ತುಂಬ ವಿಸ್ತಾರವಾದ ದೇಶದಲ್ಲಿ ದೂರದ ಕೇಂದ್ರ ಸರ್ಕಾರ ರೂಪಿಸುವ ಶಿಕ್ಷಣ ವ್ಯವಸ್ಥೆ ಅವಾಸ್ತವವಾಗುತ್ತದೆ, ಅನುಪಯೋಗವಾಗುತ್ತದೆ, ಅಸಾರ್ಥಕವಾಗುತ್ತದೆಂಬ ದೃಷ್ಟಿಯಿಂದ ಹಿಂದಿನ ಬ್ರಿಟಿಷ್ ಸರ್ಕಾರ ಪ್ರಾದೇಶಿಕ ಸ್ವಾಯತ್ತತೆಯನ್ನು ಮಾನ್ಯಮಾಡಿತ್ತು. ರಾಜ್ಯಾಂಗದ 254,255 ಮತ್ತು 256ನೆಯ ವಿಧಿಗಳು ಶೈಕ್ಷಣಿಕ ನೀತಿಯ ಬಗ್ಗೆ ಯೋಗ್ಯ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಕೇಂದ್ರಕ್ಕೆ ಬಿಟ್ಟುಕೊಟ್ಟಿವೆಯೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಪ್ರಾಥಮಿಕ ಮಟ್ಟದಲ್ಲಿ ಬಳಸಬಹುದಾದ ಭಾಷಾ ಮಾಧ್ಯಮ ಹಾಗೂ ಉನ್ನತ ಸಂಶೋಧನೆಯ ಬಗೆಗಿನ ಕೇಂದ್ರ ಸರ್ಕಾರದ ಹೊಣೆಗಾರಿಕೆಯನ್ನು ಕುರಿತಂತೆ ಕೊಥಾರಿ ಶಿಕ್ಷಣ ಆಯೋಗ ಅನೇಕ ಶಿಫಾರಸುಗಳನ್ನು ರೂಪಿಸುತ್ತದೆ. ಅವುಗಳನ್ನು ಕಾರ್ಯರೂಪಕ್ಕೆ ತರುವಲ್ಲಿ, ಹಲವು ಸಂಶೋಧನ ಧನಸಹಾಯ ಆಯೋಗಗಳನ್ನು ರಚಿಸಿ, ಹಣವನ್ನು ಹಂಚುವ ಅಧಿಕಾರವನ್ನು ಕೇಂದ್ರ ಸರ್ಕಾರವೇ ಭದ್ರಪಡಿಸಿಕೊಂಡಿದೆ.

ಇಷ್ಟು ಸಾಲದೆಂಬಂತೆ ಕೇಂದ್ರ ಸರ್ಕಾರ ೧೯೭೦ರ ನಂತರ ಶಿಕ್ಷಣವನ್ನು ರಾಜ್ಯಪಟ್ಟಿಯಿಂದ ಸಮಾನಾಂತರ ಪಟ್ಟಿಗೆ ವರ್ಗಾಯಿಸಿಕೊಂಡಿದೆ. ರಾಜ್ಯಪಟ್ಟಿಯಲ್ಲಿದ್ದಾಗ ರಾಜ್ಯಗಳು ಇತಿಹಾಸ ಸಂಸ್ಕೃತಿ ವಾತಾವರಣ ಜೀವನ ವಿಧಾನದ ಹಿನ್ನೆಲೆಯಲ್ಲಿ ಶಿಕ್ಷಣ ನೀತಿಯನ್ನು ರೂಪಿಸಿಕೊಳ್ಳುವ, ಪ್ರಾದೇಶಿಕ ಭಾಷೆಗೆ ಮಹತ್ವನೀಡುವ ಅವಕಾಶವಿತ್ತು. ಔತ್ತರೇಯ ಸಂಸ್ಕೃತಿಗನುಗುಣವಾಗಿ ಶಿಕ್ಷಣವನ್ನು ಉತ್ತರೀಕರಿಸಿ, ದಕ್ಷಿಣದ ಅರ್ಥಾತ್ ದ್ರಾವಿಡದ* ವೈಶಿಷ್ಟ್ಯವನ್ನು ಭಂಗಗೊಳಿಸುವ ಸಲುವಾಗಿ ಈ ಹುನಾರು ಹಿಡಿದಿರುವುದು ಸುಸ್ಪಷ್ಟ. ಸಮಾನಾಂತರ ಪಟ್ಟಿಯಲ್ಲಿರುವ ವಿಷಯಗಳ ಬಗ್ಗೆ ಕೇಂದ್ರದ್ದೇ ಭರಾಟೆ. ಅದೊಂದು ಆದೇಶ ಹೊರಡಿಸಿತೆಂದರೆ ರಾಜ್ಯ ಸರ್ಕಾರ ದುರ್ಯೋಧನಾಸ್ಥಾನದ ಪಾಂಡವರಂತೆ ಮಿಳ್ಳಿಳನೆ ಕಣ್ಣು ಬಿಡಬೇಕಾಗುತ್ತದೆ. ಕೇಂದ್ರದ ಪಟ್ಟಿಗೂ ಸಮಾನಾಂತರ ಪಟ್ಟಿಗೂ ನಡುವೆ ಏನೂ ವ್ಯತ್ಯಾಸವಿರುವುದಿಲ್ಲ. ಕೇಂದ್ರದಲ್ಲಿ ಯಾವ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ, ಅದು ತನ್ನ ಅಧಿಕಾರವನ್ನು ವಿಸ್ತರಿಸಿಕೊಳ್ಳಲು ಪ್ರಯತ್ನಿಸುತ್ತದೆಯೆ ಹೊರತು, ಖಂಡಿತವಾಗಿಯೂ ಕಡಮೆ ಮಾಡಿಕೊಳ್ಳಲಿಷ್ಟವಿಲ್ಲ.

ವೈವಿಧ್ಯದಲ್ಲಿ ಏಕತೆಯೇ ಭಾರತೀಯ ಸಂಸ್ಕೃತಿಯ ಲಕ್ಷಣವೆಂದು ಹೇಳುತ್ತ, ಗುಪ್ತವಾಗಿ

*ಇದು ನನ್ನ ಮಾತು. 1 ತಿರುವಾಂಕೂರಿನ ಡಿಎಲ್ಎ ಸುದ್ದಿ ಪತ್ರಿಕೆಯ 23 ನೆಯ ಸಂಪುಟದ 11 - 12 ನೆಯ ಸಂಚಿಕೆಗಳಲ್ಲಿ ಪ್ರಕಟವಾಗಿದೆ

ವೈವಿಧ್ಯ ಸಂಪತ್ತನ್ನು ಅಪಹರಿಸುತ್ತಿರುವುದು ಹೇಯ ಸಂಗತಿಯಾಗಿದೆ. ಶಿಕ್ಷಣ ಸಂಸ್ಥೆಗಳು ಇಟ್ಟಿಗೆ ಹೆಂಚುಗಳನ್ನು ತಯಾರು ಮಾಡುವ ಕಾರ್ಖಾನೆಗಳಲ್ಲ; ಬುದ್ಧಿಪ್ರತಿಭೆಗಳನ್ನು ಪ್ರಚೋದಿಸುವ, ಜ್ಞಾನವನ್ನು ಸೃಷ್ಟಿಸುವ ಸಜೀವ ಶಕ್ತಿ ಕೇಂದ್ರಗಳೆಂಬುದನ್ನು ನೀತಿ ನಿರೂಪಕರು ಮರೆಯಬಾರದು. ಭಿನ್ನವಿಭಿನ್ನ ಅಭಿರುಚಿಯ ಸಂಸ್ಕಾರದ ಜನರನ್ನು ಒಂದು ಸಣ್ಣ ಕೋಣೆಯಲ್ಲಿ ಕೂಡಿ, ಒಂದೇ ಒಂದು ಸಾಮಾನ್ಯ ವ್ಯವಸ್ಥೆಯನ್ನು ಅವರ ಮೇಲೆ ಹೇರುವುದಾದರೆ ದೇಶ ಅನೂಹ್ಯ ಅಪಾಯಗಳನ್ನು ಒಂದಲ್ಲ ಒಂದು ದಿನ ಎದುರಿಸಬೇಕಾಗುತ್ತದೆ.

ರಾಷ್ಟ್ರದ ಎಲ್ಲ ಭಾಷೆಗಳಿಗೂ ಸಮಾನ ಸ್ಥಾನ ನೀಡದೆ, ಸರ್ವಮಾಧ್ಯಮಗಳನ್ನಾಗಿ ಸ್ವೀಕರಿಸದೆ, ಯಾವುದೋ ಒಂದು ಭಾಷೆಯನ್ನು ಸಾರ್ವಭೌಮಸ್ಥಾನಕ್ಕೇರಿಸುವ ಪಾಳೆಗಾರಿಕೆ ಮನೋಭಾವ ದೇಶದ ಅಭದ್ರತೆಗೆ ಕಾರಣವಾಗುತ್ತದೆಂಬುದನ್ನು ನಾಯಕರರಿಯದಿರುವುದು, ಹಾಗೂ ಬಂಗ್ಲಾಸೋವಿಯಟ್ ಯೂನಿಯನ್ ಜೆಕೊಸ್ಲೊವಾಕಿಯ ದೇಶಗಳ ಇತ್ತೀಚಿನ ಚರಿತ್ರೆಯಿಂದ ಅವರು ಪಾಠ ಕಲಿಯದಿರುವುದು ಅಕ್ಷಮ್ಯ ಅಪರಾಧ. ಕೇಂದ್ರ ಸರ್ಕಾರವಿರುವುದು ಔತ್ತರೇಯರ ಆಸಕ್ತಿ ಆಶೋತ್ತರಗಳನ್ನು ಪೂರೈಸಲಿಕ್ಕೇ ಹೊರತು, ಸಮಗ್ರ ರಾಷ್ಟ್ರಕ್ಷೇಮವನ್ನು ಕಾಪಾಡಲಿಕ್ಕಲ್ಲ; ದಕ್ಷಿಣದವರ ಅಥವಾ ಅಹಿಂದೀಯರ ಹಿತವನ್ನು ರಕ್ಷಿಸುವುದಕ್ಕಲ್ಲ. ಉತ್ತರದವರು ದಕ್ಷಿಣದ ಒಂದು ಭಾಷೆಯನ್ನಾದರೂ ಕಲಿಯಬೇಕೆಂಬ, ಅಂತೆಯೇ ದಕ್ಷಿಣದವರು ಉತ್ತರದ ಒಂದು ಭಾಷೆಯ ಜತೆಗೆ ಪ್ರಾದೇಶಿಕ ಭಾಷೆ ಮತ್ತು ಇಂಗ್ಲಿಷ್ ಕಲಿಯಬೇಕೆಂಬ ತ್ರಿಭಾಷಾ ಸೂತ್ರವನ್ನು ಉತ್ತರದವರು ಧಿಕ್ಕರಿಸಿದ್ದಾರೆ. ಅವರು ದಕ್ಷಿಣದ ಭಾಷೆಯನ್ನು ಕಲಿಯಲು ಸಿದ್ಧರಾಗಿಲ್ಲ.

ರಾಜ್ಯಗಳ ಶಿಕ್ಷಣ ಯೋಜನೆಗಳ ಜತೆಗೆ ಕೇಂದ್ರದ ಮೂರು ಯೋಜನೆಗಳು ಜಾರಿಯಲ್ಲಿವೆ: ಕೇಂದ್ರದ ಪ್ರೌಢಶಾಲಾ ಮಂಡಲಿಯ ಯೋಜನೆ, ನವೋದಯ ಶಾಲೆಗಳು ಮತ್ತು ಮೊರಾರ್ಜಿ ಶಾಲೆಗಳು. ಇವು ಪ್ರತಿಷ್ಠಿತ ವರ್ಗಗಳನ್ನು ಸೃಷ್ಟಿಸುವ, ತಾರತಮ್ಯವನ್ನು ಪೋಷಿಸುವ ವ್ಯವಸ್ಥೆಗಳಾಗಿವೆ. ದೇಶದ ಹಿತದೃಷ್ಟಿಯಿಂದ ಅಂಥ ವ್ಯವಸ್ಥೆ ಅನಿವಾರ್ಯವಾಗಿದ್ದರೆ, ಆ ಯೋಜನೆಗಳನ್ನು ರಾಜ್ಯ ಸರ್ಕಾರಗಳಿಗೆ ವಹಿಸಬಹುದಿತ್ತು. ಈ ಕ್ರಮದಿಂದ ದ್ವಿಪ್ರತಿ ತಪ್ಪುತ್ತಿತ್ತು, ಸಮಾನಾಂತರ ಆಡಳಿತದಿಂದಾಗುವ ಅಪಾರವೆಚ್ಚವನ್ನು ತಪ್ಪಿಸಬಹುದಿತ್ತು, ನೌಕರರ ನಡುವಣ ಅಂತರವನ್ನು ಕಡಮೆಗೊಳಿಸಬಹುದಿತ್ತು, ಭಾವೈಕ್ಯವನ್ನು ಸಾಧಿಸಬಹುದಿತ್ತು, ಅತಿ ಕೇಂದ್ರೀಕರಣದ ಅತಿಸಾರವನ್ನು ತಡೆಯಬಹುದಿತ್ತು. ಈ ಶಾಲೆಗಳಲ್ಲಿ ಪ್ರಾದೇಶಿಕ ಭಾಷೆಗಳಿಗೆ ತಕ್ಕ ಸ್ಥಾನವಿಲ್ಲದ್ದರಿಂದ, ಮುಂದೊಂದು ದಿನ ಕೇಂದ್ರ ರಾಜ್ಯಗಳ ನಡುವಣ ಶೀತಲಯುದ್ಧ ಬಯಲ ಕಾಳಗವಾಗಿ ಪರಿಣಮಿಸಬಹುದು. ರಾಜ್ಯಗಳ ಜನರ ಭಾವಗಳನ್ನು ಗಾಯಗೊಳಿಸುವ ಮೂಲಕ, ರಾಷ್ಟ್ರ ಭದ್ರತೆಯನ್ನಾಗಲಿ, ಐಕ್ಯವನ್ನಾಗಲಿ ಸಾಧಿಸಲಾಗದು. ಅತಿ ಕೇಂದ್ರೀಕರಣ ಮತ್ತು ಉರ್ದು ರಷ್ಯನ್ ಭಾಷೆಗಳ ಹೇರಿಕೆ ಬಂಗ್ಲಾ ದೇಶದ ನಿರ್ಮಾಣಕ್ಕೆ ಮತ್ತು ಸೋವಿಯಟ್ ಯೂನಿಯನ್ನಿನ ಛಿದ್ರತೆಗೆ ಕಾರಣವಾಯಿತೆಂಬುದನ್ನು ಇಂಡಿಯಾದ ರಾಜಕೀಯ ಮುತ್ಸದ್ದಿಗಳು ಅರಿಯಬಲ್ಲರೆ? ಶೈಕ್ಷಣಿಕ ಪ್ರಗತಿಯ ದೃಷ್ಟಿಯಿಂದ, ದೂರದೃಷ್ಟಿಯ, ನ್ಯಾಯಯುತ ನಿರ್ಮಮತಾ ನಿಷ್ಪಕ್ಷಪಾತ ಮನೋಭಾವದಿಂದ, ಮಾನವೀಯ ದೃಷ್ಟಿಯಿಂದ, ಮುತ್ಸದ್ದಿತನದಿಂದ ಈ

ಸಮಸ್ಯೆಯನ್ನು ಬಗೆಹರಿಸಬೇಕು. ವಿಲಂಬ ನೀತಿಯಿಂದ ಅನಿಷ್ಟ ಪರಂಪರೆ ಉದ್ಭವವಾಗುತ್ತದೆಂಬುದನ್ನು ಆಡಳಿತ ನಿಪುಣರಾದ ವಿವೇಕಿಗಳು ಅರಿಯಬೇಕು.

ಶಿಕ್ಷಣ ಕ್ಷೇತ್ರ ಮಾತ್ರವಲ್ಲ, ಆಡಳಿತದ ಎಲ್ಲ ಕ್ಷೇತ್ರಗಳಲ್ಲಿಯೂ ಸಮಾನಾಂತರ ಇಲಾಖೆಗಳನ್ನು ರಾಜ್ಯಗಳಲ್ಲಿ ಸ್ಥಾಪಿಸಿ, ಕೇಂದ್ರಸರ್ಕಾರ ಕೇಂದ್ರೀಕರಣ ನೀತಿಯನ್ನು ಕಟ್ಟಿನ ಕಣ್ಣಿ ಕಿತ್ತುಹೋಗುವಷ್ಟರ ಮಟ್ಟಿಗೆ ಬಿಗಿಗೊಳಿಸುತ್ತಿದೆ. ಈ ಬಿಗಿಯ ಹಿಂದಿರುವ ಭಾವನೆಗೆ ಕಾರಣ. ರಾಜ್ಯಗಳ ಜನರ ಮತ್ತು ಸರ್ಕಾರಗಳ ಬಗೆಗಿರುವ ಅಪನಂಬಿಕೆ, ಔತ್ತರೇಯ ಸಂಸ್ಕೃತಿಯ ಹೇರಿಕೆ, ಉತ್ತರದವರ ಸರ್ವಜ್ಞತಾ ಪ್ರತಿಷ್ಠೆಯ ಅಹಮಹಮಿಕೆ. ಅತಿಕೇಂದ್ರೀಕರಣದಿಂದೊದಗುವ ಲಾಭ ಸೊನ್ನೆ; ನಷ್ಟ ಅಪಾರ. ಅನವಶ್ಯಕವಾದ ಸಮಾನಾಂತರ ಆಡಳಿತೆಯಿಂದ ಕೇಂದ್ರ ಸರ್ಕಾರದ ಖರ್ಚು ಹೆಚ್ಚುತ್ತದೆ; ಕೇಂದ್ರವೇ ಸರ್ವಜವಾಬ್ದಾರಿಯನ್ನು ಹೊರಬೇಕಾದ ರಕ್ಷಣಾ, ವಿದೇಶಾಂಗ ವ್ಯವಹಾರ, ಮೊದಲಾದ ಖಾತೆಗಳ ಬಗ್ಗೆ ಅದರ ನಿಗಾ ಕಡಮೆಯಾಗುತ್ತದೆ. ಅತಿಕೇಂದ್ರೀಕರಣದಿಂದ ಪ್ರಾದೇಶಿಕ ಪಕ್ಷಗಳು ಪ್ರಬಲವಾಗುತ್ತವೆ; ಪ್ರಾದೇಶಿಕ ಪ್ರಜೆಗಳ ಸ್ವಾಭಿಮಾನದ ಲಾವಾರಸ ಸಂಗ್ರಹಗೊಂಡು ಎಂದೊಒಮ್ಮೆ ಭುಗಿಲುಗೊಂಡು, ಅಪರಿಹಾರ್ಯ ಹಾನಿಯೊದಗುತ್ತದೆ. ಲೋಕದ ಚರಿತ್ರೆಯನ್ನೋದಿ ಅರ್ಥಮಾಡಿಕೊಳ್ಳಲಾರೆದ ಪ್ರತಿಷ್ಠಾಹಂಕಾರದ ನಾಯಕರಿಂದ ರಾಷ್ಟ್ರದ ಐಕ್ಯಕ್ಕೆ ಭಂಗವೊದಗಲಿದೆ. ನಾಲ್ಕೈದು ಖಾತೆಗಳನ್ನುಳಿಸಿಕೊಂಡು, ಉಳಿದುವುಗಳ ಪೂರ್ಣ ಜವಾಬ್ದಾರಿಯನ್ನು ರಾಜ್ಯಗಳಿಗೆ ವಹಿಸಿಕೊಟ್ಟು, ಎಲ್ಲ ಭಾಷೆಗಳಿಗೆ ಶಿಕ್ಷಣ ಆಡಳಿತ ಮೊದಲಾದ ಸರ್ವವ್ಯವಹಾರಗಳಲ್ಲಿಯೂ ಸಮಾನಸ್ಥಾನಮಾನ ನೀಡಿ, ಪ್ರಜಾತಂತ್ರದ ಜೀವನಾಡಿಯಂತಿರುವ ವಿಕೇಂದ್ರೀಕರಣ ನೀತಿಯನ್ನು ಸಾಧಿಸುವ ಮೂಲಕ, ರಾಜ್ಯಗಳಿಗೆ ಸ್ವಾಯತ್ತತೆಯನ್ನು ನೀಡಿದರೆ ಮಾತ್ರ ರಾಷ್ಟ್ರದ ಸಂಪದಭಿವೃದ್ಧಿ ಹಾಗೂ ಭದ್ರತೆಗಳು ಸಾಧ್ಯವಾಗುತ್ತವೆಂದು ಹೊಣೆಗಾರಿಕೆಯುಳ್ಳ ನಾಯಕರು ಅರಿಯಬೇಕಾಗಿದೆ.

ಶಿಕ್ಷಣ ಸಚಿವರ ಒಲವು-ನಿಲವು

ಕರ್ನಾಟಕದ ಇಂದಿನ ಶಿಕ್ಷಣ ಸಚಿವರ ಒಲವು ನಿಲವುಗಳನ್ನು ಪತ್ರಿಕೆಗಳನ್ನೋದಿ, ಭಾಷಣಗಳನ್ನು ಕೇಳಿ ತಿಳಿದುಕೊಂಡಾಗ ಯಾರಿಗಾದರೂ ಮೆಚ್ಚುಗೆಯಾಗದಿರದು. ಇಬ್ಬರೂ ವಿದ್ವತ್ಪ್ರೇಮಿಗಳು, ಉನ್ನತ ಶಿಕ್ಷಣ ಪಡೆದವರು, ಶಿಕ್ಷಣದ ಮಟ್ಟದಲ್ಲಿ ನಂಬಿಕೆಯುಳ್ಳವರು, ಒಳ್ಳೆಯ ಮಾತುಗಾರರು. ಡಾ. ಜಿ. ಪರಮೇಶ್ವರ್ ಕರ್ನಾಟಕದ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಆಸ್ಟ್ರೇಲಿಯಾದಲ್ಲಿ ಸಂಶೋಧನೆ ನಡೆಸಿ ಡಾಕ್ಟೊರೇಟ್ ಪದವಿ ಸಂಪಾದಿಸಿದವರು; ಸುಸಂಸ್ಕೃತಿಯ ಹಿನ್ನೆಲೆಯುಳ್ಳವರು. ದೇಶದ ಸರ್ವಾಭ್ಯುದಯಕ್ಕೆ ಜನರ ಸೋಜ್ವಲ ಶ್ರೇಷ್ಠ ಜೀವನಕ್ಕೆ ಶಿಕ್ಷಣವೊಂದೇ ಪ್ರಧಾನ ಆಧಾರವೆಂದು, ಜಗತ್ತಿನ ಪ್ರಬಲ ರಾಷ್ಟ್ರಗಳ ಜತೆಗೆ ನಮ್ಮ ರಾಷ್ಟ್ರ ತಲೆಯೆತ್ತಿ ನಿಲ್ಲುವುದಾದರೆ ಉಚ್ಚಶಿಕ್ಷಣದ ಗುಣಮಟ್ಟದ ವ್ಯವಸ್ಥೆ ಅತ್ಯಗತ್ಯವೆಂದು ಸದಾ ಅದರ ಚಿಂತೆಯಲ್ಲಿದ್ದಾರೆ ; ಶಿಕ್ಷಣದ ಮಟ್ಟವನ್ನೆತ್ತರಿಸಲು ಸಂಕಲ್ಪ ತೊಟ್ಟಿದ್ದಾರೆ. ಉನ್ನತ ಶಿಕ್ಷಣದ ಲೋಪದೋಷಗಳನ್ನು ಅರ್ಥಮಾಡಿ ಕೊಂಡಿದ್ದಾರೆ; ನಿರ್ದಾಕ್ಷಿಣ್ಯವಾಗಿ ಅವನ್ನು ಬಯಲಿಗೆಳೆದಿದ್ದಾರೆ. ಉನ್ನತ ಶಿಕ್ಷಣದ ಜವಾಬ್ದಾರಿಯನ್ನು ಹೊತ್ತಿರುವ

ಈ ಪ್ರಬುದ್ಧ ಮಹನೀಯರ ಸಮರ್ಥ ಆಡಳಿತಗಾರರ ಸಂಕಲ್ಪ ಈಡೇರಲೆಂಬುದು ಜನತೆಯ ಹಂಬಲವಾಗಿದೆ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಶ್ರೀ ಎಚ್. ವಿಶ್ವನಾಥ್ ಅವರ ಜವಾಬ್ದಾರಿ ಇನ್ನೂ ದೊಡ್ಡದು. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಉನ್ನತ ಶಿಕ್ಷಣದ ಅಸ್ತಿವಾರ. ಎರಡನೆಯದರ ಯಶಸ್ಸು ಮೊದಲನೆಯದರ ಗುಣಮಟ್ಟವನ್ನವಲಂಬಿಸಿದೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಇದೀಗ ಅಧೋಗತಿಗಿಳಿದಿದೆ. ಪ್ರಾದೇಶಿಕ ಭಾಷೆಯನ್ನು ಮಕ್ಕಳು ಓದು ಬರಹ ಮಾತುಗಳಲ್ಲಿ ತಪ್ಪಿಲ್ಲದಂತೆ ಬಳಸಲಾಗದ, ಮಗ್ಗಿಯನ್ನು ಕಲಿಯಲಾಗದ ಪರಿಸ್ಥಿತಿ ಉಪಾಧ್ಯಾಯರಿಗೆ ಹಾಗೂ ಸರ್ಕಾರಕ್ಕೆ ಮಾನ ತರುವಂಥ ಸಂಗತಿಯಲ್ಲ. ಈ ಸಂಗತಿ ವಿಶ್ವನಾಥ್ ಅವರಿಗೆ ಗೊತ್ತಿರುವುದರಿಂದಲೇ ಅದರ ಪರಿಹಾರಕ್ಕೆ ಪಣ ತೊಟ್ಟಿದ್ದಾರೆ. ಕೆಲವರ ದೃಷ್ಟಿಯಲ್ಲಿ ಅವರ ಅಭಿಪ್ರಾಯಗಳು ಸರಿದೋರದಿರಬಹುದು. ಆದರೆ ನೂತನಾಭಿಪ್ರಾಯ ಹೊಳೆದದ್ದೇ, ಬದಲಾವಣೆಗೆ ಮನಸ್ಸು ಮಾಡಿದ್ದೇ ಜೀವಂತಿಕೆಯ ಲಕ್ಷಣ. ಅವರ ಅಭಿಪ್ರಾಯ ಸರಿಯಲ್ಲವೆಂದು ಯಾರಾದರೂ ತೋರಿಸಿಕೊಟ್ಟದ್ದಾದರೆ, ಅವರದನ್ನು ತಿದ್ದಿಕೊಳ್ಳುವ ಔದಾರ್ಯವೂ ಅವರಲ್ಲಿದೆ. ಶಾಲಾ ಸಮುದಾಯ ಪದ್ಧತಿಯ ಮೂಲಕ ತಳಹದಿಘಟ್ಟದ ಶಿಕ್ಷಣದ ಗುಣಮಟ್ಟವನ್ನು ಎತ್ತರಿಸುತ್ತಾರೆಂಬ ನಿರೀಕ್ಷೆಯಲ್ಲಿದ್ದಾರೆ ಬುದ್ಧಿಜೀವಿಗಳು.

ಈ ಇಬ್ಬರು ಮಹನೀಯರೂ ಹಿಂದೆ ಸಚಿವರಾಗಿದ್ದು, ಅಪಾರ ಅನುಭವವನ್ನು ಸಂಪಾದಿಸಿದ್ದಾರೆ. ವಿಶ್ವನಾಥ್ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿದ್ದಾಗ ಕನ್ನಡ ಸ್ಥಾನಮಾನಗಳಿಗಾಗಿ ನಡಸಿದ ಹೋರಾಟ ಕನ್ನಡಿಗರಿಗೆ ಗೊತ್ತಿದೆ. ಕನ್ನಡದ ಏಳ್ಗೆಗೆ ಐಎಎಸ್ ಅಧಿಕಾರಿಗಳೇ ತೊಡರುಗಾಲೆಂಬುದನ್ನು ಅವರೂ ಒಪ್ಪಿಕೊಳ್ಳುತ್ತಾರೆ. ಒಮ್ಮೆ ಅವರು ಮೂವತ್ತು ಮಂದಿ ಜ್ಯೇಷ್ಠ ಅಧಿಕಾರಿಗಳ ಸಭೆ ಕರೆಯುತ್ತಾರೆ. ತಂತಮ್ಮ ಜೀವನ ಮಾಹಿತಿಯನ್ನು ಅರ್ಧಪುಟದಲ್ಲಿ ಕನ್ನಡದಲ್ಲಿ ಬರೆದುಕೊಡುವಂತೆ ಅವರನ್ನು ಕೇಳುತ್ತಾರೆ. ಆ ಅರ್ಧಪುಟದಲ್ಲಿಯೇ ಹಲವು ತಪ್ಪುಗಳು! ಅವರು ನಿಗದಿತ ಕನ್ನಡ ಪರೀಕ್ಷೆಯಲ್ಲಿ ಪಾಸಾಗಿದ್ದಾರೆಯೇ ಎಂಬ ಶಂಕೆ ಮಂತ್ರಿಗಳ ಮನಸ್ಸಿನಲ್ಲಿ ಮೂಡುತ್ತದೆ. ಕನ್ನಡದಲ್ಲಿ ತೇರ್ಗಡೆ ಹೊಂದಿದ್ದಕ್ಕೆ ಪ್ರಮಾಣ ಪತ್ರಿಕೆಗಳೇನೋ ಇದ್ದುವು. ಆದರೆ ಅವುಗಳ ಸಿಂಧುತ್ವದ ಬಗ್ಗೆ ಮಂತ್ರಿಗಳಿಗೆ ಅನುಮಾನಬಂದು, ಅವರನ್ನು ಪ್ರಶ್ನಿಸುತ್ತಾರೆ. ಕೇಂದ್ರ ಸರ್ಕಾರದ ಆ ಅಧಿಕಾರಿಗಳಿಗೆ ರಾಜ್ಯದ ಮಂತ್ರಿಗಳು ಯಾವ ಲೆಕ್ಕ? ಅವರು ಗುಂಪಾಗಿ ಮುಖ್ಯ ಮಂತ್ರಿಗಳನ್ನು ಕಂಡು ದೂರು ಸಲ್ಲಿಸುತ್ತಾರೆ. ಭಯ ಚಕಿತರಾದ ಮುಖ್ಯ ಮಂತ್ರಿಗಳು ವಿಶ್ವನಾಥ್ ಅವರನ್ನು 'ಕನ್ನಡದಿಂದ ಕಾಡಿಗೆ' ಕಳಿಸುತ್ತಾರೆ. ಕನ್ನಡ ಪ್ರಗತಿ ಕಾಣದ್ದಕ್ಕೆ ಯಾರು ಕಾರಣರೆಂಬುದು ಈ ಘಟನೆಯಿಂದ ಸ್ಪಷ್ಟವಾಗುತ್ತದೆ. ಕೆಲವು ಅಧಿಕಾರಿಗಳ ಕನ್ನಡದ ಸಹಿಯನ್ನು ನೋಡಿದಾಗ, ಅವರು ಎರಡನೆಯ ಇಯತ್ತೆಯ ಮಕ್ಕಳಿಗಿಂತ ಮೇಲಲ್ಲವೆನಿಸುತ್ತದೆ. ಅಂಥವರು ನಮ್ಮನ್ನಾಳುತ್ತಾರೆ.

ಇತ್ತೀಚೆಗೆ ಕರ್ನಾಟಕ ಲೋಕ ಸೇವಾ ಆಯೋಗ ಕೆಎಎಸ್ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗೆ ಕನ್ನಡ ಭಾಷಾ ಪ್ರಶ್ನೆ ಪತ್ರಿಕೆಯೊಂದನ್ನು ಕಡ್ಡಾಯಗೊಳಿಸಿರುವ ನಿಯಮವನ್ನು ರಾಜ್ಯದ ವರಿಷ್ಠ ನ್ಯಾಯಾಲಯ ಎತ್ತಿ ಹಿಡಿದಿರುವ ತೀರ್ಪು ನ್ಯಾಯನಿಷ್ಠೆಯಿಂದ ಕೂಡಿದೆ. ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ, ಆಡಳಿತಾತ್ಮಕ, ಭಾವಾತ್ಮಕ ದೃಷ್ಟಿಯಿಂದ ಪ್ರತಿರಾಜ್ಯದಲ್ಲಿಯೂ ಅಲ್ಲಿಯ ಬಹುಜನರ ಭಾಷೆಗೆ ಪಟ್ಟಕಟ್ಟಬೇಕಾದ್ದು, ಉಳಿದ ಭಾಷೆಗಳು ಪಟ್ಟದ ಭಾಷೆಗೆ ಪರಿವಾರ ಭಾಷೆಗಳಾಗಿ ಔಚಿತ್ಯವರಿತು ವರ್ತಿಸಬೇಕಾದ್ದು ನ್ಯಾಯ, ಧರ್ಮ. ಮನೆಗೆ ಅತಿಥಿಯಾಗಿ ಬಂದವರೇ ಒಡೆಯರಾಗಬಹುದೆ? ಆಂಗ್ಲರು ಈ ದೇಶದಲ್ಲಿ ನೆಲಸಿದ್ದೇ ಹೀಗೆ. ಪ್ರಜಾತಂತ್ರದ, ವಿಕೇಂದ್ರೀಕರಣದ, ಸ್ವಾತಂತ್ರ್ಯದ, ಐಕ್ಯದ ಸಂಕೇತ ಕನ್ನಡ; ಹಲವು ಜಾತಿಗಳನ್ನು, ಪಂಗಡಗಳನ್ನು, ಮತಗಳನ್ನು, ವಿವಿಧಾಭಿರುಚಿಗಳನ್ನು ಕೂಡಿಸುವ ಜೀವನಾಡಿ ಅದು. ನಾನಾ ವಿಧದ ವಿಚ್ಛಿದ್ರತೆಗಳನ್ನು ಪರಿಹರಿಸುವ ಅಮೃತಾಂಜನವದು. ಹೊರಗಿನಿಂದ ಹೊಟ್ಟೆಪಾಡಿಗಾಗಿ, ಧನ ಸಂಪಾದನೆಗಾಗಿ, ಅಧಿಕಾರಕ್ಕಾಗಿ ಬಂದ ಜನ ಪ್ರತ್ಯೇಕತೆಯನ್ನು ಮರೆತು, ಸ್ಥಳೀಯ ಸಂಸ್ಕೃತಿಯ ಮೇಲೆ ಸವಾರಿ ಮಾಡುವ ಅನಿಷ್ಟ ಮಹತ್ವಾಕಾಂಕ್ಷೆಯನ್ನು ತೊರೆದು, ದೇಶದ ಹಿತಾಸಕ್ತಿಯನ್ನು ಮಾತ್ರ ಪೋಷಿಸುತ್ತ ಸ್ಥಳೀಯ ಜೀವನದೊಡನೆ ಬೆರೆತಾಗ ಮಾತ್ರ ರಾಜ್ಯದ ಸರ್ವಾಭ್ಯುದಯ ಸಾಧ್ಯವಾಗುತ್ತದೆ. ಈಗಿನ ಹತ್ತು ಹಲವು ಕಸರು ಕಹಿಗಳಿಗೆ ಭಾಷೆಯ ಬಗೆಗೆ ಸರಿಯಾದ ಹಾಗೂ ಬಿಗಿಯಾದ ನಿಲವು ತಾಳದ ಸರ್ಕಾರದ ಸೋಲೇ ಕಾರಣ. ಕೂಡಲೇ ಕನ್ನಡ ಸರ್ವ ಮಾಧ್ಯಮವಾಗಲಿಲ್ಲ, ಅದಕ್ಕೆ ಅನೇಕ ಆಪತ್ತುಗಳು ಕಾದುಕೊಂಡಿವೆ. ನೀರೆಲ್ಲ ಹೊರಗೆ ಹರಿದು ಹೋದನಂತರ ಏರಿಯ ಕಂಡಿಯನ್ನೊ ತೂಬನ್ನೊ ಮುಚ್ಚಿದರೆ, ಊರೆಲ್ಲ ಸೂರೆಯಾದ ನಂತರ ದಿಡ್ಡಿ ಬಾಗಿಲನ್ನು ಮುಚ್ಚುವುದಾದರೆ ಪ್ರಯೋಜನವೇನು? ಪ್ರಾದೇಶಿಕ ಭಾಷಾ ಸಂಸ್ಕೃತಿಗಳು ನಾಶವಾಗುತ್ತಿದ್ದಂತೆ, ಭಾರತ ಛಿದ್ರವಾಗುತ್ತದೆ. ಭಾರತೀಯ ಸಂಸ್ಕೃತಿ ನಾಶವಾಗುತ್ತದೆಯಾದ್ದರಿಂದ, ಅಲ್ಲಿಯ ಭಾಷೆ ಬೇಡವಾದವರು, ರಾಜ್ಯಪಾಲರೇ ಆಗಲಿ, ಅಲ್ಲಿಂದ ಕಾಲ್ತೆಗೆಯಲಿ ! ಅಲ್ಲಿಯ ಅಧಿಕಾರದ ರುಚಿಬೇಕು, ನೀರು ನೆಲಗಾಳಿ ಬೇಕು, ಭಾಷೆ ಬೇಡವೆ? ಅಧಿಕಾರವಿರಬೇಕಾದ್ದು ಜನರಿಗಾಗಿ ಅಲ್ಲವೆ? ಅದರಿಂದಾಗಿ ಜನರ ಭಾಷೆಯನ್ನವರು ಕಲಿಯಬೇಡವೆ ? ಕಲಿಯದವರು ಸ್ಥಳೀಯ ಸಂಸ್ಕೃತಿ ವಿರೋಧಿಗಳೆಂದೊ, ರೋಗಗ್ರಸ್ತರೆಂದೇ ತಿಳಿಯಬೇಕಾಗುತ್ತದೆ.

ಕನ್ನಡ ಮೊದಲಾದ ಪ್ರಾದೇಶಿಕ ಭಾಷೆಗಳಿಗೆ ಆದ್ಯತೆ ಹಾಗೂ ಅಗ್ರಮಾನ್ಯತೆ ನೀಡಲಿಲ್ಲವಾದರೆ ಜಾಗತೀಕರಣದ ಸಂದರ್ಭದಲ್ಲಿ ಸ್ಥಳೀಯರಿಗೆ ಹಲವು ಅಪಾಯಗಳು ಕಾದಿವೆಯೆಂಬುದನ್ನು ನಾಯಕರು ಮನಸ್ಸಿಗೆ ತಂದುಕೊಳ್ಳಬೇಕಾಗಿದೆ.

ಭಾರತೀಯ ವಿಮಾನಾಪಹರಣ

ಇಡೀ ಜಗತ್ತು ನೂತನ ಶತಮಾನದ ಪ್ರತೀಕ್ಷೆಯಲ್ಲಿ ತುದಿಗಾಲ ಮೇಲೆ ನಿಂತಿರುವಾಗ, ಕ್ರಿಸ್ತ ಜಯಂತಿ ದಿನ (೨೪.೧೨.೧೯೯೯) ದಂದು ಇಸ್ಲಾಮಿನ್ ಉಗ್ರರು ಕಟ್ಮಂಡುವಿಂದ ೧೮೫ ಮಂದಿ ಪ್ರಯಾಣಿಕರಿದ್ದ ಭಾರತೀಯ ವಿಮಾನವನ್ನು ಅಪಹರಿಸಿಕೊಂಡು , ಅಮೃತಸರದಲ್ಲಿ ಮುಕ್ಕಾಲು ಗಂಟೆಯಿದ್ದು ಎಣ್ಣೆ ತುಂಬಿಸಿಕೊಂಡು, ಒಬ್ಬ ಒತ್ತೆಯಾಳನ್ನು ಕೊಂದು ಕೆಲವರನ್ನು ಬಿಡುಗಡೆ ಮಾಡಿ. ದುಬೈ ಕಡೆಗೆ ಸಾಗಿ, ಅಲ್ಲಿಂದ ಆಫ್ಘಾನಿಸ್ತಾನದ ಕಾಂದಹಾರ್‌ನಲ್ಲಿಳಿದು, ಒಂದು ವಾರ ಭಾರತವನ್ನೂ

ಜಗತ್ತನ್ನೂ ದಿಗ್ಭ್ರಮೆಗೊಳಿಸಿದ್ದು ಅಕ್ಷಮ್ಯ ಅಪರಾಧ; ಶಾಂತಿ ಪ್ರಚಾರಕ ಇಸ್ಲಾಮ್ ಧರ್ಮದ ಕೊಲೆ; ಮನುಕುಲ ವಿರೋಧಿ ಸರ್ವಧರ್ಮ ವಿರೋಧಿ ಬರ್ಬರ ಕೃತ್ಯ. ಅಪಹರಣಕಾರರೆಲ್ಲರೂ ಪಾಕಿಸ್ತಾನಿಗಳೆಂಬ ಸಂಗತಿಯಿಂದ, ಈ ಅಪಹರಣ ಕಾರ್ಗಿಲ್ ಯುದ್ಧದ ಮುಂದುವರಿಕೆಯೆಂಬುದೂ, ಅಲ್ಲಿಯ ಸೇನಾಡಳಿತ ಜನರ ಗಮನವನ್ನು ಬೇರೆಡೆಗೆ ತಿರುಗಿಸುವ ಸಲುವಾಗಿ, ಇಂಡಿಯಾಕ್ಕೆ ಅನೇಕ ಅವಗಡಗಳನ್ನು ತಂದೊಡ್ಡುತ್ತದೆಂಬುದೂ ಖಚಿತ.

ವಿಮಾನ ಅಮೃತಸರದಲ್ಲಿ ಮುಕ್ಕಾಲು ಗಂಟೆ ನಿಂತಿದ್ದಾಗ ಇಂಡಿಯಾ ಸರ್ಕಾರ ನಿಷ್ಕ್ರಿಯವಾಗಿದ್ದದ್ದು, ಬೇರೆಬೇರೆ ಸಚಿವ ಖಾತೆಗಳಲ್ಲಿ ಹೊಂದಾಣಿಕೆ ಇಲ್ಲದ್ದು, ಸಂಧಾನ ವಿಳಂಬವಾದದ್ದು, ಸೇನಾನಾಯಕರ ಸಲಹೆ ಸಹಕಾರವನ್ನು ತೆಗೆದುಕೊಳ್ಳದ್ದು, ಕೊನೆಗೂ ಒತ್ತೆಯಾಳು ಕೊಲೆಯಾಗಿದ್ದರೂ, ಮೂವರು ಅಪಾಯಕರ ಸೆರೆಯಾಳುಗಳನ್ನು ವಿದೇಶಾಂಗ ಸಚಿವರೇ ಕರೆದೊಯ್ದು ಅಪಹರಣಕಾರರಿಗೆ ಒಪ್ಪಿಸಿದ್ದು, ಅಂತರರಾಷ್ಟ್ರೀಯ ಅಭಿಪ್ರಾಯದಲ್ಲಿ ಭಾರತದ ಸೋಲೆಂದೇ ಗಣಿಸುವಂತಾಗಿದೆ. ಆ ಸೆರೆಯಾಳುಗಳೇ ಭಾರತವನ್ನು ನಿರಂತರವಾಗಿ ಕಾಡುತ್ತಿರುವ ಭಯೋತ್ಪಾದಕರ ಮಹಾಗುರುಗಳು. ಅವರ ವಿಮೋಚನೆ ಭಾರತಕ್ಕೆ ಹಣಿಯಲಾಗದ ಗಂಡಾಂತರವಾಗುತ್ತದೆ. ಹತ್ಯೆಗೊಂಡ ಯುವಕನನ್ನು ಬದುಕಿಸಲು ನಡೆಸಿದ ಪ್ರಯತ್ನದಲ್ಲಿ ಉಗ್ರರ ಕ್ಷಣಿಕ ಮಾನವೀಯತೆಯೂ ವ್ಯಕ್ತವಾಗುತ್ತದೆ. ಅದೇನೇ ಇರಲಿ, ಒತ್ತೆಯಾಳುಗಳನ್ನು ರಕ್ಷಿಸಿದ್ದು ಸಮಾಧಾನದ ಸಂಗತಿ.

ಈ ಅಪಹರಣ, ಕಾರ್ಗಿಲ್ ಕದನ, ಚೆಚನ್ಯ ಕಲಹ, ಇವೇ ಮೊದಲಾದ ಪ್ರಕರಣಗಳು 'ಜೆಹಾದ್' ಭಾಗವೆಂಬುದರಲ್ಲಿ ಅನುಮಾನವಿಲ್ಲ. ಈ ಜೆಹಾದ್ ಹಿಂದೆ ತಾಲಿಬಾನ್, ಪಾಕಿಸ್ತಾನ ಮತ್ತು ಒಸಾಮಾ ಬಿನ್‌ಲಾಡೆನ್‌ರ ಕೈವಾಡವಂತು ಇದ್ದೇ ಇದೆ. ಈ ಜೆಹಾದ್‌ನಾಯಕ, ಜಗತ್ತಿನ ಭಯೋತ್ಪಾದಕರ ದೊರೆ, ಮಹಾಸಾಹಸಿ, ಮಹತ್ವಾಕಾಂಕ್ಷಿ ಮಹಾಶ್ರೀಮಂತ ಲಾಡೆನ್ ಅಮೆರಿಕಾ, ರಷ್ಯಾ ಮತ್ತು ಇಂಡಿಯಾಗಳನ್ನು ಇಸ್ಲಾಮಿ ಶತ್ರುಗಳೆಂದು ಕರೆದು, ಜಗತ್ತನ್ನೇ ಇಸ್ಲಾಮೀಕರಿಸುವ ಸಂಕಲ್ಪ ಹೊಂದಿದ್ದಾನೆ. ಈ ಉಗ್ರರ ವಿರುದ್ಧ ಜಗತ್ತಿನ ಪ್ರಬಲ ರಾಷ್ಟ್ರವೆನಿಸಿಕೊಂಡಿರುವ ಅಮೆರಿಕೆ ಅಂತರರಾಷ್ಟ್ರೀಯ ವ್ಯವಸ್ಥೆಯನ್ನೇಕೆ ರೂಪಿಸಬಾರದು? ಉಗ್ರರ ತರಬೇತಿ ನೀಡುತ್ತಿರುವ, ಆಶ್ರಯವಿತ್ತಿರುವ, ತಾಲಿಬಾನ್ ಸರ್ಕಾರವನ್ನು ಸೃಷ್ಟಿಸಿರುವ ಪಾಕಿಸ್ತಾನದ ಬಗ್ಗೆ ಅದಕ್ಕೆ ಸಹಾನುಭೂತಿ ಇಲ್ಲವೆ? ರಾಜನೀತಿಯ ದೃಷ್ಟಿಯಿಂದ ಅದನ್ನು ನಂಬುವುದು ಕಷ್ಟ.

ಪಾಕಿಸ್ತಾನದ ಗೂಢಚಾರರಿಗೆ ಇಲ್ಲಿಯ ಪಾಕಿಸ್ತಾನಾಭಿಮಾನಿಗಳು ಆಶ್ರಯ ನೀಡುತ್ತಿಲ್ಲವೆ? ವೀಸಾ ಅವಧಿ ಮುಗಿದರೂ, ಹನ್ನೊಂದು ಸಾವಿರ ಪಾಕಿಸ್ತಾನಿಗಳು ಇಲ್ಲಿಯೇ ಉಳಿದಿರಲು ಯಾರು ಕಾರಣ? ಈ ಪರಿಸ್ಥಿತಿ ಇಂದಿನ ಮತ್ತು ಹಿಂದಿನ ನಮ್ಮ ಎಲ್ಲ ಸರ್ಕಾರಗಳ ಸಾಮರ್ಥ್ಯಕ್ಕೆ ಒರೆಗಲ್ಲಾಗಿದೆಯಲ್ಲವೆ? ನಮ್ಮ ಅಧಿಕಾರಿಗಳ, ರಾಜ್ಯಸರ್ಕಾರಗಳ ಕರ್ತವ್ಯ ಪ್ರಜ್ಞೆಗೆ ಹಾಗೂ ಅಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆಯಲ್ಲವೆ? ಈ ಗೂಢಚಾರರ ಸಾಮಾಲುಗಾರರನ್ನು ಸೆರೆಮನೆಗೆ ಕಳಿಸಬಾರದೇಕೆ? ಕಾಶ್ಮೀರವನ್ನು ಪಾಕಿಸ್ತಾನಕ್ಕೊಪ್ಪಿಸಿದರೆ, ಇಲ್ಲಿ ಶಾಂತಿ ನೆಲಸುತ್ತದೆಂಬುದು ಕೆಲವು ಕಪಟ ರಾಷ್ಟ್ರಗಳ ವಾದ. ಎಲ್ಲಿಯವರೆಗೆ ಮುಸ್ಲಿಮರು ಇಲ್ಲಿಯ ಜನಜೀವನದಲ್ಲಿ ಅಣ್ಣತಮ್ಮಂದಿರಂತೆ ಬೆರೆಯುವುದಿಲ್ಲವೊ, ಪಾಕಿಸ್ತಾನದ ದುರಾಕ್ರಮಣದ ವಿರುದ್ಧ

ಪ್ರತಿಭಟಿಸುವುದಿಲ್ಲವೋ ಅಲ್ಲಿಯವರೆಗೆ ಉಗ್ರರಿಂದ ಕಾಟ ತಪ್ಪಿದ್ದಲ್ಲ. ಪ್ರಬಲ ರಾಷ್ಟ್ರಗಳು ಮತ್ತು ವಿಶ್ವಸಂಸ್ಥೆ ಭಯೋತ್ಪಾದಕರನ್ನು ಮತ್ತು ಭಯೋತ್ಪಾದಕ ರಾಷ್ಟ್ರಗಳನ್ನು ಅಣಗಿಸದಿದ್ದರೆ, ಮುಂದಿನ ಶತಮಾನದಲ್ಲಿ ರಕ್ತದ ಕೋಡಿ ಹರಿದೀತೆಂದು ಕಳೆದ ಶತಮಾನದ ಘಟನೆಗಳಿಂದ ಸಾಬೀತಾಗುತ್ತದೆ. ಈ ಸಂದರ್ಭದ ವಿಶ್ವಸಂಸ್ಥೆಯ ನಿರ್ಲಕ್ಷ್ಯ ಸಂದೇಹಾಸ್ಪದವಾಗಿದೆ, ಅದು ನಿರ್ವೀರ್ಯವಾಗಿದೆಯೆ? ನಿಷ್ಕ್ರಿಯವಾಗಿದೆಯೆ? ಅಷ್ಟೇ ಅಲ್ಲ, ಜಗತ್ತಿನ ಎಲ್ಲ ರಾಷ್ಟ್ರಗಳು ಭಯೋತ್ಪಾದಕರನ್ನು ಮತ್ತು ಅವರ ಪ್ರೇರಕರನ್ನು ಸ್ಪಷ್ಟವಾಗಿ ಖಂಡಿಸಿಲ್ಲವೆಂಬುದೂ ನಿಜ. ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ ಉಗ್ರಗಾಮಿಗಳ ಮೇಲೆ ಕ್ರಮಕೈಗೊಳ್ಳುವುದುಂಟೆ? ಕ್ರಮಕೈಗೊಳ್ಳುವುದಾಗಿ ಪ್ರಧಾನಿ ಸಾರಿದ್ದಾರೆ. ಆ ಸಾರಿಕೆಯ ಫಲಶ್ರುತಿ?

ಅಮಾಯಕರಾದ ಸಾಮಾನ್ಯ ಮುಸ್ಲಿಮರಿಗಾಗಲಿ, ಸಾಮಾನ್ಯ ಹಿಂದುಗಳಿಗಾಗಲಿ, ಸಾಮಾನ್ಯ ಕ್ರೈಸ್ತರಿಗಾಗಲಿ ಹಿಂಸೆ, ರಕ್ತಪಾತ, ನರಮೇಧ ಬೇಕಿಲ್ಲ. ಅವರಿಗೆ ಬೇಕಾದ್ದು ಶಾಂತಿ ಹಾಗೂ ಒಳ್ಳೆಯ ಬದುಕು. ಒಳ್ಳೆಯ ಬದುಕೇ ಮಾನವನ ಅಂತಿಮ ಗುರಿಯಲ್ಲವೆ? ರಾಷ್ಟ್ರ ವಿಭಜನೆಯನಂತರ ಲಕ್ಷಾಂತರ ಮಂದಿ ಕಾಶ್ಮೀರಿ ಮುಸ್ಲಿಮ್-ಹಿಂದೂಗಳು ಕೊಲೆಗೊಂಡದ್ದು ಯಾವ ಹಿಂದುವಿಗೆ ಇಷ್ಟವಾದೀತು? ಯಾವ ಮುಸ್ಲಿಮನಿಗೆ ಸಹ್ಯವಾದೀತು? ಮತೀಯ ರಾಜಕೀಯ ಕಲಹಗಳಿಗೆ ರಕ್ತಪಿಪಾಸುಗಳೂ ಭೂಭಕ್ಷಕರೂ ಸ್ವಾರ್ಥಲೋಲುಪರೂ ಆದ ನಾಯಕರು, ಮೂಲ ಭೂತ ವಾದಿಗಳು, ಹಾಗೂ ಪುರೋಹಿತ ಶಾಹಿಯೇ ಕಾರಣವೆಂಬುದರಲ್ಲಿ ಅನುಮಾನವಿಲ್ಲ. ಭಯೋತ್ಪಾದನೆ ಪುರೋಹಿತಶಾಹಿಯ ಒಂದು ಅವತಾರ ತಾನೆ? ಅವರ ಚಿತಾವಣೆ ಪ್ರೇರಣೆಗಳಿಂದ ಉಗ್ರರು ವಂಚನೆಗೊಳಗಾಗುತ್ತಿದ್ದಾರೆ, ಬಲಿಪಶುಗಳಾಗುತ್ತಿದ್ದಾರೆ. ಇದಕ್ಕೆಲ್ಲ ಸೃಷ್ಟಿಕರ್ತನೂ ಜಗದ್ರಕ್ಷನೂ ಸರ್ವಾಂತರ್ಯಾಮಿಯೂ ಆದ ಪರಬ್ರಹ್ಮನ ಅಥವಾ ಅಲ್ಲಾನ ಹೆಸರು ಬಳಸುವುದೇ ದೈವದ್ರೋಹವಾಗುತ್ತದೆ, ಪಾಷಂಡಿತನವಾಗುತ್ತದೆ.

ಇಪ್ಪತ್ತನೆಯ ಶತಮಾನದ ಉತ್ತರಾರ್ಧ ಭಯೋತ್ಪಾದಕರ ಯುಗವಾಗಿದೆ. ಈ ಭಯೋತ್ಪಾದಕರ ಸಮೂಹದಲ್ಲಿ ಮತೀಯ ಮೂಲಭೂತವಾದಿಗಳಿದ್ದಾರೆ, ವರ್ಗ ಮೂಲಭೂತ ವಾದಿಗಳಿದ್ದಾರೆ, ಭಾಷಾ ಮೂಲಭೂತವಾದಿಗಳಿದ್ದಾರೆ. ಮೊದಲನೆಯ ಎರಡು ಗುಂಪಿನವರೇ ಹೆಚ್ಚು. ಅವರು ಏಷಿಯಾ ಮತ್ತುಯೂರೋಪಿನ ರಾಷ್ಟ್ರಗಳಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ತಮ್ಮ ಧ್ಯೇಯ ಸಾಧನೆಗಾಗಿ ಪ್ರಾಣತ್ಯಾಗಕ್ಕೂ ಸಿದ್ಧರಾಗಿರುವ ಈ ಸಾಹಸಿಗರನ್ನು ಮೆಚ್ಚಬೇಕು. ಅವರು ತಮ್ಮ ಸಮಸ್ಯೆಗಳನ್ನು ವಿಶ್ವಸಂಸ್ಥೆ, ಅಂತರರಾಷ್ಟ್ರೀಯ ನ್ಯಾಯಾಲಯ, ಮಾನವಹಕ್ಕು ಮಂಡಲಿಗಳ ಮೂಲಕ ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲವೆ? ಜಗತ್ತಿನ ಎಲ್ಲ ಮತಗಳೂ ಶ್ರೇಷ್ಠವಾದುವೇ. ಮೋಡದಿಂದ ಬರುವ ಮತ್ತು ಗಂಗಾನದಿಯ ಮೂಲದ ನೀರು ಶುಭ್ರ. ಬರಬರುತ್ತ ಅದು ಕೊಳಕಾಗುತ್ತದೆ. ಹಾಗೆಯೇ ಮೂಲದ ಆಚಾರ್ಯರು ಬೋಧಿಸಿದ್ದು ಶುದ್ಧಮತ. ಬರಬರುತ್ತ ಅದು ಅಶುದ್ಧವಾಗುತ್ತದೆ. ಈ ಎಲ್ಲ ಮತಗಳನ್ನು ಮೀರಿದ ವಿಶ್ವ ಮತಕ್ಕೆ ಶರಣಾದರೆ ಮಾತ್ರ ಮುಂದಿನ ಶತಮಾನದಲ್ಲಿ ಜಗತ್ತಿಗೆ ಕ್ಷೇಮ. ಜಗತ್ತಿನ ಎಲ್ಲ ಉಗ್ರರ ನುತಿಮತಿಯಲ್ಲಿ ಮಂಗಳ ಮೂಡಲಿ; ಎಲ್ಲೆಲ್ಲೂ ಶಾಂತಿ ನೆಲಸಲಿ!

ಈಶ್ವರ ಅಲ್ಲಾ ತೇರೇ ನಾಮ್
ಸಬ್‌ಕೋ ಸನ್ಮತಿ ದೇ ಭಗವಾನ್

ದೇ...ಗೌ.

ತ್ರಿಶಂಕು ಲೋಕದಲ್ಲಿ ಸಿಟಿಬಿಟಿ

ಡಾ|| ಎಂ.ಎಸ್.ಎಸ್.ಮೂರ್ತಿ
ಬಿ.-೧೦೪, ಟೆರೇಸ್ ಗಾರ್ಡನ್
ಅಪಾರ್ಟ್‌ಮೆಂಟ್, ೨ನೇ ಮುಖ್ಯ ರಸ್ತೆ
ಬನಶಂಕರಿ ೩ನೇ ಹಂತ
ಬೆಂಗಳೂರು-೫೬೦ ೦೮೫

ಸಮಗ್ರ ಪರಮಾಣ್ವಸ್ತ್ರ ನಿಷೇಧ ಒಪ್ಪಂದದ (comprehensive Test Ban Trenty-CTBT) ಬಗ್ಗೆ ನೀವು ಕೇಳಿರಬಹುದಲ್ಲವೆ? ಅದರ ಮುಖ್ಯ ಉದ್ದೇಶ ಎಲ್ಲ ಬಗೆಯ ಪರಮಾಣು ಅಸ್ತ್ರಗಳ ಪರೀಕ್ಷಾ ಸ್ಫೋಟಗಳನ್ನು ನಿಷೇಧಿಸಿ, ಅವುಗಳ ಹರಡುವಿಕೆಗೆ ಲಗಾಮು ಹಾಕುವುದು. ಈಗ ಮೂರು ವರ್ಷಗಳಿಂದ ಅಮೆರಿಕದ ಅಧ್ಯಕ್ಷ ಕ್ಲಿಂಟನ್ನರು ಈ ಒಪ್ಪಂದದ ಅಂತಾರಾಷ್ಟ್ರೀಯ ಮನ್ನಣೆಗಾಗಿ ಶ್ರಮಿಸುತ್ತಿದ್ದಾರೆ. ದುರದೃಷ್ಟದಿಂದ ಅದೇ ದೇಶದ ಸೆನೆಟ್ ಈ ಒಪ್ಪಂದವನ್ನು, ಅನೇಕ ದಿನಗಳ ಚರ್ಚೆಯ ನಂತರ, ೧೯೯೯ ಅಕ್ಟೋಬರ್ ೧೨ರಂದು ದೃಢೀಕರಿಸಲು ನಿರಾಕರಿಸಿಬಿಟ್ಟಿತು. ಸೆನೆಟ್‌ನ ಈ ನಿರಾಕರಣೆ ಕ್ಲಿಂಟನ್ನರ ಉತ್ಸಾಹಕ್ಕೆ ತಣ್ಣೀರು ಎರಚಿದ್ದೇ ಅಲ್ಲದೇ, ವಿಶ್ವದಲ್ಲಿ ಪರಮಾಣು ಅಸ್ತ್ರಗಳನ್ನು ನಿಷೇಧಿಸುವ ಚಳುವಳಿಗೇ ಹಿನ್ನಡೆ ತಂದಿದೆ. ಅಮೆರಿಕದ ಈಚಿನ ಎಂಬತ್ತು ವರ್ಷಗಳ ಇತಿಹಾಸದಲ್ಲಿ, ಸೆನೆಟ್ ಅಂತಾರಾಷ್ಟ್ರೀಯ ಒಪ್ಪಂದವೊಂದನ್ನು ದೃಢೀಕರಿಸಲು ನಿರಾಕರಿಸಿದ್ದು ಇದೇ ಮೊದಲನೆ ನಿದರ್ಶನ. ಇಷ್ಟು ಮಹತ್ವವಾದ ನಕಾರಾತ್ಮಕ ಮತಕ್ಕೆ ಕಾರಣವಾದರೂ ಏನು?

ಸಿಟಿಬಿಟಿಯ ಹಿನ್ನೆಲೆ : ಎಪ್ಪತ್ತನೆ ದಶಕದ ಪೂರ್ವಾರ್ಧ. ವಿಶ್ವದ ಪ್ರಬಲ ರಾಷ್ಟ್ರಗಳ ನಡುವಿನ ಶೀತಲ ಸಮರ ಶಿಖರವನ್ನೇರಿತ್ತು. ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳು (ಫ್ರಾನ್ಸ್, ಬ್ರಿಟನ್ ಸೇರಿ) ಒಂದು ಧ್ರುವವಾದರೆ, ಸೋವಿಯತ್ ಒಕ್ಕೂಟ ಮತ್ತೊಂದು ಧ್ರುವ. ಈ ಎರಡೂ ಗುಂಪುಗಳ ನಡುವೆ ಪರಮಾಣು ಅಸ್ತ್ರ ಉತ್ಪಾದನೆ ಮತ್ತು ಅವುಗಳ ಉಡಾವಣಾ ವಾಹಕಗಳ ತಯಾರಿಕೆಯಲ್ಲಿ ತೀವ್ರ ಪೈಪೋಟಿ ನಡೆಯುತ್ತಿತ್ತು. ಎಂಬತ್ತರ ದಶಕದ ವೇಳೆಗೆ ಈ ರಾಷ್ಟ್ರಗಳ ಬತ್ತಳಿಕೆಯಲ್ಲಿ ಪರಮಾಣು ಬಾಂಬ್, ಹೈಡ್ರೊಜನ್ ಬಾಂಬ್‌ಗಳೇ ಅಲ್ಲದೇ, ಅತ್ಯಾಧುನಿಕವಾದ ಮತ್ತು ಅತಿ ಪರಿಣಾಮಕಾರಿಯಾದ ನ್ಯೂಟ್ರಾನ್ ಬಾಂಬ್ ಕೂಡ ಸೇರಿತು. ಈ ಮಧ್ಯೆ ಚೈನಾ ತನ್ನದೇ ಆದ ಧೋರಣೆಯಿಂದ ಪರಮಾಣು ಅಸ್ತ್ರ ಸಂಗ್ರಹ ಕಾರ್ಯದಲ್ಲಿ ಮುನ್ನಡೆಯುತ್ತಿತ್ತು. ಸೋವಿಯತ್ ಒಕ್ಕೂಟ ಛಿದ್ರವಾದ ಬಳಿಕ ಶೀತಲ ಸಮರಕ್ಕೆ ಒಂದು ವಿಧವಾದ ಮಂಗಳ ಹಾಡಿದಂತಾಯಿತು. ಅಂದಿನಿಂದ ಜಾಗತಿಕ ರಾಜಕೀಯ ರಂಗದಲ್ಲಿ ಅಮೆರಿಕಾ ಏಕಮೇವ ನಾಯಕತ್ವವನ್ನು ವಹಿಸಿಕೊಂಡಿತು. ಆಗ ಅದಕ್ಕೆ ಸವಾಲಾಗಬಹುದಾದ ಏಕೈಕ

ರಾಷ್ಟ್ರವೆಂದರೆ ಚೈನಾ . ಆದರೆ ಪರಮಾಣು ಅಸ್ತ್ರತಂತ್ರ ವಿದ್ಯೆಯಲ್ಲಿ ಚೈನಾದೇಶ, ಅಮೆರಿಕಾಕ್ಕಿಂತ ಬಹಳ ಹಿಂದಿತ್ತು.

ಆ ಸಂದರ್ಭದಲ್ಲಿ ಅಮೆರಿಕದ ವಿಜ್ಞಾನಿಗಳು ಹೊಸ ಪರಮಾಣು ಅಸ್ತ್ರ ವಿನ್ಯಾಸಗಳಲ್ಲಿ ಬಹಳ ಮಟ್ಟಿಗೆ ಸಾಧನೆ ಪಡೆದಿದ್ದರು. ಪರೀಕ್ಷಾ ಸ್ಫೋಟವಿಲ್ಲದೇ ಹೊಸ ವಿನ್ಯಾಸಗಳ ಕ್ರಿಯಾಶೀಲತೆಯನ್ನು ಖಾತರಿ ಪಡಿಸಿ ಕೊಳ್ಳಲು ಬೇಕಾಗುವ ಕಂಪ್ಯೂಟರ್ ಸಂಕೇತಗಳನ್ನು ವೃದ್ಧಿಗೊಳಿಸಿ ಕೊಂಡಿದ್ದರು. ಅಷ್ಟೇ ಅಲ್ಲದೆ, ಉಗ್ರಾಣದಲ್ಲಿಯ ಪರಮಾಣ ಅಸ್ತ್ರಗಳ ಕ್ರಿಯಾಶೀಲತೆಯನ್ನು ಕಾಲದಿಂದ ಕಾಲಕ್ಕೆ ಸ್ಫೋಟವಿಲ್ಲದೇ ಪರೀಕ್ಷಿಸಲು Stockpile Stewardship (ದಾಸ್ತಾನು ಉಸ್ತುವಾರಿ) ಎಂಬ ಕಾರ್ಯವನ್ನೂ ನಿರೂಪಿಸಿ ಕೊಂಡಿದ್ದರು. ಇದಕ್ಕಾಗಿ ಹದಿನೈದು ವರ್ಷಗಳ ಅವಧಿಯಲ್ಲಿ ೬೭ ಬಿಲಿಯನ್ ಡಾಲರ್‌ಗಳ ಆಯವ್ಯಯ ಲಭ್ಯವಾಗಿದ್ದಿತು! ಈ ವೇಳೆಗಾಗಲೇ ಅಮೆರಿಕದ ನಿಯಂತ್ರಣದಲ್ಲಿ, ಭೂಮಂಡಲ ವನ್ನು ಅನೇಕ ಬಾರಿ ನಾಶಮಾಡಲು ಸಾಕಾಗುವಷ್ಟು ಪರಮಾಣ ಅಸ್ತ್ರಗಳ ಶೇಖರಣೆ ಇತ್ತು. ಇಷ್ಟೆಲ್ಲ ಅಲಂಕೃತವಾದ ಅಮೆರಿಕ, ಮಾರ್ಜಾಲ ಸನ್ಯಾಸದಂತೆ, ಸೆಪ್ಟೆಂಬರ್ ೧೯೯೨ ರಲ್ಲಿ ತಾನು ಇನ್ನುಮುಂದೆ ಪರಮಾಣು ಅಸ್ತ್ರ ಸ್ಫೋಟಗಳನ್ನು ಸ್ವಯಂ ಪ್ರೇರಿತವಾಗಿ ನಿಷೇಧಿಸುವುದಾಗಿ ಘೋಷಿಸಿತು. ಈ ಘೋಷಣೆಯ ಅಂತಾರಾಷ್ಟ್ರೀಯ ಸ್ವರೂಪವೇ ಸಿಟಿಬಿಟಿಯಾಗಿ ಸೆಪ್ಟೆಂಬರ್ ೧೯೯೬ರಲ್ಲಿ ವಿಶ್ವಸಂಸ್ಥೆಯಲ್ಲಿ ಮಂಡಿತವಾಯಿತು.

ಇದರ ಪ್ರಕಾರ ಯಾವ ರಾಷ್ಟ್ರವೂ ಯಾವ ವಿಧವಾದ (ಭೂಗರ್ಭದಲ್ಲಿ, ಸಮುದ್ರದಲ್ಲಿ, ಅಥವಾ ವಾತಾವರಣದಲ್ಲಿ) ಬೈಜಿಕ (nuclear) ಸ್ಫೋಟವನ್ನು ನಡೆಸಬಾರದು. ಮೇಲ್ಮೈಯಲ್ಲಿ ಇದರ ಉದ್ದೇಶ, ವಿಕಿರಣದ ಪ್ರಸರಣವನ್ನು ತಪ್ಪಿಸುವುದು. ಆದರೆ ಅದರ ಹಿನ್ನೆಲೆಯ ರಾಜಕೀಯ ಇಂಗಿತವೇ ಬೇರೆ ಇದ್ದಿತು- ಚೈನಾ, ಭಾರತ, ಪಾಕಿಸ್ತಾನ, ಉತ್ತರ ಕೊರಿಯ, ಇರಾನ್, ಇರಾಕ್ ಮುಂತಾದ ರಾಷ್ಟ್ರಗಳು ಬೈಜಿಕತಂತ್ರ ವಿದ್ಯೆಯಲ್ಲಿ ಬೈಜಿಕ ತಂತ್ರವಿಜ್ಞಾನ ಮುಂದುವರಿಯುವುದನ್ನು ಸದಾಕಾಲಕ್ಕೂ ತಡೆಗಟ್ಟುವುದು. ಅಷ್ಟೇ ಅಲ್ಲದೆ ಅಧ್ಯಕ್ಷ ಕ್ಲಿಂಟನ್ನರ ವಿದೇಶ ನೀತಿಯಲ್ಲಿ ಇದೊಂದು ಪ್ರಶಂಸನೀಯ ಸಾಧನೆಯಾಗುವುದಿತ್ತು.

ಅಂದಿನಿಂದ ಇಂದಿನವರೆಗೆ ಅಮೆರಿಕಾ, ರಷ್ಯಾ, ಬ್ರಿಟನ್, ಚೀನಾ, ಫ್ರಾನ್ಸ್ ಸೇರಿ ೧೫೧ ರಾಷ್ಟ್ರಗಳು ಈ ಒಪ್ಪಂದಕ್ಕೆ ಸಹಿ ಹಾಕಿವೆ. ಇಲ್ಲೂ ಒಂದು ಚತುರತೆಯೇ ನಡೆಯಿತು. ಫ್ರಾನ್ಸ್ ಮತ್ತು ಚೈನಾ ದೇಶಗಳು ತಮಗೆ ಅವಶ್ಯವೆನಿಸಿದ ಬೈಜಿಕಪರೀಕ್ಷಾ ಸ್ಫೋಟಗಳನ್ನು ಭೂಗರ್ಭದಲ್ಲಿ ೧೯೯೫ ಮತ್ತು ೧೯೯೬ರಲ್ಲಿ ಪೂರೈಸಿ ಅನಂತರವೇ ಒಪ್ಪಂದಕ್ಕೆ ಸಹಿಹಾಕಿದುವು- ಅಕ್ಕಿಯು ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ ಎಂಬಂತೆ (ಭಾರತದಲ್ಲೂ, ಪಿ.ವಿ.ನರಸಿಂಹರಾಯರ ಸರ್ಕಾರವು ೧೯೯೫ ಬೈಜಿಕ ಪರೀಕ್ಷಾ ಸ್ಫೋಟಕ್ಕೆ ಸಿದ್ಧತೆ ನಡೆಸಿ ಅನಂತರ ಹಿನ್ನಡೆಯಿತೆಂಬುದು ಈಗ ಇತಿಹಾಸವಾಗಿದೆ.

ಒಪ್ಪಂದ, ಕಾರ್ಯರೂಪಕ್ಕೆ ಬರಬೇಕಾದರೆ ಪರಮಾಣುಅಸ್ತ್ರ ಉತ್ಪಾದನಾ ಸಾಮರ್ಥ್ಯ ಹೊಂದಿರುವ ಎಲ್ಲಾ ೪೪ ದೇಶಗಳ ಪ್ರಚಲಿತ ಸರ್ಕಾರಗಳೂ ಸಹಿ ಹಾಕುವುದೇ ಅಲ್ಲದೇ, ಆ ದೇಶದ ಪಾರ್ಲಿಮೆಂಟ್‌ಗಳು ಒಪ್ಪಂದ ವನ್ನು ದೃಢೀಕರಿಸಬೇಕು. ಈ ಗುಂಪಿನಲ್ಲಿ ಭಾರತ ಮತ್ತು ಪಾಕಿಸ್ತಾನವೂ ಸೇರಿವೆ. ಇದುವರೆಗೆ ಬ್ರಿಟನ್, ಫ್ರಾನ್ಸ್ ಸೇರಿದಂತೆ ಈ ಗುಂಪಿನ ೨೧ ರಾಷ್ಟ್ರಗಳು ಒಪ್ಪಂದವನ್ನು-ದೃಢೀಕರಿಸಿವೆ. ಅಮೆರಿಕ, ರಷ್ಯ, ಚೈನಾ ದೇಶಗಳ ಸರ್ಕಾರಗಳು ಒಪ್ಪಂದಕ್ಕೆ ಸಹಿ ಹಾಕಿವೆ. ಆದರೆ ಇನ್ನೂ ದೃಢೀಕರಿಸಿಲ್ಲ. ಭಾರತ ಮತ್ತು ಪಾಕಿಸ್ತಾನ ಒಪ್ಪಂದಕ್ಕೆ ಸಹಿಯನ್ನು ಕೂಡ ಹಾಕಿಲ್ಲ.

ಪೂರ್ವಯೋಜನೆಯ ಪ್ರಕಾರ, ಅಕ್ಟೋಬರ್ ೧೯೯೯ರ ಮಧ್ಯದಲ್ಲಿ ಅಮೆರಿಕದ ಸೆನೆಟ್ ಒಪ್ಪಂದವನ್ನು ದೃಢೀಕರಿಸುವುದು; ಅನಂತರ ಅದೇ ತಿಂಗಳು ಕೊನೆಯಲ್ಲಿ ಜರಗುವ ಸಿಟಿಬಿಟಿ ಸಂಘಟನಕಾರರ ಸಮ್ಮೇಳನದಲ್ಲಿ ಇತರ ರಾಷ್ಟ್ರಗಳ ಮೇಲೆ ಒಪ್ಪಂದಕ್ಕೆ ಸಹಿಮಾಡಿ ಅದನ್ನು ದೃಢೀಕರಿಸಲು ಒತ್ತಾಯ ತರುವುದು ಎಂದಿತ್ತು. ಆದರೆ ಪಟಾಕಿ ಮೊದಲನೆಯ ಹಂತದಲ್ಲಿಯೇ ''ಟುಸ್'' ಎಂದಿದೆ. ಅಕ್ಟೋಬರ್ ೧೩ರಂದು ರಿಪಬ್ಲಿಕನ್ ಬಹುಮತದ ಸೆನೆಟ್ ಒಪ್ಪಂದವನ್ನು ದೃಢೀಕರಿಸಲು ೫೧-೪೮ರ ಮತದಲ್ಲಿ ನಿರಾಕರಿಸಿದೆ. ಇದರ ಹಿನ್ನೆಲೆಯ ಸಂಗತಿ ಜಾಗತಿಕ ರಾಜಕೀಯ ನಾಟಕದಲ್ಲಿ ಒಂದು ರೋಮಾಂಚಕ ಅಧ್ಯಾಯವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಪರಮಾಣು ಬೇಹುಗಾರಿಕೆ : ಚೀನಾ ದೇಶವು ೧೯೯೨ ರಿಂದ ೧೯೯೬ರ ನಡುವೆ ಅನೇಕ ಹೊಸ ಪೀಳಿಗೆಯ ಬೈಜಿಕ ಸ್ಫೋಟ ಪರೀಕ್ಷೆಗಳನ್ನು ನಡೆಸಿತು. ಚೀನಾ ವೀಕ್ಷಕರಿಗೆ ಇದರಿಂದ ಆಶ್ಚರ್ಯ ಮಾತ್ರವೇ ಅಲ್ಲ, ಅನುಮಾನವೂ ಉಂಟಾಯಿತು- ಅಮೆರಿಕದ ಗುಪ್ತ ಬೈಜಿಕಾಸ್ತ್ರ ತಂತ್ರವಿದ್ಯೆ ಚೀನಾಕ್ಕೆ ಸೇರಿದೆಯೆ ಎಂದು. ಆ ಅನುಮಾನ ಖಾತರಿಯಾದದ್ದೂ ಒಂದು ರೋಮಾಂಚಕ ಪ್ರಕರಣ . ೧೯೯೫ರಲ್ಲಿ ಒಬ್ಬಾತ, ಚೈನಾ ಸರ್ಕಾರದ ಒಂದು ಅಧಿಕೃತ ದಾಖಲೆಯನ್ನು ಅಮೆರಿಕದ CIA ಅಧಿಕಾರಿಗಳ ಕೈಗಿಟ್ಟ ನಂತೆ. ಆ ದಾಖಲೆಯ ಮೇಲೆ ''ರಹಸ್ಯ'' ಎಂದು ನಮೂದಿಸಲಾಗಿತ್ತು. ಅದನ್ನು ಪರಿಶೀಲಿಸಿದ CIA ಅಧಿಕಾರಿಗಳಿಗೆ ಪರಮಾಶ್ಚರ್ಯವೇ ಕಾದಿತ್ತು. ಅದರಲ್ಲಿ ಅಮೆರಿಕದ W-88, Trident D5 ಎಂಬ ಬೈಜಿಕಾಸ್ತ್ರ ಸಮೂಹದ ಬಗ್ಗೆ ಎಲ್ಲ ವಿನ್ಯಾಸ ಮತ್ತು ಮಾಹಿತಿಗಳಿದ್ದುವು. W-88 ಅಮೆರಿಕದ ಅತ್ಯಂತ ಸಂಕೀರ್ಣ ಬೈಜಿಕಾಸ್ತ್ರ -ನ್ಯೂಟನ್ ಬಾಂಬ್. ಅದನ್ನು D5 ಎಂಬ ಉತ್‌ಕ್ಷಿಪಣಿಗೆ ಅಳವಡಿಸಿ, Trident ಎಂಬ ಹೆಸರಿನ ಪರಮಾಣು ಜಲಾಂತರ್ಗಾಮಿ ನೌಕೆಯಿಂದ ಉಡಾಯಿಸಬಹುದು. ಇದೆಲ್ಲದರ ಬಗ್ಗೆ ದಾಖಲೆಯಲ್ಲಿ ಮಾಹಿತಿ ಇದ್ದಿತು. ಇದನ್ನು CIA ಕೈ ಸೇರಿಸಿದ ಬೇಹುಗಾರ ಯಾರು ? CIA ವರದಿಯ ಪ್ರಕಾರ, ಅವನನ್ನು ಚೀನಾ ದೇಶವೇ ಕಳುಹಿಸಿತ್ತು. ಈ ಮಾಹಿತಿ ಸೋರಿಕೆಯ ಮೂಲ ಹುಡುಕಲು CIA, FBI ಮತ್ತು

ಅಮೆರಿಕದ ವಿಜ್ಞಾನಿಗಳ ಒಂದು ತಂಡ ತನಿಖೆ ಪ್ರಾರಂಭಿಸಿದುವು. ಅವರು ಕಂಡದ್ದು ಸುಮಾರು ೨೫ ವರ್ಷಗಳಿಂದ ನಡೆಯುತ್ತಿದ್ದ ಪರಮಾಣು ಬೇಹುಗಾರಿಕೆ.

ಅಮೆರಿಕದ ಬೈಜಿಕಾಸ್ತ್ರ ತಂತ್ರ ವಿದ್ಯೆಯ ಕಾಶಿ, ರಾಮೇಶ್ವರಗಳೆನಿಸುವ ನಾಲ್ಕು ಪ್ರಯೋಗ ಶಾಲೆಗಳು ಲಾಸ್ ಅಲಮೊಸ್, ಲಾರೆನ್ಸ್ ಲಿವರ್‌ಮೊರ್, ಓಕ್‌ರಿಡ್ಜ್ ಮತ್ತು ಸಾಂಡಿಯ ಎಂಬಲ್ಲಿವೆ. ಈ ಪ್ರಯೋಗ ಶಾಲೆಗಳಲ್ಲಿ ಅನೇಕ ವಿದೇಶೀ ಸಂಜಾತ ವಿಜ್ಞಾನಿಗಳೂ ಕಾರ್ಯನಿರತರಾಗಿರುತ್ತಾರೆ. ಅವರೆಲ್ಲಾ ಅಮೆರಿಕದ ಪ್ರಜೆಗಳು. ಚೀನಾ ಸರ್ಕಾರವು, ಇವರಲ್ಲಿ ಚೀನೀಯರನ್ನು ಹುಡುಕಿ ಆಗಾಗ್ಗೆ ಅವರನ್ನು ಸ್ವದೇಶಕ್ಕೆ ಆಹ್ವಾನಿಸುವುದು, ಚೀನೀ ವಿಜ್ಞಾನಿಗಳೊಡನೆ ಸಂಪರ್ಕ ಸಾಧ್ಯವಾಗಿಸುವುದು, ಅವರಿಂದ ಉಪನ್ಯಾಸ ಗಳನ್ನು ಏರ್ಪಡಿಸುವುದು, ಅವರ ಬುದ್ಧಿ ಶಕ್ತಿಯನ್ನು ಹೊಗಳಿ, ಉಪಚರಿಸುವುದು ಮುಂತಾದ ಕಾರ್ಯಕ್ರಮ ಗಳಿಂದ ತನಗೆ ಬೇಕಾದ ಮಾಹಿತಿಗಳ ವರ್ಗಾವಣೆಗೆ ಅವಕಾಶ ಕಲ್ಪಿಸಿಕೊಳ್ಳುತ್ತದೆ. ಅಂಥ ವಿಜ್ಞಾನಿ ಗಳಲ್ಲಿ ಪೀಟರ್‌ಲೀ ಒಬ್ಬ. ಆತ ೧೯೭೩ ರಿಂದ ೧೯೯೭ರವರೆಗೆ ಲಾರೆನ್ಸ್ ಲಿವರ್‌ಮೊರ್ ಮತ್ತು ಲಾಸ್ ಅಲಮೊಸ್ ಪ್ರಯೋಗ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದನಂತೆ. ಸುಮಾರು ೧೯೯೦ರ ವೇಳೆಗೇ ಆತನ ಮೇಲೆ FBIಗೆ ಗುಮಾನಿ ಇದ್ದರೂ ಅದನ್ನು ಸಾದರಪಡಿಸಲು ಸಾಧ್ಯವಾಗಿರಲಿಲ್ಲ. ಕೊನೆಗೆ ೧೯೯೭ರಲ್ಲಿ ಆತನ ಮೇಲೆ ರಹಸ್ಯ ಮಾಹಿತಿಗಳನ್ನು ಚೀನಾಕ್ಕೆ ವರ್ಗಾಯಿಸಿದನೆಂದು ಅಪವಾದವನ್ನು ಹೊರಿಸಲಾಯಿತು. FBI ನಡೆಸಿದ ವಿಚಾರಣೆಯಲ್ಲಿ ಲೀ ತಾನು ನ್ಯೂಟ್ರಾನ್ ಬಾಂಬ್ ಮತ್ತು ಜಲಾಂತರ್ಗಾಮಿ ನೌಕೆಗಳ ಬಗ್ಗೆ ಚೀನಾಕ್ಕೆ ಮಾಹಿತಿ ವರ್ಗಾಯಿಸಿದ್ದನ್ನು ಒಪ್ಪಿಕೊಂಡ. ಡಿಸೆಂಬರ್ ೧೯೯೮ರಲ್ಲಿ ಪೀಟರ್ ಲೀ ಯನ್ನು ಕೆಲಸದಿಂದ ವಜಾ ಮಾಡಲಾಯಿತು. ಇತರ ತನಿಖೆಗಳಿಂದ ಇನ್ನೂ ಏಳು ವಿಧವಾದ ಬೈಜಿಕಾಸ್ತ್ರಗಳ ಬಗ್ಗೆ ರಹಸ್ಯ ಮಾಹಿತಿಗಳು ಚೀನಾಕ್ಕೆ ವರ್ಗಾಯಿಸ ಲ್ಪಟ್ಟಿದ್ದೇವೆಂದು ತಿಳಿಯಿತು.

ಇಪ್ಪತ್ತೈದು ವರ್ಷಗಳಿಂದ ನಡೆಯುತ್ತಿದ್ದ ಈ ಬೇಹುಗಾರಿಕೆಯಿಂದ ಚೀನಾದ ಬೈಜಿಕಾಸ್ತ್ರ ತಂತ್ರವಿದ್ಯೆ ಅನೇಕ ವರ್ಷಗಳಷ್ಟು ಮುಂದುವರಿದು, ಅಮೆರಿಕ ಮತ್ತು ಚೀನಾದ ನಡುವಿನ ಅಂತರ ಬಹಳ ಮಟ್ಟಿಗೆ ಕಡಿಮೆಯಾಗಿದೆ ಎಂದು ಕೆಲವು ತಜ್ಞರ ಅಭಿಪ್ರಾಯ.

ಒಪ್ಪಂದ ಸ್ವೀಕಾರದ ಸತ್ಯ ಪರೀಕ್ಷೆ: ಸಿಟಿಬಿಟಿಯನ್ನು ನಿರಾಕರಿಸಲು ರಿಪಬ್ಲಿಕನ್ ಸೆನೆಟರ್‌ಗಳು ಮತ್ತೊಂದು ಕಾರಣವನ್ನು ಮುಂದಿಟ್ಟದ್ದಾರೆ. ಒಪ್ಪಂದವನ್ನು ಉಲ್ಲಂಘಿಸಿ, ಕಿರುಪ್ರಮಾಣದ ಪರೀಕ್ಷಾ ಸ್ಫೋಟಗಳನ್ನು ಯಾವುದಾದರೂ ರಾಷ್ಟ್ರವು ನಡೆಸಿದರೆ ಅದನ್ನು ಪತ್ತೆ ಹಚ್ಚಲು ಬೇಕಾದ ಪರಿಣತಿ ಸಧ್ಯದಲ್ಲಿ ಲಭ್ಯವಿಲ್ಲವೆಂದು ಅವರ ಅಭಿಪ್ರಾಯ. ಹಾಗಿದ್ದರೆ ಸ್ಫೋಟಗಳನ್ನು ಪತ್ತೆ ಹಚ್ಚಲು ಈಗಿರುವ ವ್ಯವಸ್ಥೆ ಏನು? ಪರೀಕ್ಷಾ ಸ್ಫೋಟಗಳನ್ನು ಭೂಗರ್ಭದಲ್ಲಿ, ಸಮುದ್ರ ದಲ್ಲಿ ಅಥವಾ ವಾತಾವರಣದಲ್ಲಿ ನಡೆಸಬಹು ದಲ್ಲವೆ? ಒಪ್ಪಂದದ ಪ್ರಕಾರ ಎಲ್ಲ ವಿಧವಾದ

ಸ್ಫೋಟಗಳನ್ನೂ ಪತ್ತೆ ಹಚ್ಚಲು ಒಂದು ಅಂತಾರಾಷ್ಟ್ರೀಯ ದತ್ತ ಕೇಂದ್ರವನ್ನು (International Data Center-IDC) ಆಸ್ಟ್ರಿಯ ದೇಶದ ರಾಜಧಾನಿ ವಿಯನ್ನದಲ್ಲಿ ಸ್ಥಾಪಿಸಲಾಗುತ್ತಿದೆ. ಈ ಕೇಂದ್ರದ ನಿಯಂತ್ರಣದಲ್ಲಿ, ವಿಶ್ವಾದ್ಯಂತ ಯುಕ್ತ ಉಪಕರಣ ಹೊಂದಿರುವ ಸುಮಾರು ೩೫೦ ಪತ್ತೆ ಠಾಣೆಗಳು ಬರಲಿವೆ. ಈ ಜಾಲದ ಪ್ರತಿಯೊಂದು ಠಾಣೆಯೂ ಮಾಹಿತಿ ಕೇಂದ್ರದೊಡನೆ ಉಪಗ್ರಹದ ಮೂಲಕ ಸಂಪರ್ಕಹೊಂದಿರುತ್ತವೆ. ಆಗ ವಿಶ್ವದ ಯಾವ ಕೊಣೆಯಲ್ಲಾಗಲೀ ಬೈಜಿಕಾಸ್ತ್ರ ಪರೀಕ್ಷಾ ಸ್ಫೋಟವಾದರೆ, ಅದನ್ನು ಹತ್ತಿರದ ಠಾಣೆಗಳು ಪತ್ತೆಹಚ್ಚಿ, ಮಾಹಿತಿಯನ್ನು IDCಗೆ ವರದಿ ಮಾಡಲು ಸಾಧ್ಯವಾಗುತ್ತದೆ. ಈಗಾಗಲೇ ಒಂದು ಆದ್ಯರೂಪ ದತ್ತ ಕೇಂದ್ರ (Prototype InternationalDate Center-PIDC) ಅಮೆರಿಕದ ವಾಷಿಂಗ್‌ಟನ್‌ನಲ್ಲಿ ಸ್ಥಾಪಿತವಾಗಿದೆ. ಇದರ ಅಧೀನದಲ್ಲಿ ಸುಮಾರು ೧೦೦ ಠಾಣೆಗಳು ಕಾರ್ಯ ನಿರ್ವಹಿಸುತ್ತಿವೆ.

ಕಳೆದ ಮೇ ೧೧ರಂದು ಭಾರತ ನಡೆಸಿದ ಪರೀಕ್ಷಾ ಸ್ಫೋಟಗಳನ್ನು ಈ ಜಾಲದ ಕೆಲವು ಠಾಣೆಗಳು ಪತ್ತೆ ಹಚ್ಚಿದುವು. ಆದರೆ ಮೇ ೧೩ರಂದು ನಡೆಸಿದ ಎರಡು ಕಿರು ಸ್ಫೋಟಗಳನ್ನು ಪತ್ತೆ ಹಚ್ಚಲು ಈ ಜಾಲಕ್ಕೆ ಸಾಧ್ಯವಾಗಲಿಲ್ಲ. ಇದು ರಿಪಬ್ಲಿಕನ್ ಸೆನೆಟರ್‌ಗಳ ಅನುಮಾನಕ್ಕೆ ಇಂಬು ಕೊಟ್ಟಿದೆ. ಇಂತಹ ಸಂದರ್ಭದಲ್ಲಿ ಸಿಟಿಬಿಟಿಯನ್ನು ದೃಢೀಕರಿಸಿ, ಹೊಸ ಬೈಜಿಕಾ ಸ್ಫೋಟ ಪರೀಕ್ಷೆಗಳನ್ನು ಕೈ ಬಿಡಬೇಕಾಗಿ ಬಂದರೆ ಅದರಿಂದ ರಾಷ್ಟ್ರದ ಭದ್ರತೆಗೆ ಧಕ್ಕೆಯಾಗುವುದೆಂದು ಅವರು ನಂಬಿ ಒಪ್ಪಂದವನ್ನು ನಿರಾಕರಿಸಿದ್ದಾರೆ. ಈಗ ಉಳಿದಿರುವ ಒಂದೇ ಒಂದು ನಿರೀಕ್ಷೆಯೆಂದರೆ, ಜನವರಿ ೨೦೦೧ ರಲ್ಲಿ ಹೊಸ ಅಧ್ಯಕ್ಷರು ಮತ್ತು ಹೊಸ ಕಾಂಗ್ರೆಸ್ ಅಧಿಕಾರ ವಹಿಸಿಕೊಂಡಾಗ ಒಪ್ಪಂದವನ್ನು ದೃಢೀಕರಿಸಬಹುದೆಂಬ ಆಶೆ. ಅದುವರೆಗೂ ಸಿಟಿಬಿಟಿ ಒಂದು ಅನಿಶ್ಚಿತ ಸ್ಥಿತಿಯಲ್ಲಿ ನೇತಾಡುತ್ತಿರುತ್ತದೆ.

ಈ ಮಧ್ಯೆ ಸಿಟಿಬಿಟಿ ಸಂಚಾಲಕ ರಾಷ್ಟ್ರಗಳು ಅಕ್ಟೋಬರ್ ೧೯೯೯ರಲ್ಲಿ ವಿಯನ್ನದಲ್ಲಿ ಸಭೆ ಸೇರಿ, ವಿಶ್ವಸಂಸ್ಥೆಯ ಎಲ್ಲ ರಾಷ್ಟ್ರಗಳೂ ಅದಕ್ಕೆ ಸಹಿಹಾಕಿ ದೃಢೀಕರಿಸಬೇಕೆಂದು ಕರೆನೀಡಿವೆ. ಅದೇ ಸಭೆಯಲ್ಲಿ ಅಮೆರಿಕದ ಪ್ರತಿನಿಧಿ ಜೆಸ್ಸಿ ಹೆಲ್ಮ್ಸರು ತಮ್ಮ ದೇಶ ಸಿಟಿಬಿಟಿ ಶರತ್ತುಗಳಿಗೆ ಬಂಧಿತವೆಂದೂ, ಮುಂದಿನ ಕಾಂಗ್ರೆಸ್ ಅದನ್ನು ಖಂಡಿತವಾಗಿಯೂ ದೃಢೀಕರಿಸುವುದೆಂದೂ ಆಶೆ ವ್ಯಕ್ತಪಡಿಸಿದ್ದಾರೆ. ರಷ್ಯ ಮತ್ತು ಚೀನಾ ಪ್ರತಿನಿಧಿಗಳು ಅಮೆರಿಕದ ನಿರಾಕರಣೆಯ ಬಗ್ಗೆ ನಿರಾಶೆಯನ್ನು ವ್ಯಕ್ತಪಡಿಸಿ, ಅದರಿಂದ ಬೈಜಿಕಾಸ್ತ್ರ ಪ್ರಸರಣ ನಿರ್ಬಂಧನೆಗೆ ಧಕ್ಕೆ ಉಂಟಾಗಿದೆ ಎಂದು ಹೇಳಿದ್ದಾರೆ. ಭಾರತ ಈ ಸಭೆಯಲ್ಲಿ ಹಾಜರಿರಲಿಲ್ಲ.

ಭಾರತದ ಧೋರಣೆ : ಈಗ ಸುಮಾರು ಅರ್ಧಶತಮಾನದಿಂದಲೂ ಭಾರತ ಪೂರ್ಣ ಪರಮಾಣು ನಿಶ್ಶಸ್ತ್ರೀಕರಣಕ್ಕಾಗಿ ಶ್ರಮಿಸುತ್ತಿದೆ. ಆದರೂ ಭಾರತ ಸಿಟಿಬಿಟಿಗೆ ಸಹಿ ಹಾಕದೇ ಇರುವುದು ಮಾತ್ರವೇ ಅಲ್ಲ, ಅದನ್ನು ವಿರೋಧಿಸುತ್ತಲೂ ಇದೆ.

ಇದೊಂದು ವಿಪರ್ಯಾಸವೆಂದು ಕಂಡು ಬರುವುದೆ? ಅದಕ್ಕೆ ಪ್ರಬಲವಾದ ಕಾರಣಗಳಿವೆ. ಈ ಒಪ್ಪಂದ, ಪರೀಕ್ಷಾ ಸ್ಫೋಟವನ್ನು ನಿಷೇಧಿಸುತ್ತದೆಯೇ ಹೊರತು, ಬೈಜಿಕಾಸ್ತ್ರ ಉತ್ಪಾದನೆ ಮತ್ತು ಸಂಗ್ರಹಣೆಯನ್ನಲ್ಲ. ಒಪ್ಪಂದ ಜಾರಿಗೆ ಬಂದಮೇಲೂ ಪಂಚ ಬೈಜಿಕಾಸ್ತ್ರ ರಾಷ್ಟ್ರಗಳು (ಅಮೆರಿಕ, ಬ್ರಿಟನ್, ಫ್ರಾನ್ಸ್, ರಷ್ಯ, ಚೈನ) ಪರೀಕ್ಷಾ ಸ್ಫೋಟ ನಡೆಸದೇ ತಮ್ಮ ಸಂಗ್ರಹಣೆಯನ್ನು ವೃದ್ಧಿಪಡಿಸಿಕೊಳ್ಳುವುದರಲ್ಲಿ ಯಾವ ರೀತಿಯ ಅಭ್ಯಂತರವೂ ಇಲ್ಲ. ಭಾರತದ ದೃಷ್ಟಿಯಲ್ಲಿ ಇದು ಪಕ್ಷಪಾತ. ಪರೀಕ್ಷಾ ಸ್ಫೋಟಗಳನ್ನು ನಿಷೇಧಿಸುವ ಜೊತೆಗೆ, ಉತ್ಪಾದನೆಯನ್ನೂ ಸ್ಥಗಿತಗೊಳಿಸಿ, ಸಂಗ್ರಹಣೆಯನ್ನು ಸಮಯ ನಿರ್ಧರಿತವಾಗಿ ನಾಶಮಾಡಲು ಬೈಜಿಕಾಸ್ತ್ರ ರಾಷ್ಟ್ರಗಳು ಒಪ್ಪಬೇಕೆಂದು ಭಾರತದ ಪಟ್ಟು. ಇದಕ್ಕೆ ಸ್ವಾಭಾವಿಕವಾಗಿಯೇ ಬೈಜಿಕಾಸ್ತ್ರ ರಾಷ್ಟ್ರಗಳ ಸಹಯೋಗ ಇಲ್ಲ.

ಆದರೆ, ಕಳೆದ ವರ್ಷ ಭಾರತ ಕೈಕೊಂಡ ಪರೀಕ್ಷಾ ಸ್ಫೋಟಗಳ ನಂತರ ಪರಿಸ್ಥಿತಿ ಬದಲಾಯಿಸಿದೆ. ಒಪ್ಪಂದಕ್ಕೆ ಸಹಿ ಹಾಕುವಂತೆ ಭಾರತದ ಮನ ಒಲಿಸಲು ಅಮೆರಿಕ ಸರ್ವ ಪ್ರಯತ್ನ ಮಾಡುತ್ತಿದೆ. ಭಾರತದ ವಿದೇಶಾಂಗ ಸಚಿವ ಜಸ್ವಂತ್ ಸಿಂಗರು ಅಮೆರಿಕದ ವಿದೇಶಾಂಗ ಉಪ ಕಾರ್ಯದರ್ಶಿಯೊಡನೆ ಅನೇಕ ಸುತ್ತು ಮಾತುಕತೆ ನಡೆಸಿ, ಈಗ ಎರಡೂ ರಾಷ್ಟ್ರಗಳ ನಡುವೆ ಸ್ವಲ್ಪಮಟ್ಟಿನ ಒಡಂಬಡಿಕೆ ಬಂದಂತಿದೆ. ಈಚಿನ ಸುದ್ದಿಯ ಪ್ರಕಾರ ಅಮೆರಿಕಾ, ಭಾರತದ ಮೇಲೆ ಹೊರೆಸಿದ್ದ ಅನೇಕ ಆರ್ಥಿಕ ನಿರ್ಬಂಧಗಳನ್ನು ರದ್ದು ಮಾಡಿದ್ದೇ ಅಲ್ಲದೇ, ಭಾರತ ಕನಿಷ್ಟ ನಿರೋಧಕ (minimum deterrent) ಪರಮಾಣುಅಸ್ತ್ರಗಳನ್ನು ಹೊಂದಲೂ ಒಪ್ಪಿದೆಯಂತೆ. ಪ್ರಧಾನಮಂತ್ರಿ ವಾಜಪೇಯಿ ಅವರು, ಸಿಟಬಿಟಿಗೆ ಸಹಿಹಾಕುವ ಬಗ್ಗೆ ದೇಶದಲ್ಲಿ ಒಮ್ಮತ ಸೃಷ್ಟಿಸುವ ಉದ್ದೇಶದಿಂದ ವಿರೋಧ ಪಕ್ಷಗಳ ನಾಯಕರುಗಳೊಂದಿಗೆ ಚರ್ಚೆ ಪ್ರಾರಂಭಿಸಿದ್ದಾರೆ. ಈ ಎಲ್ಲ ಸಂಕೇತಗಳೂ, ಭಾರತ ಒಪ್ಪಂದಕ್ಕೆ ಸಹಿ ಹಾಕುವ ದಿಕ್ಕಿನಲ್ಲಿ ಮುನ್ನಡೆಯುತ್ತಿದೆ ಎಂದು ಸೂಚಿಸುತ್ತವೆ. ಭಾರತ ಸಹಿ ಹಾಕದೇ ಒಪ್ಪಂದ ಜಾರಿಗೆ ಬರುವಂತಿಲ್ಲ.

ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ಒಪ್ಪಂದಕ್ಕೆ ಸಹಿ ಹಾಕದೇ ಇದ್ದರೆ ಭಾರತಕ್ಕೆ ಹೆಚ್ಚಿನ ನಷ್ಟವಾಗಬಹುದು. ಆದಾಗ್ಯೂ ಸಹಿ ಹಾಕುವುದರಿಂದ ರಾಷ್ಟ್ರದ ಹಿತಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕು. ಮುಖ್ಯವಾಗಿ ಒಪ್ಪಂದದಲ್ಲಿ ಅವಿತಿರುವ ಪಕ್ಷಪಾತವನ್ನು ತೊಡೆದುಹಾಕಿ, ಸಂಪೂರ್ಣ ಪರಮಾಣು ನಿಶ್ಶಸ್ತ್ರೀಕರಣ ಕಡೆಗೆ ವಿಶ್ವದ ರಾಷ್ಟ್ರಗಳು ಗಂಭೀರ ಗಮನ ಕೊಡುವಂತಾದರೆ ಅದು ಭಾರತಕ್ಕೆ ಒಂದು ನೈತಿಕ ವಿಜಯ.

ನಮ್ಮ ತತ್ವಗಳನ್ನು ನಮ್ಮ ಕರ್ತವ್ಯ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಸಿಕೊಳ್ಳಬೇಕು.

— ಎಡ್ಮಂಡ್ ಬರ್ಕ್

ಕಾಣೆಯಾದ ಬೀಗದ ಕೈಗಳು

ಭಾರತಿ ಭಟ್,

೧೩೫, ೨೨ನೇ ಕ್ರಾಸ್, ೩ಎ ಮೈನ್,

ಡಿ ಬ್ಲಾಕ್, ವಿಜಯನಗರ ೩ನೇ ಹಂತ

ಮೈಸೂರು ೫೭೦ ೦೧೭

೧೯೯೧ ಅಕ್ಟೋಬರ್ ೩೧ ಗುರುವಾರದ ಬೆಳಗ್ಗೆ ೧೦ ಗಂಟೆಗಿಂತ ಸ್ವಲ್ಪ ಮೊದಲಿರಬಹುದು. ೨೪ ವರ್ಷದ ಜೂಲಿ ಗ್ರೀನ್ ಅವಳ ಮನೆಯ ಸ್ಟೋರ್ ರೂಮಿನಲ್ಲಿ ತನ್ನದೇ ರಕ್ತದ ಮಡುವಿನಲ್ಲಿ ಸತ್ತು ಬಿದ್ದಿದ್ದಳು. ಇಂಗ್ಲೆಂಡಿನ ವಿಗಾನ್ ಎಂಬಲ್ಲಿರುವ ರಾಯಲ್ ಆಲ್ಬರ್ಟ್ ಆಸ್ಪತ್ರೆಯಲ್ಲಿ ಆಕೆ ನರ್ಸ್ ಆಗಿದ್ದಳು. ತನ್ನ ರಾತ್ರಿಯ ಕೆಲಸ ಮುಗಿಸಿ ಬಂದವಳೇ ಈರೀತಿ ಹತ್ಯೆಗೀಡಾಗಿದ್ದಳು. ಆಕೆಯ ಬಲದ ಕೈಯಲ್ಲಿ ಮಾತ್ರೆಗಳ ಒಂದು ಖಾಲಿ ಸೀಸೆ ಇತ್ತು ಮತ್ತು ಎಡದ ಕೈಯಲ್ಲಿ ಮುದ್ದೆ ಮಾಡಿದ ಒಂದು ನೋಟು ಇತ್ತು. ಪಕ್ಕದಲ್ಲೇ ರಕ್ತದಿಂದ ತೊಯ್ದ ಒಂದು ಕಿಲೋ ತೂಕದ ಸುತ್ತಿಗೆಯೂ ಬಿದ್ದಿತ್ತು.

ಪತ್ತೇದಾರ ಸುಪರಿಂಟೆಂಡೆಂಟ್ ನೋರ್ಮನ್ ಕೊಲ್ಲಿಸನ್ ಸ್ಟೋರ್ ರೂಮಿನ ಬಾಗಿಲ ಬಳಿ ನಿಂತು ನೋಡಿದ. ಸುಮಾರು ೫೦ ಕೊಲೆಗಳನ್ನು ಪತ್ತೆ ಮಾಡಿದ ಅನುಭವ ಅವನಿಗಿತ್ತು. ಕೋಣೆಯ ಒಳಗೆ ಬಂದು ಎಲ್ಲವನ್ನೂ ಆತ ಸೂಕ್ಷ್ಮವಾಗಿ ಪರಿಶೀಲಿಸಿದ. ಒಂದು ಬದಿಯಲ್ಲಿ ಅಗಲವಾದ ಮೇಜನ್ನು ಇರಿಸಿದ್ದರು. ಇನ್ನೊಂದು ಬದಿಯಲ್ಲಿ ಕಟ್ಟಡ ಕಟ್ಟಲು ಉಪಯೋಗಿಸುವ ಸಾಮಾನುಗಳದೊಂದು ರಾಶಿಯಿತ್ತು. ಆದರೆ ಯಾರೂ ಬಲವಂತದಿಂದ ಒಳಗೆ ಬಂದ ಹಾಗೆ ಇಲ್ಲವೇ ಹೊಡೆದಾಡಿದ ಹಾಗೆ ಗುರುತುಗಳಾವುವೂ ಅಲ್ಲಿರಲಿಲ್ಲ.

ಕೊಲ್ಲಿನ್‌ಸನ್‌ನೊಂದಿಗೆ ಅವನ ಸಹೋದ್ಯೋಗಿ ೫೧ ವರ್ಷದ ಪತ್ತೇದಾರ ಸುಪರಿಂಟೆಂಡೆಂಟ್ ಫ್ರಾಂಕ್ ಸ್ಕಾಟ್ ಕೂಡ ಬಂದಿದ್ದ. ಸ್ಟೋರ್ ರೂಮಿನಿಂದ ಅಡುಗೆ ಕೋಣೆಗೆ ಹೋಗಲಿರುವ ಬಾಗಿಲಿನ ಬೀಗ ಹಾಕಿತ್ತು ಮತ್ತು ಅದರ ಬೀಗದ ಕೈ ಕೆಳಗೆ ಬಾಗಿಲ ಬಳಿ ಬಿದ್ದಿತ್ತು. ಅದನ್ನು ಮುಟ್ಟಲು ಹೋಗದೆ ಅವರು ಸ್ಟೋರ್ ರೂಮಿನಿಂದ ಹೊರಗೆ ಹೋಗುವ ಬಾಗಿಲಿನ ಮೂಲಕ ಹೊರಗೆ ಬಂದರು. ಎರಡು ಮಹಡಿಯಿರುವ ಆ ಮನೆ ೧೭೬ ಗಿಡ್‌ಲೊ ರಸ್ತೆಯ ಹಿಂಬದಿಯಲ್ಲಿತ್ತು.

ಮನೆಯ ಮುಂಭಾಗದ ಹಾಲಿನಲ್ಲಿ ಕೊಲೆಯಾದವಳ ನಿಟ್ಟಿಂಗ್ ಬೇಗ್, ದಾದಿಯ ಟೊಪ್ಪಿ ಮತ್ತು ಕೋಟು ಬಿದ್ದಿದ್ದುವು. ಮುಖ್ಯ ಬೆಡ್‌ರೂಂ ಇರುವ ಮೊದಲನೆಯ

ಅಕ್ಟೋಬರ್ ೧೯೯೪ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಡೇವಿಡ್ ಮೊಲ್ಲರ್ ಅವರ "ಕೇಸ್ ಆಫ್ ದಿ ಮಿಸ್ಸಿಂಗ್ ಕೀಸ್ ಎಂಬ ಲೇಖನದ ಅನುವಾದ.

ಮಾಳಿಗೆಯಲ್ಲಿ ಕೊಲ್ಲಿನ್‌ಸನ್‌ಗೆ ಒಂದು ಅಲಾರಂ ಗಡಿಯಾರ ಕಾಣಿಸಿತು. ಅವನ ಮನೆಯಲ್ಲೂ ಅಂತಹದೇ ಒಂದು ಗಡಿಯಾರ ವಿತ್ತು. ಅದು ವೇಳೆಯನ್ನು ಸರಿಯಾಗಿ ತೋರಿಸುತ್ತಿತ್ತು. ಆದರೆ ಅಲಾರಂ ಸರಿಯಾಗಿ ಕೊಡುತ್ತಿರಲಿಲ್ಲ.

ಕೊಲೆಯಾದ ಹೆಂಗಸು, ಜೂಲಿ ಗ್ರೀನ್, ಯಾವಾಗಲೂ ನಗುಮುಖ ದಿಂದಿದ್ದು ಆ ಊರಲ್ಲಿ ಜನಪ್ರಿಯಳಾಗಿದ್ದಳು. ಉಲ್ಲಾಸದಿಂದ ಹೊರಗೆ ಹೋಗುತ್ತಿದ್ದ ಆಕೆ ಯಾವಾಗಲೂ ಜನರಿಗೆ ಸಹಾಯ ಮಾಡುವುದರಲ್ಲಿ ಸಂತೋಷಪಡುತ್ತಿದ್ದಳು. ದಾದಿಯ ಕೆಲಸಕ್ಕೆ ಸೇರುವ ಮೊದಲು ಅವಳು ಆಸ್ಪತ್ರೆಯಲ್ಲಿ ಸ್ವಯಂ ಸೇವಕಿಯಾಗಿ ಕೆಲಸಮಾಡುತ್ತಿದ್ದಳು. ಪಿಯಾನೊ ವಾದನ ವನ್ನೂ ಕಲಿತಿದ್ದ ಅವಳು ಸಮಯ ವಿದ್ದಾಗಲೆಲ್ಲಾ ಜನರಿಗೆ ಪಿಯಾನೊ ಬಾರಿಸಲು ಹೇಳಿಕೊಡುತ್ತಿದ್ದಳು. ಹೆಚ್ಚಾಗಿ ತನ್ನ ವಿಧವೆ ತಾಯಿಯ ಜೊತೆ ಇರುತ್ತಿದ್ದು, ಯುವತಿಯಾಗಿದ್ದಾಗಿನಿಂದಲೂ ರಜಾದಿನ ಗಳಲ್ಲಿ ತನ್ನ ಇತರ ಸ್ನೇಹಿತೆಯರೊಂದಿಗೆ ತಿರುಗಾಡುವ ಬದಲು ತನ್ನ ತಾಯಿ ಮತ್ತು ಅತ್ತೆಯೊಡನೆ ಇರಲು ಇಷ್ಟಪಡುತ್ತಿದ್ದಳು.

ಶಾಲೆಯಲ್ಲೇನೇ ತನ್ನ ಗೆಳೆಯನಾಗಿದ್ದ ವಾರೆನ್ ಗ್ರೀನ್‌ನ ಜತೆ ಜೂನ್ ೧೯೮೯ರಲ್ಲಿ ಆಕೆಯ ಮದುವೆಯಾಗಿತ್ತು. ವಾರೆನ್ ಸಾಧು ಸ್ವಭಾವದವನಾಗಿದ್ದು ಕಲಿಯುವಿಕೆಯಲ್ಲಿ ಜೂಲಿಯಿಂದಲೂ ಮುಂದಿದ್ದ ಮತ್ತು ವಕೀಲ ವೃತ್ತಿ ಕಲಿತು ಸೆಪ್ಟಂಬರ್ ೧೯೯೦ರಲ್ಲಿ ಕ್ರೌನ್ ಪ್ರೊಸಿಕ್ಯೂಷನ್ ಸರ್ವಿಸ್‌ನಲ್ಲಿ ಅಪರಾಧಿಗಳ ತನಿಖೆಯನ್ನು ನಡೆಸುವ ಕೆಲಸಕ್ಕೆ ಸೇರಿದ್ದ.

ಸೈಂಟ್ ಮಿಚ್ಚೆಲ್ ಚರ್ಚಿನ ಸ್ಕೌಟ್ ಮತ್ತು ಗೈಡುಗಳೊಂದಿಗೆ ಮುಂದಾಳುಗಳಾಗಿ ಸೇವೆಮಾಡಿ ವಾರೆನ್ ಮತ್ತು ಜೂಲಿ ಇವರಿಬ್ಬರೂ ಜನರ ಸ್ನೇಹ ಗಳಿಸಿದ್ದರು. ಇಬ್ಬರೂ ಒಬ್ಬರನ್ನೊಬ್ಬರು ತುಂಬ ಪ್ರೀತಿಸುತ್ತಿದ್ದರು. ಅವರ ಮದುವೆಯ ಮೊದಲನೇ ವಾರ್ಷಿಕ ದಿವಸ ವಾರೆನ್ ತನ್ನ ಹೆಂಡತಿ ಜೂಲಿಗೆ ಒಂದು ಉಂಗುರವನ್ನು ಉಡುಗೊರೆಯಾಗಿ ಕೊಟ್ಟಿದ್ದ. ಅವಳು ಅವನ ಹುಟ್ಟಿದ ಹಬ್ಬದ ದಿವಸ ಯಾವಾಗಲೂ ಕೇಕ್ ಮಾಡುತ್ತಿದ್ದಳು. ಅವರು ಈ ರೀತಿ ಅನ್ಯೋನ್ಯವಾಗಿರುವುದನ್ನು ಊರಿನ ಜನರೂ ಗಮನಿಸಿದ್ದರು. ''ಜೂಲಿ ಯಾವಾಗಲೂ ವಾರೆನ್ ಜತೆಯಲ್ಲಿರುವಾಗ ನಗುತ್ತಾ ಸಂತೋಷದಲ್ಲಿರುತ್ತಾಳೆ'' ಎಂದು ಅವಳ ಸ್ನೇಹಿತೆ ಹೇಳುತ್ತಿದ್ದಳು.

೨೬ ವರ್ಷದ ವಾರೆನ್ ತೆಳ್ಳಗಿದ್ದು ಕಡುಬಣ್ಣದ ಕೂದಲುಳ್ಳವನಾಗಿದ್ದ ಮತ್ತು ನೋಡಲು ಅವನ ಮುಖ ಉರುಟಾಗಿ ಹುಡುಗನ ಮುಖದಂತೆ ಕಾಣಿಸುತ್ತಿತ್ತು. ವಿಗಾನ್ ಪೊಲೀಸ್ ಸ್ಟೇಶನ್ನಿನಲ್ಲಿ ಸಿಐಡಿ ಆಫೀಸರರ ಮುಂದೆ ಕುಳಿತಿದ್ದ ಅವನು ತಾನು ಜೀವಿಸುತ್ತಿದ್ದ ಅತ್ಯಂತ ಸುಂದರ ಜೀವನ ಈಗ ಪಕ್ಕನೆ ಒಂದು ದುಃಸ್ವಪ್ನದಂತೆ ಕಣ್ಮರೆ ಯಾಗಿದೆ ಎಂದು ವಿವರಿಸಿ ಹೇಳಿದ.

ಸ್ಟೋರ್‌ರೂಂನ್ನು ಗರಾಜ್ ಮಾಡಬೇಕೆಂದು ತಾನು ೩ ದಿವಸದ ರಜೆ ತೆಗೆದುಕೊಂಡಿದ್ದೇನೆಂದು ಮತ್ತು ಅದಕ್ಕಾಗಿ

ಮನೆಯಲ್ಲೇ ಇದ್ದನೆಂದು ಅವನು ಹೇಳಿದ. ಹಿಂದಿನ ದಿವಸ ಸಾಯಂಕಾಲ ಅವನು ತನ್ನ ಸ್ನೇಹಿತರಾದ ಸ್ಟುವರ್ಟ್ ಸ್ಕೇಟ್ ಮತ್ತು ಅಂಡ್ರೂ ಫೋಸ್ಟರ್ ಜತೆ ಕ್ಲಬ್ಬಿಗೆ ಹೋಗಿ ಬಂದಿದ್ದ. ಮಾರನೆ ದಿವಸ ೧೧ಗಂಟೆ ಕಳೆದು ೨ಮಿನಿಟು ಆದಾಗ ಅಲಾರಂ ಹೊಡೆದು ಅವನಿಗೆ ಎಚ್ಚರವಾಗಿತ್ತು. ಜೂಲಿಯ ರಾತ್ರಿ ಕೆಲಸ ಬೆಳಗ್ಗೆ ೭.೪೫ಕ್ಕೆ ಮುಗಿಯಲಿದ್ದುದ ರಿಂದ ಅವಳು ಅಷ್ಟು ಹೊತ್ತಿಗೆ ಬಂದಿರ ಬೇಕಿತ್ತು. ಆದರೆ ಅವಳ ಹಾಸಿಗೆಯಲ್ಲಿ ಬೆಕ್ಕು ಗೋಲಿಯತ್ ಮಾತ್ರ ಮಲಗಿತ್ತು. ಸ್ವಲ್ಪ ಬಟ್ಟೆಯನ್ನು ಮೈಮೇಲೆ ಹಾಕಿಕೊಂಡು ಜೂಲಿಯನ್ನು ಕಾಣಲು ಅವನು ಕೆಳಗೆ ಹೋದಾಗ ಅವಳು ಅಲ್ಲೆಲ್ಲೂ ಕಾಣಸಲಿಲ್ಲ.

ಮನೆಯೊಳಗೆ ಪೂರ್ತಿ ಹುಡುಕಿದ ನಂತರ, ಅಡಿಗೆ ಕೋಣೆಯಿಂದ ಸ್ಟೋರ್ ರೂಮಿಗೆ ಹೋಗಲು ಅವನು ಪ್ರಯತ್ನಿಸಿದ್ದ. ಆದರೆ ಅವನಿಗೆ ಅದರ ಬಾಗಿಲನ್ನು ತೆರೆಯಲು ಸಾಧ್ಯವಾಗಿರಲಿಲ್ಲ. ಬೀಗದಕ್ಕೆ ಹಾಕುವ ತೂತಿನ ಮೂಲಕ ನೋಡಿದಾಗ ಬೀಗದಕ್ಕೆ ಸ್ಟೋರ್ ರೂಮಿನ ಒಳಭಾಗದಲ್ಲಿದ್ದುದು ಕಾಣಿಸಿತು. ಟಿವಿಯಲ್ಲಿ ಒಮ್ಮೆ ನೋಡಿದ ಉಪಾಯ ನೆನಪಾದುದರಿಂದ ಅವನು ಒಂದು ಪೇಪರನ್ನು ಬಾಗಿಲಿನ ತಳದಲ್ಲಿಟ್ಟು ಅದನ್ನು ಸ್ವಲ್ಪ ಕೋಣೆಯೊಳಕ್ಕೆ ನೂಕಿ ಬೀಗದಕ್ಕೆ ಅದರ ಮೇಲೆ ಬೀಳುವಂತೆ ಮಾಡಲು ಸ್ಕ್ರೂಡ್ರೈವರನ್ನು ತೂತಿಗೆ ಹಾಕಿ ದೂಡಿದ. ಬೀಗದ ಕೈ ಕೆಳಗೆ ಬಿದ್ದ ಸದ್ದು ಕೇಳಿಸಿತು. ಆದರೆ ಪಲ್ಲಿಗೆ ನ್ಯೂಸ್ ಪೇಪರ್‌ನ್ನು ಹಿಂದಕ್ಕೆ ಎಳೆದಾಗ ಪೇಪರಿನೊಂದಿಗೆ ಬೀಗದಕ್ಕೆ ಇತ್ತಕಡೆ ಬರಲಿಲ್ಲ. ಅದು ಸ್ಟೋರ್ ರೂಮಿನ ಒಳಗೇನೇ ಉಳಿದಿತ್ತೆಂದು ಹೇಳಿದ.

ಸ್ಟೋರ್ ರೂಮಿನ ಒಳಗೆ ಹೋಗಲು ಹೊರಗಿನಿಂದ ಒಂದು ಬಾಗಿಲು ಇತ್ತು. ಬೀಗದ ಕೈಗಳನ್ನು ಇಡುವ ಒಂದು ಗೊಂಚಲಿನಲ್ಲಿ ಅವನು ಆ ಹೊರಗಿನ ಬಾಗಿಲನ್ನು ತೆಗೆಯಲು ಬೇಕಾಗುವ ಬೀಗದಕ್ಕೆಯನ್ನು ಇಟ್ಟಿದ್ದ. ಅದನ್ನು ಹಿಂದಿನ ರಾತ್ರಿ ಅಡುಗೆಕೋಣೆಯ ಕಟ್ಟೆಯಲ್ಲಿ ಇಟ್ಟದ್ದು ಅವನಿಗೆ ನೆನಪಿತ್ತು. ಆದರೆ ಅದು ಈಗ ಅಲ್ಲಿ ಇರಲಿಲ್ಲ.

ನೆರೆಮನೆಯಲ್ಲಿ ವಾಸಿಸುತ್ತಿದ್ದ ಜೋ ಮೆಗುಯರ್‌ರೆ ಎಂಬಾತನಿಗೆ ಅವನು ತನ್ನ ಸ್ಟೋರ್‌ರೂಮನ್ನು ಬಾಡಿಗೆಗೆ ಕೊಟ್ಟಿದ್ದ ನಾದುದರಿಂದ ಅದರ ಇನ್ನೊಂದು ಬೀಗದಕ್ಕೆ ಮೆಗುಯರ್‌ರೆಯ ಹತ್ತಿರ ಇತ್ತು. ಹಾಗಾಗಿ ಅವನು ನೆರೆಮನೆಗೆ ಹೋಗಿ ಮೆಗುಯರ್‌ರೆಯ ಹೆಂಡತಿಯ ಹತ್ತಿರ ಕೇಳಿ ಅದನ್ನು ತೆಗೆದುಕೊಂಡು ಬಂದ.

ಸ್ಟೋರ್ ರೂಮಿನ ಬಾಗಿಲು ತೆರೆದಾಗ ಆತನಿಗೆ ಅಲ್ಲಿ ತನ್ನ ಪತ್ನಿ ಸತ್ತು ಬಿದ್ದಿರುವುದು ಕಾಣಿಸಿತು. ''ನಾನು ಸ್ಟೋರ್‌ರೂಮಿನೊಳಗೆ ಓಡಿ ಹೋಗಿ ಅವಳ ತಲೆಯ ಬಳಿ ಬಗ್ಗಿ ನೋಡಿದೆ. ಅವಳನ್ನು ಎತ್ತಿ ಹಿಡಿಯಬೇಕೆಂದು ಆಲೋಚಿಸಿದೆ. ಆದರೆ ಅಲ್ಲಿ ನೆಲದಲ್ಲಿ ಎಲ್ಲಾ ಕಡೆಯಲ್ಲೂ ರಕ್ತ ಇತ್ತು. ಆಕೆಯ ತಲೆಯ ಬಳಿ ಕೊಳದಂತೆ ರಕ್ತ ತುಂಬಿತ್ತು'' ಎಂದು ಅವನು ಪೊಲೀಸರಿಗೆ ತಿಳಿಸಿದ.

ರೋಯಲ್ ಆಲ್ಬರ್ಟ್ ಇನ್, ಪರ್ಮರಿಯ ಶವಾಗಾರದಲ್ಲಿ ನೊರ್ಮನ್ ಕೊಲ್ಲಿನ್‌ಸನ್ ಜೂಲಿಯ ಮುಖವನ್ನು ಪರೀಕ್ಷಿಸಿದ. ಅವಳ ಎಡದ ಕಣ್ಣಿನ ಬಳಿ ಆಳವಾದ ಗಾಯವಾಗಿತ್ತು. "ಕೆಳಗೆ ಬಿದ್ದಾಗ ಈ ರೀತಿ ಗಾಯವಾಗಿರಬಹುದೇ ?" ಎಂದು ಅವನು ಕೇಳಿದಾಗ ಡಾ. ಎಡ್ಮಂಡ್ ತಪ್ ತಲೆ ಅಲ್ಲಾಡಿಸಿ ಹೇಳಿದ "ಹಾಗಾಗಿರ ಲಾರದು, ಬಹುಶಃ ಇದು ಅವಳ ಮೇಲೆ ಆಕ್ರಮಣ ನಡೆಸಿದ ಕೊಲೆಗಾರ ಗುದ್ದಿದ್ದು ಇಲ್ಲವೇ ತುಳಿದದ್ದಿರಬೇಕು".

ತಲೆಯ ಒಂದು ಬದಿಗೆ ಬಲವಾದ ಹೊಡೆತ ಬಿದ್ದು ಜೂಲಿಯ ಎಡದ ಕಿವಿ ಕಿತ್ತು ಬಂದಂತಾಗಿತ್ತು. ಇನ್ನಿತರ ಗಾಯಗಳ ಸ್ಥಿತಿ ನೋಡುವಾಗ ಕೊಲೆಗಾರ ಆಕೆಯ ಬಳಿ ನಿಂತು ತಲೆಬುರುಡೆಯನ್ನು ಜಜ್ಜಿದಂತೆ ಕಾಣಿಸುತ್ತಿತ್ತು. ಇದೊಂದು ಕೋಪದಿಂದ ಜಗಳಾಡಿ, ಹೊಡೆದಾಡಿ ಕೊಲೆಮಾಡಿದ ಹಾಗೆ ಕಾಣಿಸುವುದಿಲ್ಲ. ಸ್ವಲ್ಪವೂ ಕನಿಕರ ತೋರದೆ ಮಾಡಿದ ಕೆಲಸದ ಹಾಗೆ ಕಾಣಿಸುತ್ತದೆ ಎಂದು ಕೊಲ್ಲಿನ್‌ಸನ್ ಹೇಳಿಕೊಂಡ.

ಅವರು ಇನ್ನೂ ಶವಾಗಾರದಲ್ಲೇ ಇದ್ದಾಗ ಡಿಟೆಕ್ಟಿವ್ ಇನ್ಸ್‌ಪೆಕ್ಟರ್ ಜೇಕ್ ಬೂತ್ ವಿಗಾನ್ ಪೊಲೀಸ್ ಸ್ಟೇಶನ್ನಿನಿಂದ ಅವನನ್ನು ಫೋನ್‌ನಲ್ಲಿ ಕರೆದು, "ವಾರೆನ್ ಗ್ರೀನ್ ಬೆಳಿಗ್ಗೆ ೧೦ಗಂಟೆಗೆ ಎದ್ದಿದ್ದೆನೆಂದು ಹೇಳುತ್ತಿದ್ದಾನೆ, ಬಾಸ್. ನೀವು ಕೊಲೆಯಾದ ಸ್ಥಳಕ್ಕೆ ಹೋಗುವುದಿದ್ದರೆ ಅಲಾರಂ ಎಷ್ಟು ಗಂಟೆಗೆ ಹೊಡೆಯಿತು ಎಂಬುದನ್ನು ಪರೀಕ್ಷಿಸು ತ್ತೀರಾ?" ಎಂದು ಕೇಳಿದ.

ಕೊಲ್ಲಿನ್‌ಸನ್ ಅವನ ಸ್ನೇಹಿತ ಫ್ರಾಂಕ್ ಸ್ಮಾಟ್ ಜತೆ ೧೭೬ ಗಿಡ್ಲೊ ರಸ್ತೆಗೆ ಇನ್ನೊಮ್ಮೆ ಹೋಗಿ ಅಲಾರಂ ಗಡಿಯಾರದ ಮುಳ್ಳನ್ನು ತಿರುಗಿಸಿ ನೋಡಿದ. ಅಲಾರಂನ್ನು ೧೦ ಗಂಟೆಗಿಂತ ಸ್ವಲ್ಪ ಮುಂಚೆ ಹೊಡೆಯುವಂತೆ ಇಡಲಾಗಿತ್ತು. ಹೀಗಿದ್ದರೂ ಪರೀಕ್ಷಿಸಿ ನೋಡಿದಾಗ ಅರ್ಧಗಂಟೆ ೪೦ ಮಿನಿಟುಗಳಾದಾಗ ಅಂದರೆ ೨೦ ಮಿನಿಟು ಮೊದಲೇ ಅಲಾರಂ ಹೊಡೆಯುತ್ತಿತ್ತು. ಆ ಆಫೀಸರರಿಬ್ಬರೂ ಒಬ್ಬರನ್ನೊಬ್ಬರು ನೋಡಿ ಕೊಂಡರು. ಇದರಲ್ಲಿ ಏನೋ ಸುಳಿವು ಇರಬಹುದು, ಅಥವಾ ಇಲ್ಲದಿರಬಹುದು ಎಂದು ಅವರು ಮಾತನಾಡಿಕೊಂಡರು.

ರಾತ್ರಿ ೮ ಗಂಟೆಯ ಹೊತ್ತಿಗೆ ಆ ದಂಪತಿಗಳ ಕುರಿತಾಗಿ ಇನ್ನೂ ಕೆಲವು ವಿಷಯ ತಿಳಿದುಬಂತು. ಹಾಸಿಗೆಯ ಬಳಿ ಇರುವ ಮೇಜಿನ ಡ್ರಾಯರ್‌ನಲ್ಲಿ ದೊರೆತ ಪತ್ರಗಳನ್ನು ಗಮನಿಸಿದಾಗ ಮೂರು ತಿಂಗಳಿನಿಂದ ಜೂ[illegible] ೨೨ ವರ್ಷದ ಸ್ಟುವರ್ಟ್ ಎಂಬವನ ಜತೆ ಸಂಬಂಧ ವಿತ್ತೆಂದು ತಿಳಿದು ಬಂತು. ಇದು ತಪ್ಪೆಂದು ತಮಗೆ ತಿಳಿದಿತ್ತಾದರೂ, ಆ ಸಂಬಂಧವನ್ನು ನಿಲ್ಲಿಸಲು ಸಾಧ್ಯವಾಗಿರಲಿಲ್ಲವೆಂದು ವಾರೆನ್ ಹೇಳಿದ.

"ಇದರಿಂದಾಗಿ ಮತ್ಸರಗೊಂಡು ಹುಚ್ಚನಂತಾದ ವಾರೆನ್ ಗ್ರೀನ್ ಆಕೆಯನ್ನು ಕೊಲೆ ಮಾಡಿರಬಹುದೇ?" ಎಂದು ಕೊಲ್ಲಿನ್‌ಸನ್ ತನ್ನನ್ನೇ ಪ್ರಶ್ನಿಸಿಕೊಂಡ. ಆದರೆ ಗ್ರೀನ್‌ನ ಸ್ನೇಹಿತರನ್ನು ಪ್ರಶ್ನಿಸಿದಾಗ

ಅವನು ತುಂಬ ಒಳ್ಳೆಯ ನಡತೆಯವನೆಂದು ಅವರು ತಿಳಿಸಿದರು. ''ಆದರೂ ಅವನು ಒಳ್ಳೆಯ ಪತಿಯಾಗಿಲ್ಲದಿರಲು ಸಾಧ್ಯವಿದೆ'' ಎಂದು ಬೂತ್ ಹೇಳಿದ.

ಅವರು ಕಂಡು ಹಿಡಿದ ಇನ್ನೊಂದು ವಿಷಯವೇನೆಂದರೆ ೨೦ ವರ್ಷದ ಜೂಲಿ ವಾರ್ಬರ್ಟನ್ ಎಂಬ ತರುಣಿ ಬೇಸಿಗೆ ಕಾಲದಲ್ಲಿ ವಾರೆನ್ ಗ್ರೀನ್‌ನ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದಳು. ಆಗ ಅವಳನ್ನು ಪ್ರೀತಿಸಿದ ವಾರೆನ್ ಅವಳಿಗೆ ಆಗಾಗ ಉಡುಗೊರೆಗಳನ್ನು ತಂದು ಕೊಡುತ್ತಿದ್ದ ಮತ್ತು ತನ್ನೊಂದಿಗೆ ಅವಳನ್ನು ಊಟಕ್ಕೂ ಕರೆದುಕೊಂಡು ಹೋಗುತ್ತಿದ್ದ. ತನ್ನ ಪತ್ನಿಯೊಂದಿಗೆ ರಜದಲ್ಲಿ ಕೊರ್ಫು ಎಂಬಲ್ಲಿಗೆ ಹೋಗಿದ್ದಾಗ ಅಲ್ಲಿಂದ ಆಕೆಗೆ ಅವನು ಕೆಲವು ಪ್ರೇಮಪತ್ರಗಳನ್ನು ಬರೆದಿದ್ದ.

''ಸ್ಕೆಟ್‌ನ ವಿಚಾರವೇನು? ಅವನೇನಾದರೂ, ಈ ಕೆಲಸ ಮಾಡಿರಬಹುದೇ?'' ಎಂದು ಸ್ಕಾಟ್ ಕೇಳಿದಾಗ, ಬೂತ್ ತಲೆ ಅಲ್ಲಾಡಿಸಿ ಹೇಳಿದ, ''ಅವನು ಇದನ್ನು ಮಾಡಿರಲಾರನೆಂಬುದಕ್ಕೆ ಸಾಕ್ಷಿಯಿದೆ''. ಸ್ಕೆಟ್ ಕೆಲಸ ಮಾಡುತ್ತಿದ್ದ ಕಾರ್ಖಾನೆಗೆ ಅವನು ಬೆಳಿಗ್ಗೆ ೮ಗಂಟೆಗೆ ಕೆಲಸಕ್ಕೆ ಬಂದಿದ್ದನೆಂಬ ವಿಷಯ ಅವನ ಹಾಜರಾತಿಯನ್ನು ಪರಿಶೀಲಿಸಿದಾಗ ಗೊತ್ತಾಗಿತ್ತು. ಇದಲ್ಲದೆ ಅವನ ಜತೆ ಕೆಲಸಗಾರರು ಮಧ್ಯಾಹ್ನದವರೆಗೂ ಅವನು ಅಲ್ಲೇ ಇದ್ದ ಎಂಬುದನ್ನು ತಿಳಿಸಿದ್ದರು.

ಕೊಲ್ಲಿನ್‌ಸನ್‌ಗೆ ಈಗ ವಾರೆನ್ ಗ್ರೀನ್‌ನ ಮೇಲಿದ್ದ ಸಂಶಯ ದೃಢವಾಗತೊಡಗಿತು. ಆತ ತನಗೆ ಬೆಳಗ್ಗೆ ೧೦ ಗಂಟೆಗೆ ಎಚ್ಚರವಾಗಿತ್ತು ಎಂದು ಹೇಳಿದ್ದ. ಆದರೆ ಅಲಾರಂ ಬೆಳಗ್ಗೆ ೯.೪೦ ಗಂಟೆಗೇನೇ ಹೊಡೆದಿರಬೇಕು ಎಂಬ ವಿಷಯ ಆ ಗಡಿಯಾರವನ್ನು ಪರೀಕ್ಷಿಸಿದಾಗ ಸ್ಪಷ್ಟವಾಗಿತ್ತು. ಹಾಗಿದ್ದರೆ ೨೦ ಮಿನಿಟುಗಳ ಅನಂತರವೇ ತನಗೆ ಎಚ್ಚರವಾದುದೆಂದು ಅವನು ಯಾಕೆ ಅಷ್ಟೊಂದು ಉತ್ಸಾಹದಿಂದ ಹೇಳಿದ?.

ಅವತ್ತು ರಾತ್ರಿ ೧೦ ಗಂಟೆಗೆ ಜೂಲಿಯ ಗಂಡ ವಾರೆನ್ ಗ್ರೀನ್‌ನನ್ನು ಪೊಲೀಸರು ಬಂಧಿಸಿದರು. ಆದರೆ ಇದರಿಂದ ಅವನು ಸ್ವಲ್ಪವೂ ವಿಚಲಿತನಾಗಲಿಲ್ಲ. ವಕೀಲನಾದ ಅವನಿಗೆ ಸಾಮಾನ್ಯವಾಗಿ ಕೊಲೆಯನ್ನು ತನಿಖೆ ಮಾಡುವವರು ಮೊದಲು ಪತಿಯ ಮೇಲೆ ಸಂಶಯ ಪಡುತ್ತಾರೆಂಬ ವಿಷಯ ತಿಳಿದಿತ್ತು. ಬೂತ್ ತನ್ನನ್ನು ಪ್ರಶ್ನಿಸಿದಾಗ ಅವನು ತಾನು ಹಿಂದೆ ಹೇಳಿದ ಕಥೆಯನ್ನೇ ಪುನಃ ಹೇಳಿದ.

ಮಾರನೆಯ ದಿವಸ ಬೆಳಗ್ಗೆ ಸಿಐಡಿಯವರು ಘಟನೆಯ ವಿವರ ತಿಳಿಯಲು ಒಂದು ಮೀಟಿಂಗ್ ಕರೆದರು. ಗ್ರೀನ್‌ನ ಮನೆಯಲ್ಲಿ ಪೊಲೀಸರಿಗೆ ದೊರೆತ ಕಾಗದಗಳಿಂದ ಗ್ರೀನ್ ದಂಪತಿಗಳು ಹಣದ ಮುಗ್ಗಟ್ಟಿನಲ್ಲಿದ್ದರೆಂಬ ವಿಷಯ ಗೊತ್ತಾಯಿತು. ಗ್ರೀನ್ ೮೦,೦೦೦ ಪೌಂಡು (ಎಂದರೆ ೩೬ ಲಕ್ಷ ರೂಪಾಯಿ) ಸಾಲಮಾಡಿ ಆ ಮನೆಯನ್ನು ಕೊಂಡುಕೊಂಡಿದ್ದ. ಅವರ

ದಾಂಪತ್ಯದಲ್ಲಿ ಬಿರುಕು ಉಂಟಾದಲ್ಲಿ ಮನೆಯ ಅರ್ಧಾಂಶ ಮತ್ತು ಪಕ್ಕದ ಸ್ಥಳ ಜೂಲಿಗೆ ಸಿಗಬಹುದಿತ್ತು. ಉಳಿದ ಅರ್ಧಕ್ಕೆ ಮಾರ್ಕೆಟ್‌ನಲ್ಲಿ ಬೆಲೆ ಇಲ್ಲದುದರಿಂದ ವಾರೆನ್‌ಗೆ ಅದನ್ನು ಮಾರಾಟ ಮಾಡಲೂ ಸಾಧ್ಯವಾಗದ ಹಾಗಿತ್ತು.

ಆದರೆ, ಗ್ರೀನ್ ದಂಪತಿಗಳು ಇನ್ಶ್ಯೂರೆನ್ಸ್ ಪಾಲಿಸಿಯೊಂದನ್ನು ತೆಗೆದು ಕೊಂಡಿದ್ದರು. ಈ ಪಾಲಿಸಿಯ ಪ್ರಕಾರ ಅವರಲ್ಲಿ ಯಾರಾದರೂ ಒಬ್ಬ ತೀರಿ ಹೋದರೆ ಮನೆಗಾದ ಸಾಲವನ್ನೆಲ್ಲ ಇನ್ಶ್ಯೂರೆನ್ಸ್ ಕಂಪೆನಿಯೇ ತೀರಿಸುವ ಹಾಗಿತ್ತು ಮತ್ತು ಉಳಿದವನಿಗೆ ೭೦,೦೦೦ ಪೌಂಡು (ಎಂದರೆ ೪೦ ಲಕ್ಷ ರೂಪಾಯಿ) ಹಣ ದೊರೆಯುವ ಹಾಗಿತ್ತು. ಇದಲ್ಲದೆ ಜೂಲಿಯ ಇನ್ನೊಂದು ಮರಣದ ಪಾಲಿಸಿಯ ಪ್ರಕಾರ ಅವಳ ಪತಿಗೆ ೫೦,೦೦೦ ಪೌಂಡು(ಎಂದರೆ ೩೫ ಲಕ್ಷ ರೂಪಾಯಿ) ಸಿಗುವುದಿತ್ತು.

ಇದನ್ನು ನೋಡಿದಾಗ ಕೊಲ್ಲಿನ್‌ಸನ್ ನಿಗೆ ಹಣಕ್ಕಾಗಿಯೇ ಜೂಲಿಯನ್ನು ಅವಳ ಪತಿ ವಾರೆನ್ ಗ್ರೀನ್ ಕೊಲೆ ಮಾಡಿರಬಹು ದೆಂದು ಅನಿಸತೊಡಗಿತು. ಆದರೆ ಆಕೆಯನ್ನು ಅವನೇ ಕೊಲೆಮಾಡಿರು ವನೆಂಬುದನ್ನು ಸಾಧಿಸಿ ತೋರಿಸಲು ಬೇರೆ ಯಾವ ಆಧಾರವೂ ಅವನ ಬಳಿ ಇರಲಿಲ್ಲ.

ಕೊಲ್ಲಿನ್‌ಸನ್ ಮತ್ತು ಅವನ ಸಹೋದ್ಯೋಗಿಗಳು ನಡೆದ ಘಟನೆಗಳನ್ನೆಲ್ಲ ಪುನಃ ವಿಮರ್ಶಿಸಲು ತೊಡಗಿದರು. ಜೂಲಿ ಸ್ಟೋರ್‌ರೂಮಿನ ಒಳಗೆ ಕೊಲೆಯಾಗಿದ್ದಾಳೆ. ಆದರೆ ಆದರ ಬಾಗಿಲಿಗೆ ಒಳಗಿನಿಂದ ಬೀಗ ಹಾಕಲಾಗಿದೆ ಮತ್ತು ಬೀಗದ ಕೈ ಕೋಣೆಯ ಒಳಗೆಯೇ ಇದೆ. ಇನ್ನೊಂದು ಬಾಗಿಲಿನ ಮೂಲಕ ಕೊಲೆಗಾರ ಹೊರಗೆ ಹೋಗಿರಲು ಸಾಧ್ಯವಿದೆ.' ಆದರೆ ಅದಕ್ಕೆ ಬೀಗಹಾಕಲು ಬೀಗದಕೈ ಇಲ್ಲದೆ ಸಾಧ್ಯವಿಲ್ಲ. ಆ ಬಾಗಿಲಿನ ಬೀಗದಕೈಯನ್ನಿಟ್ಟಿರುವ ಗೊಂಚಲು(ರಿಂಗ್) ಕಾಣೆಯಾಗಿದೆಯಲ್ಲ?

ಗ್ರೀನ್ ತಾನೇ ತನ್ನ ಪತ್ನಿಯನ್ನು ಕೊಂದು ಹೊರಗಿನವರ ಮೇಲೆ ಸಂಶಯ ಬರುವಂತೆ ಬೀಗದ ಕೈಯನ್ನು ಅಡಗಿಸಿಟ್ಟಿರ ಬಹುದೇ? ಆದರೆ ಅದನ್ನು ಅಡಗಿಸು ವುದಕ್ಕಾಗಿ ಅವನು ಮನೆಯಿಂದ ಹೊರಗೆ ರಸ್ತೆಯಲ್ಲಿ ಹೋಗಿರಲಾರನು. ಯಾಕೆಂದರೆ, ಅಲ್ಲಿ ಯಾರಾದರೂ ಆತನನ್ನು ಕಂಡು ಮಾತನಾಡಿಸುವ ಸಾಧ್ಯತೆಯಿತ್ತು. ಹಾಗಾಗಿ ಅವನು ಅದನ್ನು ಮನೆಯಲ್ಲೇ ಎಲ್ಲಾದರೂ ಅಡಗಿಸಿಟ್ಟಿರಬಹುದು.

''ಅಂತೂ ಆ ಬೀಗದಕೈಗಳು ದೊರೆತರೆ ಮಾತ್ರವೇ ವಾರೆನ್ ಗ್ರೀನ್ ಕೊಲೆಗಾರನೆಂದು ಸಿದ್ಧಪಡಿಸಲು ಸಾಧ್ಯ'' ಎಂದು ಕೊಲ್ಲಿನ್‌ಸನ್ ಹೇಳಿದ. ಪೊಲೀಸರು ಗ್ರೀನ್‌ನ ಮನೆ, ಹಿತ್ತಿಲು, ಕಸದಡಬ್ಬ ಮೊದಲಾದ ಕಡೆಗಳಲ್ಲೂ ಮತ್ತು ಗ್ರೀನ್‌ನನ್ನು ಪೊಲೀಸ್ ಸ್ಟೇಶನ್ನಿಗೆ ಕರೆದು ಕೊಂಡು ಬಂದ ಕಾರಿನೊಳಗೂ ಬಹಳ ಹೊತ್ತು ಹುಡುಕಾಡಿದರು. ಆದರೆ ಬೀಗದ ಕೈ ಎಲ್ಲೂ ಸಿಗಲಿಲ್ಲ.

ಇನ್ನಿತರ ಸಂಶೋಧನೆಗಳಿಂದಲೂ ಏನೂ ಪ್ರಯೋಜನವಾಗಲಿಲ್ಲ. ಗ್ರೀನ್‌ನ

ಬಟ್ಟೆಯಲ್ಲಿ ಜೂಲಿಯ ರಕ್ತ ಸ್ವಲ್ಪವೂ ಇರಲಿಲ್ಲ. ಪೊಲೀಸರು ಜೂಲಿಯ ತಾಯಿ ಡಿಲ್ಲಿ ಸಿಲಟೊಳನ್ನು ಭೇಟಿ ಮಾಡಿ, ''ಗ್ರೀನ್‌ನನ್ನು ಪ್ರಶ್ನಿಸಲಿಕ್ಕಾಗಿ ಸೆರೆಹಿಡಿದಿದ್ದೇವೆ, ಅವನ ವಿಷಯವಾಗಿ ನಿಮಗೇನಾದರೂ ತಿಳಿದಿದೆಯೇ?'' ಎಂದು ಕೇಳಿದರು. ಆದರೆ ಆಕೆ ಹೇಳಿದಳು, ''ನೀವು ಅವನನ್ನು ಸೆರೆ ಹಿಡಿದು ತಪ್ಪುಮಾಡಿದ್ದೀರಿ. ಗ್ರೀನ್ ಆ ಕೆಲಸವನ್ನು ಮಾಡುವುದು ಸಾಧ್ಯವೇ ಇಲ್ಲ''.

ವಾರೆನ್ ಗ್ರೀನ್ ತನ್ನ ಪತ್ನಿಯನ್ನು ಕೊಂದಿಲ್ಲವಾದರೆ ಬೇರೆ ಯಾರು ಕೊಂದಿರಬಹುದು?

ಬೂತ್ ಇನ್ನೊಮ್ಮೆ ಗ್ರೀನ್‌ನನ್ನು ಪ್ರಶ್ನಿಸತೊಡಗಿದ. ''ಯಾರಾದರೂ ಜೂಲಿಗೆ ಕೆಟ್ಟದಾಗುವಂತೆ ಮಾಡಬಹುದೆಂಬ ಕಲ್ಪನೆ ನಿಮಗಿದೆಯೇ?'' ಗ್ರೀನ್ ಅಸಹಾಯಕನಂತೆ ತಲೆ ಅಲ್ಲಾಡಿಸಿದ. ಮೃದು ಸ್ವಭಾವದ ಅವನ ಪತ್ನಿಯನ್ನು ಎಲ್ಲರೂ ಪ್ರೀತಿಸುತ್ತಿದ್ದರು.

ಜೂಲಿಯ ಶವ ಪತ್ತೆಯಾದೊಡನೆ ಪೊಲೀಸರು ಆಕೆಯ ಬಲದ ಕೈಯಲ್ಲಿ ಒಂದು ಖಾಲಿ ಸೀಸೆ ಇತ್ತು ಎಂದು ಹೇಳಿದ್ದು ಗ್ರೀನ್‌ಗೆ ನೆನಪಾಯಿತು. ಜೂಲಿ ಆಸ್ಪತ್ರೆಯಿಂದ ಬರುವಾಗ ಆ ಖಾಲಿ ಸೀಸೆಯನ್ನು ಜೇಬಿನಲ್ಲಿರಿಸಿ ತಂದಿದ್ದಳು ಎಂದು ಎಲ್ಲರೂ ಭಾವಿಸಿದ್ದರು. ಆದರೆ ನಿಜಕ್ಕೂ ಆಕೆ ಆಸ್ಪತ್ರೆಯಿಂದ ಮಾತ್ರೆಗಳನ್ನು ತಂದು ಮಾರುತ್ತಿರಬಹುದೇ ಮತ್ತು ಈ ವ್ಯವಹಾರದಲ್ಲಿ ಏಡಪಟ್ಟೇನಾದರೂ ಬಂದೊದಗಿರಬಹುದೇ

ಎಂಬುದಾಗಿ ಆತ ಪ್ರಶ್ನೆಯೊಂದನ್ನೆತ್ತಿದ.

ಇಷ್ಟು ಬೇಗ ಈ ಕೊಲೆಯ ವಿಷಯವಾಗಿ ಒಂದು ನಿರ್ಧಾರಕ್ಕೆ ಬರುವುದು ತಪ್ಪಾದೀತು ಎಂದು ಕೊಲ್ಲಿನ್ಸ್‌ಸನ್ ತನ್ನಲ್ಲೇ ಹೇಳಿಕೊಂಡ. ಅನಂತರ ಡ್ರಗ್‌ನ ವಿಷಯದಲ್ಲೂ ತನಿಖೆ ನಡೆಸಲು ಪೊಲೀಸರನ್ನು ಕಳುಹಿಸಿದ.

ಹತ್ತು ಗಂಟೆಗಳಿಗಿಂತಲೂ ಜಾಸ್ತಿ ಹೊತ್ತು ಪ್ರಶ್ನೆಗಳನ್ನು ಕೇಳಿದಾಗಲೂ ಗ್ರೀನ್ ಶಾಂತನಾಗಿ ಮರ್ಯಾದೆಯಿಂದ ಒಳ್ಳೆಯವನಂತೆ ಕುಳಿತುಕೊಂಡು ಉತ್ತರ ಕೊಡುತ್ತಿದ್ದ. ಇದನ್ನೆಲ್ಲ ಗಮನಿಸುತ್ತಿದ್ದ ಬೂತ್‌ಗೆ ಅವನಲ್ಲಿ ಸ್ವಲ್ಪವು ಸಂಶಯ ಉಳಿದಿರಲಿಲ್ಲ. ಆ ಭಾನುವಾರದಂದು ಅವನನ್ನು ತನ್ನ ಮನೆಯೊಳಕ್ಕೆ ಮಾತ್ರ ಹೋಗಬಾರದೆಂಬ ಷರತ್ತಿನ ಮೇಲೆ ಸೆರೆಮನೆಯಿಂದ ಹೊರಗೆ ಹೋಗಲು ಬಿಟ್ಟರು.

ಮಾರನೆ ದಿವಸ ಬೆಳಗ್ಗೆ ಪೊಲೀಸರು ಇನ್ನೊಮ್ಮೆ ಗ್ರೀನ್‌ನ ಮನೆಯ ಪ್ರತಿಯೊಂದು ಕೋಣೆಯನ್ನೂ ಮತ್ತು ಅಲ್ಲಿರುವ ಸಾಮಾನು ಗಳನ್ನೂ ಕೂಲಂಕಷ ವಾಗಿ ಪರೀಕ್ಷಿಸಿದರು. ಹೊಗೆ ನಳಿಗೆಯೊಳಗೆ, ತೊಲೆಗಳ ಸಂದಿನಲ್ಲಿ, ಪಕ್ಕದ ಮಾಡು ಮತ್ತು ಚರಂಡಿಗಳಲ್ಲಿ ಮತ್ತು ಹೊಲಸು ನೀರು ಹೋಗುವ ಕಾಲುವೆಯಲ್ಲಿ ಬೀಗದಕೈ ಸಿಗುವುದೋ ಎಂದು ಹುಡುಕಾಡಿದರು. ರಸ್ತೆಯುದ್ದಕ್ಕೂ ಒಂದು ಕಿ.ಮೀ ದೂರದವರೆಗಿರುವ ಡ್ರೈನೇಜನ್ನು ಪರೀಕ್ಷಿಸಿದರು. ಆದರೆ ಅಲ್ಲೆಲ್ಲೂ ಬೀಗದಕೈ ಸಿಗಲಿಲ್ಲ.

ಜೂಲಿಯ ಎಡದ ಕೈಯಲ್ಲಿ ಮುದ್ದೆಯಾಗಿದ್ದ ನೋಟನ್ನು ಪರೀಕ್ಷಿಸಿದ ನಂತರ ಅವಳು ಡ್ರಗ್ ವಹಿವಾಟಿನಲ್ಲಿ ಸೇರಿ, ಯಾರಾದರೂ ಹೊರಗಿನವರಿಂದ ಕೊಲೆಯಾಗಿರಬಹುದೇ ಎಂಬುದನ್ನು ಪರೀಕ್ಷಿಸುವ ಆವಶ್ಯಕತೆ ಕಂಡು ಬಂತು. ಆ ಮುದ್ದೆಯಾದ ೧೦ಪೌಂಡು ನೋಟಿನ ಎಡಬದಿಯ ತುದಿಯಲ್ಲಿ ರಕ್ತದ ಕಲೆಯಿತ್ತು. ಡ್ರಗ್ ವ್ಯವಹಾರದಲ್ಲಿ ತೊಡಗಿದುದರಿಂದಾಗಿ ಜೂಲಿಗೆ ಅದರಲ್ಲಿ ಏನಾದರೂ ಎಡವಟ್ಟಾಗಿ ಆಕೆ ಸಾವಿಗೀಡಾಗಿರಬಹುದೇ?

ಜೂಲಿಯ ಸಂಬಂಧಿಕರನ್ನು ಮತ್ತು ಸ್ನೇಹಿತರನ್ನು ಪ್ರಶ್ನಿಸಿದಾಗ ಇನ್ನೊಂದು ಸುಳಿವು ಸಿಕ್ಕಿತು. ಅವಳಿಗೆ ಅಪರಿಚಿತರೊಬ್ಬರು ಟೆಲಿಫೋನ್ ಮಾಡಿ ಭಯಪಡಿಸುತ್ತಿದ್ದರು ಎಂದು ಹಲವು ಮಂದಿ ತಿಳಿಸಿದರು. ಜೂಲಿ ಫೋನ್ ಎತ್ತಿದಾಗ ಯಾರೂ ಉತ್ತರ ಹೇಳುತ್ತಿರಲಿಲ್ಲ. ಕರೆದಾತ ಸ್ವಲ್ಪಹೊತ್ತು ಫೋನನ್ನು ಕೈಯಲ್ಲಿ ಹಿಡಿದಿದ್ದು, ಅನಂತರ ಕೆಳಗಿಡುತ್ತಿದ್ದ. ಈ ಕರೆ ಗ್ರೀನ್ ಮನೆಯಲ್ಲಿಲ್ಲದಾಗ ಮಾತ್ರ ಬರುತ್ತಿತ್ತು. ಎಂದರೆ, ಮನೆಯಲ್ಲಿ ಜೂಲಿ ಯಾವಾಗ ಒಬ್ಬಳೇ ಇರುತ್ತಾಳೆಂಬುದನ್ನು ತಿಳಿದೇ ಯಾರೋ ಫೋನ್ ಮಾಡುತ್ತಿರುವಂತೆ ತೋರುತ್ತಿತ್ತು. ಯಾರಾದರೂ ಬುದ್ಧಿ ಸ್ತಿಮಿತದಲ್ಲಿಲ್ಲದವನು ಆಕೆಯನ್ನು ಭಯಪಡಿಸುತ್ತಿದ್ದಿರಬಹುದೇ?

ವಿಗಾನ್‌ನ ಪಕ್ಕದ ಊರಿನಲ್ಲಿರುವ ವಾಶಿಂಗ್‌ಟನ್‌ನ ಶೈಲಾ ಸಿಲಿಟೋನಿ ಎಂಬುವಳಿಂದ ಕೊಲ್ಲಿನ್‌ಸನ್‌ನ ಜತೆಗಾರರಿಗೆ ಫೋನ್ ಕರೆ ಬಂತು. ಕೊಲೆಯಾದ ಹಿಂದಿನ ದಿವಸ ಒಬ್ಬ ಮನುಷ್ಯ ಆಕೆಗೆ ಫೋನ್‌ಮಾಡಿ ''ಜೂಲಿಯಿದ್ದಾಳೆಯೇ?'' ಎಂಬುದಾಗಿ ಕೇಳಿದ್ದ. ''ಇಲ್ಲ''ಎಂದು ಆಕೆ ಹೇಳಿದಾಗ ಆತ, ''ನನಗೆ ಜೂಲಿಯನ್ನು ಕಾಣಬೇಕಾಗಿತ್ತು'' ಎಂದು ಹೇಳಿದ್ದ. ''ಅವಳು ಇಲ್ಲಿ ವಾಸಿಸುವುದಿಲ್ಲ''ವೆಂದು ಹೇಳಿದ ಅನಂತರ ಕರೆದ ಮನುಷ್ಯ ಫೋನ್ ಕೆಳಗಿರಿಸಿದ್ದ. ಜೂಲಿಯ ಮನೆಗೆ ಫೋನ್ ಮಾಡುತ್ತಿದ್ದವನು ಮತ್ತು ಇವನೂ ಒಬ್ಬನೇ ಆಗಿರಬಹುದೇ?. ಕೊಲೆಗಾರನೂ ಇವನೇ ಆಗಿರಬಹುದೇ? ಎಂಬುದಾಗಿ ಕೊಲ್ಲಿನ್‌ಸನ್ ಆಲೋಚಿಸತೊಡಗಿದ.

ನವೆಂಬರ್೬ನೇ ತಾರೀಖು ಬುಧವಾರ ಪತ್ರಕಾರರೊಂದಿಗೆ ಟಿವಿಯ ಕೆಮರಾದವರು ಕುಳಿತಿದ್ದ ಗ್ರೀನ್ ಕಣ್ಣು ಪಿಳುಕಿಸುತ್ತಾ ''ನನಗೆ ಯಾರಾದರೂ ಸಹಾಯಮಾಡಿ'' ಎಂದು ಹೇಳಿದ.''ಯಾರೇ ಆಗಲಿ, ಎಲ್ಲಿದ್ದರೂ ಈ ವಿಷಯದಲ್ಲಿ ಜಾಸ್ತಿ ಸುಳಿವು ಸಿಕ್ಕಿದವರು ದಯಮಾಡಿ ಪೊಲೀಸರಿಗೆ ತಿಳಿಸಿ' ಎಂದು ವಿನಂತಿಸಿಕೊಂಡ. ಅನಂತರ ಅವನು ಕಣ್ಣೀರನ್ನು ತಡೆಹಿಡಿಯುತ್ತಾ ಜೂಲಿಯ ಕುರಿತಾಗಿ ಹೇಳಿದ ''ಅವಳು ಜೀವನದಲ್ಲಿ ಧೈರ್ಯ ತುಂಬುವವಳಾಗಿದ್ದಳು ಮತ್ತು ಚೆಲುವೆಯಾಗಿದ್ದಳು. ನಾನು ಅವಳನ್ನು ಬಹಳ ಪ್ರೀತಿಸುತ್ತಿದ್ದೆ. ಈಗಲೂ ನಾನು ಅವಳನ್ನು ಪ್ರೀತಿಸುತ್ತೇನೆ'' . ಆಗ ಹತ್ತು ಹನ್ನೆರಡು ಪತ್ರಿಕೆಗಳ ಕೆಮರಾದವರ ಎದುರು ಕೊಲ್ಲಿನ್‌ಸನ್ ತಾನು ತಯಾರಿಸಿದ ನಕಲಿ ಬೀಗದ ಕೈಗಳನ್ನು ಎತ್ತಿ ತೋರಿಸಿದ.

ಜೂಲಿಯ ಕೊಲೆಯಾಗಿ ಎರಡು ವಾರ ಕಳೆದರೂ ಯಾವ ಸುಳಿವೂ ಪತ್ತೆಯಾಗಿರಲಿಲ್ಲ. ಡ್ರಗ್‌ನ ವಿಷಯದಲ್ಲಿ ನಡೆಸಿದ ತನಿಖೆಯಿಂದಾಗಿ ಅವಳು ಡ್ರಗ್ ವ್ಯವಹಾರದಲ್ಲಿ ಸೇರಿರಲಿಲ್ಲವೆಂಬ ವಿಷಯ ಸ್ಪಷ್ಟವಾಯಿತು. ಕೈ ಬೆರಳ ತಜ್ಞರ ಹೇಳಿಕೆಯಂತೆ ಅವರಿಗೆ ಸುತ್ತಿಗೆಯಲ್ಲಿ ಯಾರ ಕೈಬೆರಳುಗಳ ಗುರುತೂ ಸಿಗಲಿಲ್ಲ. ಇದಲ್ಲದೆ ಗ್ರೀನ್‌ನ ಮನೆಯಲ್ಲಿ ಇಂತಹವನೇ ಕೊಲೆ ಮಾಡಿರಬಹು ದೆಂಬುದಕ್ಕೆ ಯಾವ ಸುಳಿವೂ ಸಿಗಲಿಲ್ಲ.

ಒಮ್ಮೆಲೇ ಗ್ರೀನ್‌ನ ಮೇಲಿರುವ ಸಂಶಯ ಬಲವಾಗತೊಡಗಿತು. ಕೋರ್ಟು ವಿಚಾರಣೆಯ ಮೊದಲು ತಪ್ಪಿತಸ್ಥನಲ್ಲಿ ದೋಷವನ್ನು ಕಂಡುಹಿಡಿಯುವ ತಜ್ಞನಾದ ಮತ್ತು ಸಿಷಿಯಸ್ ವಕೀಲನಾದ ಗ್ರೀನ್‌ಗೆ ತನಿಖೆ ನಡೆಸುವಲ್ಲಿ ಸುಳ್ಳು ಹೇಳುವುದು ಹೇಗೆಂಬ ವಿಷಯ ಚೆನ್ನಾಗಿ ತಿಳಿದಿತ್ತು. ''ಆದರೆ ಅವನು ತನ್ನ ಪತ್ನಿಯನ್ನು ಕೊಲ್ಲುವಾಗ ತನ್ನ ಬಟ್ಟೆಗೆ ಸ್ವಲ್ಪವು ರಕ್ತದ ಕಲೆಯಾಗದಂತೆ ನೋಡಿಕೊಂಡುದು ಹೇಗೆ?'' ಎಂಬ ಪ್ರಶ್ನೆಗೆ ಕೊಲ್ಲಿನ್‌ಸನ್‌ನ ಹತ್ತಿರ ಉತ್ತರವಿರಲಿಲ್ಲ.

''ಬಹುಶಃ ಅವನು ಆಕೆಗೆ ಮೊದಲು ಒಂದು ಜೋರಾದ ಹೊಡೆತ ಕೊಟ್ಟು ಅನಂತರ ತನ್ನ ಬಟ್ಟೆಯನ್ನು ಕಳಚಿಟ್ಟಿರ ಬಹುದು. ಅನಂತರ ಇನ್ನೂ ೧೫ ಬಾರಿ ಹೊಡೆದು ಅವಳನ್ನು ಕೊಂದು ಅನಂತರ ಮಹಡಿಗೆ ಹೋಗಿ ಸ್ನಾನ ಮಾಡಿರಬಹುದು'' ಎಂದು ಬೂತ್ ಸಲಹೆಕೊಟ್ಟ.

ತನಿಖೆಗಾರರಿಗೆ ಬಾತ್‌ರೂಮಿನ ಬೇಸಿನ್‌ನಲ್ಲಿ ಮತ್ತು ಟೈಲ್ಸ್‌ನಲ್ಲಿ ರಕ್ತದ ಚಿಕ್ಕ ಕಲೆ ಕಾಣಿಸಿತ್ತು. ಆದರೆ ಅದು ಯಾವ ಬ್ಲಡ್‌ಗ್ರೂಪ್‌ನದು ಎಂಬುದನ್ನು ಕಂಡು ಹಿಡಿಯಲು ಸಾಧ್ಯವಾಗಿರಲಿಲ್ಲ. ಗ್ರೀನ್ ಶೇವ್ ಮಾಡುತ್ತಿದ್ದಾಗ ಗಾಯವಾಗಿ ಬಂದ ರಕ್ತವೂ ಅದಾಗಿರಲು ಸಾಧ್ಯವಿತ್ತು.

''ಫೋನ್ ಕರೆ ಮಾಡಿದ ಅಪರಿಚಿತ ಯಾರಿರಬಹುದು?'' ಎಂದು ಕೊಲ್ಲಿನ್‌ಸನ್ ಕೇಳಿದ.

''ಆ ಎಲ್ಲಾ ಕರೆಗಳನ್ನೂ ಗ್ರೀನ್ ಮಾಡಿರಲು ಸಾಧ್ಯವಿದೆ. ಫೋನ್ ಕರೆ ಬಂದಾಗ ಅವನು ಒಮ್ಮೆಯೂ ಮನೆಯಲ್ಲಿರಲಿಲ್ಲ'' ಎಂದು ಸ್ಕಾಟ್ ಹೇಳಿದ.

''ಶೈಲಾ ಸಿಲಿಟೊಗೆ ಕೂಡ ಅವನೇ ಫೋನ್ ಮಾಡಿರಬಹುದು. ಜೂಲಿಯ ತಾಯಿಗೆ ಆತ ಒಮ್ಮೆ ಮಾತ್ರ ಫೋನ್ ಮಾಡಿದ್ದ. ಇನ್ನೊಮ್ಮೆ ಆಕೆಗೆ ಫೋನ್ ಮಾಡಲು ಯಾಕೆ ಪ್ರಯತ್ನಿಸಲಿಲ್ಲ? ಬಹುಶಃ ತನ್ನ ಸ್ವರವನ್ನು ಆಕೆ ಗುರುತು ಹಿಡಿಯ ಬಹುದೆಂಬ ಹೆದರಿಕೆಯಿಂದ ಇನ್ನೊಮ್ಮೆ ಫೋನ್ ಮಾಡದೆ ಇದ್ದಿರ ಬಹುದು'' ಎಂದು ಬೂತ್ ಹೇಳಿದ.

ಅವನ ಮೇಲೆ ಅವರಿಗೆ ಸಂಶಯ ದೃಢವಾಗಲು ಇನ್ನೊಂದು ಕಾರಣವೇನೆಂದರೆ ಪತ್ನಿಯ ಕೊಲೆಯಾಗಿರುವುದನ್ನು ತಿಳಿದ ಕೂಡಲೇ ಅವನು ಆಕೆಯ ಶವ ಸಂಸ್ಕಾರಕ್ಕೆ ಏರ್ಪಾಡು ಮಾಡಲು ಅರ್ಜೆಂಟಾಗಿ ಫೋನ್ ಮಾಡಿದ್ದ. ಅಂಬ್ಯೂಲೆನ್ಸ್ ಬರ ಹೇಳುವುದಕ್ಕೂ ಮೊದಲೇ ಪೋಲೀಸರಿಗೆ

ತಿಳಿಸಿದ್ದ. ಇದಲ್ಲದೆ ತಾನು ಆ ದಿನ ಬೆಳಗ್ಗೆ ಏನೆಲ್ಲಾ ಮಾಡಿದ್ದೆ ಎಂಬುದನ್ನೆಲ್ಲ ಒಂದು ಕ್ರಮದಲ್ಲಿ ನೆನಪಿನಲ್ಲಿರಿಸಿಕೊಂಡಿದ್ದ. ಅನಂತರ ಪೊಲೀಸ್ ಕಾನ್‌ಸ್ಟೆಬಲ್ ಆಂಡ್ರೂಕನ್ ಲಿಪ್ ಮನೆಗೆ ಬಂದಿದ್ದಾಗ ಅವನು ಅವನ್ನೆಲ್ಲ ವಿವರವಾಗಿ ವರದಿ ಮಾಡಿದ್ದ.

ಪತ್ನಿಯು ಕೊಲೆಯಾದುದನ್ನು ನೋಡಿ ಶಾಕ್ ಆಗಿ ಆತ ಹೀಗೆ ಮಾಡಿರ ಬಹುದೇ? ಅಥವಾ ವಕೀಲನಾಗಿದ್ದುದರಿಂದ ತನ್ನ ಅನುಭವವನ್ನು ಬಳಸಿ, ತನ್ನ ತಪ್ಪನ್ನು ಮುಚ್ಚಿಡಲು ಆ ರೀತಿ ಮಾಡಿರಬಹುದೇ? ಎಂಬುದಾಗಿ ಕೊಲ್ಲಿನ್‌ಸನ್ ಆಲೋಚಿಸ ತೊಡಗಿದ.

ಎರಡನೇ ಬಾರಿ ಗ್ರೀನ್‌ನ ಮನೆಯನ್ನು ಜಪ್ತಿ ಮಾಡಿದಾಗ ಸಿಕ್ಕಿದ ಒಂದು ಜೊತೆ ಶೂಸಿನ ತಳದಲ್ಲಿ ರಕ್ತದ ಕಲೆಯಿದ್ದಂತೆ ಕಾಣಿಸಿತು. ಅದನ್ನು ಪರೀಕ್ಷಿಸಲು ಕಳುಹಿಸಲಾಯಿತು. ಆದರೆ ಬೀಗದ ಕೈಗಳು ಇನ್ನೂ ಸಿಕ್ಕಿರಲಿಲ್ಲ. ''ಎಲ್ಲಾ ಜಾಗವನ್ನೂ ಕೂಲಂಕಷವಾಗಿ ನೋಡಿ ಯಾಯಿತು'' ಎಂದು ಸ್ಕಾಟ್ ಹೇಳಿದ. ಕೊಲ್ಲಿನ್‌ಸನ್ ನಿರಾಶೆಯಿಂದ ತನ್ನ ಆಫೀಸಿನ ಕಿಟಕಿಯ ಮೂಲಕ ಹೊರಗೆ ನೋಡುತ್ತ ನಿಂತ. ನಡೆದ ಪ್ರತಿಯೊಂದು ಘಟನೆಯೂ ಅವನಿಗೆ ಗ್ರೀನ್ ಕೊಲೆಗಾರನಾಗಿರಬಹು ದೆಂದು ಹೇಳುತ್ತಿತ್ತು. ಆದರೆ ಬಲವಾದ ಸಾಕ್ಷಿಗಾಗಿ ಬೀಗದ ಕೈ ಸಿಗಬೇಕಾಗಿತ್ತು.

ಅವನು ಸ್ಕಾಟ್‌ನ ಕಡೆಗೆ ನೋಡಿ ಹೇಳಿದ ''ನಾವು ಇನ್ನೊಮ್ಮೆ ಆ ಮನೆಯನ್ನು ಜಪ್ತಿಮಾಡಿ ನೋಡೋಣ. ಸರಿಯಾಗಿ ಪರೀಕ್ಷಿಸಲು ಇನ್ನೂ ಸೂಕ್ಷ್ಮವಾದ ಕಣ್ಣುಳ್ಳ ವರು ಬೇಕಾಗಿರುವುದಿಂದ ಬೇರೆ ಪೊಲೀಸ್ ಪಡೆಯನ್ನು ಕಳುಹಿಸೋಣ''.

ನವೆಂಬರ್ ೧೧ನೇ ತಾರೀಕು ಸೋಮವಾರ ಪೊಲೀಸರು ಇನ್ನೊಮ್ಮೆ ಮೊದಲಿನಿಂದ ಹುಡುಕಾಡತೊಡಗಿದರು. ಹಾಲ್‌ನಲ್ಲಿದ್ದ ಕಾರ್ಪೆಟ್‌ನ್ನು ಮೇಲಕ್ಕೆ ಎತ್ತಿ ಅದರ ಕೆಳಗೆ ಮರದ ಹಲಿಗೆಯನ್ನು ನೆಲಕ್ಕೆ ಹೊಂದಿಸಲು ಹಾಕಿದ ೬ ಸ್ಕ್ರೂ ಮೊಳೆಗಳನ್ನು ತೆಗೆದರು. ಪೊಲೀಸ್ ಕಾನ್‌ಸ್ಟೆಬಲ್ ಇಯಾನ್ ಮೆಕಾಲೆ ನೆಲದಲ್ಲಿ ತೆವಳುತ್ತಾ ಹೋಗಿ ಮಣ್ಣು, ಧೂಳುಗಳಲ್ಲಿ ಟಾರ್ಚು ಬೆಳಕು ಹಾಕುತ್ತಾ ಅರ್ಧ ಗಂಟೆ ಹುಡುಕಾಡಿದ. ಮನೆಯ ಮುಂಭಾಗದ ಬಾಗಿಲಿನ ಅಡಿಯಲ್ಲಿ ಒಂದು ಕೊಳವೆಯನ್ನು ಹುಗಿದಿರಿಸಿದ್ದು ಅದನ್ನು ಕಲ್ಲು ಮತ್ತು ಮಣ್ಣುಗಳಿಂದ ಮುಚ್ಚಿರುವಂತೆ ಕಾಣಿಸಿತು. ಅವನ್ನು ತೆಗೆದು ಅವನು ಆ ಕೊಳವೆಯೊಳಗೆ ಟಾರ್ಚಿನ ಬೆಳಕನ್ನು ಹಾಕಿದ. ಅದರೊಳಗೆ ಏನೋ ಹೊಳೆಯುತ್ತಿರುವುದು ಕಾಣಿಸಿತು. ಅದೇ ಅವರು ಹುಡುಕುತ್ತಿದ್ದ ಬೀಗದಕೈಗೊಂಚಲು!

ಸ್ಟೇಶನ್ನಿನ ಮೆಟ್ಟಲುಗಳನ್ನಿಳಿಯುತ್ತಿದ್ದ ಕಲ್ಲಿನ್‌ಸನ್‌ನನ್ನು ನಿಲ್ಲಿಸಿ ಬೂತ್ ಹೇಳಿದ ''ಬಾಸ್, ನಿಮಗೆ ಇದನ್ನು ನಂಬಲು ಸಾಧ್ಯವಾಗದು. ನಮಗೆ ಬೀಗದ ಕೈ ಸಿಕ್ಕಿತು ಮತ್ತು ಅದರಲ್ಲಿ ರಕ್ತದ ಕಲೆಯೂ ಪತ್ತೆಯಾಯಿತು''.

ಗುರುವಾರ ಬೆಳಗ್ಗೆ ಕೊಲ್ಲಿನ್ ಸನ್ ಇನ್ನೊಮ್ಮೆ ಗ್ರೀನ್‌ನನ್ನು ಪ್ರಶ್ನಿಸ ತೊಡಗಿದ. ಮೆಕಾಲೆಗೆ ನೆಲದಡಿಯಲ್ಲಿ ಬಾಗಿಲಿನ ಬದಿಯಲ್ಲಿದ್ದ ಕೊಳವೆ ಹೇಗೆ ಕಾಣ ಸಿಕ್ಕಿತು ಎಂಬುದನ್ನು ಕೊಲ್ಲಿನ್‌ಸನ್ ವಿವರವಾಗಿ ಹೇಳತೊಡಗಿದಾಗ ಗ್ರೀನ್ ಮುಖ ನಿಧಾನವಾಗಿ ಕಳೆಗುಂದ ತೊಡ ಗಿತು. ''ಮಿ.ಗ್ರೀನ್, ಊಹಿಸಿ ನೋಡೋಣ, ನಮಗೆ ಆ ಕೊಳವೆಯಲ್ಲಿ ಏನು ಸಿಕ್ಕಿರಬಹುದು?'' ಎನ್ನುತ್ತಾ ಕೊಲ್ಲಿನ್‌ಸನ್ ತನ್ನ ಜೇಬಿನಲ್ಲಿ ಮುಚ್ಚಿಟ್ಟ ಬೀಗದ ಕೈಗಳನ್ನು ಹೊರತೆಗೆದು ಮೇಜಿನ ಮೇಲಿರಿಸಿದ.

ಮುಖ ಬಿಳಿಚಿಹೋದ ಗ್ರೀನ್ ಕಣ್ಣುಗಳನ್ನು ಮುಚ್ಚಿ ಕುರ್ಚಿಯಲ್ಲಿ ಒರಗಿ ಕುಳಿತುಕೊಳ್ಳುತ್ತಾ ಹೇಳಿದ ''ನಾನಲ್ಲ, ನಾನಲ್ಲ''.

ಕಟ್ಟಕಡೆಗೆ ಕೊಲ್ಲಿನ್‌ಸನ್ ಸೂಚಿಸಿದ. ''ಮೊದಲೇ ಯೋಜನೆ ಹಾಕಿ ಆಕೆಯನ್ನು ನೀವು ಕೊಲೆಮಾಡಿರಬಹುದು ಇಲ್ಲವೇ ಜಗಳಾಡಿ ಒಂದು ಕ್ಷಣದ ಕೋಪ ದಿಂದ ಕೊಂದಿರಬಹುದು . ಯಾವುದು ಸರಿ? ಆಗ ಗ್ರೀನ್ ಎಚ್ಚರಗೊಂಡವನಂತೆ ಹೇಳಿದ ''ನಾನು ಹೇಳುವುದು ಇಷ್ಟೇ. ಆಕೆಯನ್ನು ನಾನು ಕೊಲೆ ಮಾಡಿಲ್ಲ''.

ಗ್ರೀನ್‌ನನ್ನು ಸೆರೆಮನೆಗೆ ಕರೆದುಕೊಂಡು ಹೋಗುತ್ತಿರುವಾಗ ಬೂತ್ ತನ್ನ ತಲೆ ಅಲ್ಲಾಡಿಸುತ್ತಾ ಹೇಳಿದ ''ಇವನೊಬ್ಬ ಸ್ವಲ್ಪವು ಉದ್ರೇಕಗೊಳ್ಳದ ಗಿರಾಕಿ''.

೧೯೯೩ ಫೆಬ್ರವರಿ ೨೩ರಂದು ಲಿವರ್‌ಪೂಲ್ ಕೋರ್ಟಿನ ೫ನೇ ನಂಬರಿನ ಕಟಕಟೆಯಲ್ಲಿ ವಾರೆನ್ ಗ್ರೀನ್ ನನ್ನು ನಿಲ್ಲಿಸಿದರು. ಕಡುಬಣ್ಣದ ಸೂಟ್ ಧರಿಸಿದ ಅವನು ತಪ್ಪಿತಸ್ತನಂತಿರಲಿಲ್ಲ. ಇತರ ವಕೀಲರ ಮನಸ್ಸನ್ನು ತಿಳಿದಿದ್ದ ಅವನು ಅವರ ಪ್ರಶ್ನೆಗಳಿಗೆ ಅಪರಾಧದ ಸುಳಿವು ಸಿಗದಂತೆ ಉತ್ತರಿಸುತ್ತಿದ್ದ. ಆದರೆ ಬೀಗದ ಕೈ ಮೇಲೆ ಮತ್ತು ಶೂಸಿನಲ್ಲಿ ಅವನ ಪತ್ನಿಯ ರಕ್ತದ ಕಲೆಯಿದ್ದುದರಿಂದ ಆ ಎರಡು ವಿಷಯಗಳ ಮಟ್ಟಿಗೆ ಮಾತ್ರ ಅವನಿಗೆ ಸರಿಯಾಗಿ ಉತ್ತರ ಕೊಡಲು ಸಾಧ್ಯವಾಗಲಿಲ್ಲ. ಅದನ್ನು ಬೇರೆ ಯಾರಾದರೂ ಅಲ್ಲಿ ಇಟ್ಟಿರಬಹುದು. ಆದರೆ ತಾನಲ್ಲವೆಂದಷ್ಟೇ ಹೇಳಿದ.

೧೪ ದಿವಸ ತನಿಖೆಯಾದ, ಅನಂತರ ಕೋರ್ಟಿನಲ್ಲಿ ಅವನು ತಪ್ಪಿತಸ್ತನೆಂದು ತೀರ್ಮಾನ ಮಾಡಲಾಯಿತು. ಗ್ರೀನ್ ತಲೆ ತಗ್ಗಿಸಿ ಕುಳಿತುಕೊಂಡ. ಅವನಿಗೆ ಜೀವಾವಧಿ ಶಿಕ್ಷೆ ನೀಡಿದ ಜಡ್ಜ್ ಹೇಳಿದರು, ''ನೀನು ನಿನ್ನ ಪತ್ನಿಯನ್ನು ದೃಢ ಮನಸ್ಸಿನಿಂದ ಮತ್ತು ಏಕಾಗ್ರತೆಯಿಂದ ಕೊಂದಿರುವೆ, ಮತ್ತು ಪೊಲೀಸರಿಗೆ ಇತರರ ಮೇಲೆ ಸಂಶಯ ಬರುವ ಹಾಗೆ ಮಾಡಿರುವೆ. ಇದಲ್ಲದೆ ನಿನ್ನ ಪತ್ನಿ ಒಬ್ಬಳು ಅಪರಾಧಿನಿ ಮತ್ತು ಡ್ರಗ್ ವ್ಯವಹಾರ ದಲ್ಲಿರುವವಳೆಂದು ಭಾವಿಸುವ ಹಾಗೆ ಮಾಡಿರುವೆ. ಆದರೆ ಅವಳು ಒಬ್ಬ ಉತ್ತಮ ಹೆಂಗಸಾಗಿರುವಳು''. ಬ್ರಿಟಿಷ್ ಕ್ರಿಮಿನಲ್ ಚರಿತ್ರೆಯಲ್ಲಿ ಅತ್ಯಂತ ಪ್ರಮುಖವಾದ ಕೊಲೆಯ ತನಿಖೆಯಲ್ಲಿ ಡಿಟೆಕ್ಟಿವ್ ಸುಪರಿಂಡೆಂಟ್ ಕೊಲ್ಲಿನ್‌ಸನ್ ಮತ್ತು ಅವನ ಸಹೋದ್ಯೋಗಿಗಳು ಯಶಸ್ವಿಯಾಗಿದ್ದರು.

ಪ್ರಾಣಿಗಳ ಜೀವನದಲ್ಲಿ ಪ್ರೀತಿ

ಡಿ.ಎ.ಹಾಮಣ್ಣ
೧೦೧೯, 'ಆರಭಿ' ೧ನೇ ಮುಖ್ಯ ರಸ್ತೆ
೩ನೇ ಅಡ್ಡರಸ್ತೆ ಶ್ರೀರಾಂಪುರ
೨ನೇ ಹಂತ, ಮೈಸೂರು-೨೩

ಮಾನವನು 'ಆಲೋಚನಾ ಸಾಮರ್ಥ್ಯ'ವಿರುವ ಪ್ರಾಣಿ. ಈ ಸಾಮರ್ಥ್ಯವು ಆತನಿಗೆ ಸಮಸ್ತ ಜೀವಕೋಟಿಯಲ್ಲಿ ವಿಶಿಷ್ಟಸ್ಥಾನವನ್ನು ತಂದು ಕೊಟ್ಟಿದೆ. ಆತ ಒಬ್ಬ ಭಾವಜೀವಿ ಎಂದೇ ಆತ ಪ್ರೀತಿ- ದ್ವೇಷವನ್ನೂ, ಸಂತೋಷ-ದುಃಖವನ್ನೂ, ಕರುಣೆ-ಸಹಾನುಭೂತಿಯನ್ನೂ ಅನುಭವಿಸಬಲ್ಲ ಮತ್ತು ವ್ಯಕ್ತಪಡಿಸಬಲ್ಲ. ಅಂದಮಾತ್ರಕ್ಕೆ ರಾಗಭಾವಗಳನ್ನು ಅನುಭವಿಸುವ ಮತ್ತು ವ್ಯಕ್ತಪಡಿಸುವ ಈ ಸಾಮರ್ಥ್ಯವು ಮಾನವನಿಗೆ ಮಾತ್ರ ಸೀಮಿತವಾಗಿದೆಯೆ?

ಪ್ರಾಣಿಗಳ ಜೀವನದಲ್ಲಿ ಪ್ರೀತಿಯ ಪಾತ್ರ ಏನೆಂಬುದನ್ನು ವಿಚಾರಿಸುವ ಮೊದಲು ಪ್ರಾಣಿಗಳ ವರ್ತನೆಯ ಬಗ್ಗೆ ಸ್ವಲ್ಪ ನೋಡೋಣ. ಬೆನ್ನಲುಬುಳ್ಳ ಎಲ್ಲ ಪ್ರಾಣಿಗಳಲ್ಲೂ-ಸಸ್ತನಿಗಳು, ಪಕ್ಷಿಗಳು, ಸರೀಸೃಪಗಳು, ಉಭಯ ಜೀವಿಗಳು, ಮೀನುಗಳು- ಇವೆಲ್ಲದರಲ್ಲೂ ಸುವ್ಯವಸ್ಥಿತ ಮಿದುಳು ಇದೆ. ಇದು ಇಂದ್ರಿಯಗಳಿಂದ ಬಂದ ಸುದ್ದಿಯನ್ನು ಸಂಸ್ಕರಿಸಿ, ತಕ್ಕ ಪ್ರತಿಕ್ರಿಯೆಯನ್ನು ರೂಪಿಸುತ್ತದೆ. ಸಸ್ತನಿಗಳಲ್ಲಂತೂ ಮಿದುಳಿನ ಬೆಳವಣಿಗೆ ಜಾಸ್ತಿ ಇರುವುದರಿಂದ, ಅವು ಊಹಿಸುವ ಮತ್ತು ತರ್ಕಬದ್ಧವಾಗಿ ಯೋಚಿಸುವ ಸಾಮರ್ಥ್ಯವನ್ನು ಪಡೆದಿವೆ.

ಯಾವುದೇ ಪ್ರಾಣಿಯ ವರ್ತನೆಯನ್ನು ಅದರ ನೈಸರ್ಗಿಕ ಪರಿಸರದಲ್ಲಿ ಅಧ್ಯಯನ ಮಾಡುವ ಶಾಸ್ತ್ರಕ್ಕೆ 'ಶೀಲ ಸ್ವಭಾವ ವಿಜ್ಞಾನ' ಅಥವಾ 'ಇಥೊಲಜಿ' ಎಂದು ಹೆಸರು. ಪ್ರಾಣಿಗಳ ವರ್ತನೆಯ ಬಗ್ಗೆ ಅಧ್ಯಯನ ಮಾಡಿದವರಲ್ಲಿ ಮೊದಲಿಗರೆಂದರೆ ಸುಪ್ರಸಿದ್ಧ ಜೀವ ವಿಜ್ಞಾನಿ ಹಾಗೂ ವಿಕಾಸವಾದದ ಪಿತಾಮಹ ಚಾರಲ್ಸ್ ಡಾರ್ವಿನ್. ಆಹಾರ ಸಂಪಾದನೆ, ಆತ್ಮ ರಕ್ಷಣೆ, ವಲಸೆ ಹೋಗುವಿಕೆ, ಸಂವಹನ, ಪ್ರಣಯಲೀಲೆ, ಸಂತಾನ ಸಂಗೋಪನೆ, ಕಲಿಕೆ-ಮುಂತಾದವುಗಳ ಜೊತೆಗೆ ಬೇರೆ ಬೇರೆ ಪ್ರಾಣಿ-ಸಮಾಜಗಳ ನಡುವೆ ಇರಬಹುದಾದ ಸಂಬಂಧಗಳ ಕುರಿತ ಅಧ್ಯಯನ 'ಶೀಲಸ್ವಭಾವ ವಿಜ್ಞಾನ'ದ ವಸ್ತು. ಈ ದೃಷ್ಟಿಕೋನಗಳಿಂದ ಪ್ರಾಣಿ ವರ್ತನೆಯನ್ನು ಪರೀಕ್ಷಿಸಿದಾಗ ಮಾನವ ಮತ್ತು ಪ್ರಾಣಿ ವರ್ತನೆಗಳಲ್ಲಿ ಹಲವಾರು ಸಾಮ್ಯಗಳು ಕಂಡುಬರುತ್ತವೆ.

ಈ ಹಿನ್ನೆಲೆಯಲ್ಲಿ ಪ್ರಾಣಿಗಳು ಪ್ರೀತಿ ಪ್ರೇಮಗಳನ್ನು ಅನುಭವಿಸುತ್ತವೆಯೆ? ವ್ಯಕ್ತಪಡಿಸುತ್ತವೆಯೆ? ಎಂದು ನೋಡೋಣ. ಜೋಡಿಯಾಗುವುದು, ಜೊತೆಯಾಗಿ ಬೇಟೆಯಾಡುವುದು, ಒಂದನ್ನೊಂದಪ್ಪಿ ಕೊಂಡಿರುವುದು, ಸ್ಪರ್ಶಿಸಿ ಮುದ್ದಾಡುವುದು- ಹೀಗೆ ಪ್ರೀತಿಯ ಹಲವಾರು ಲಕ್ಷಣಗಳನ್ನು ಪ್ರಾಣಿಗಳ ನಡುವೆ ಕಾಣಬಹುದು.

ಪ್ರಾಣಿಗಳು ತಮ್ಮದೇ ಆದ ರೀತಿಯಲ್ಲಿ ಸಂಭಾಷಣೆ ನಡೆಸುತ್ತವೆ, ವಿಚಾರ ವಿನಿಮಯ ಮಾಡಿಕೊಳ್ಳುತ್ತವೆ. ಇದರ ಅಂಗವಾಗಿ ಶಬ್ದ, ವಾಸನೆ,ಸ್ಪರ್ಶ, ಮುಖ ಲಕ್ಷಣ, ಅಂಗವಿನ್ಯಾಸ-ಮುಂತಾದುವನ್ನು ಬಳಸಿಕೊಳ್ಳುತ್ತವೆ.

ಆದರೆ ಶಕುಂತಲ-ದುಷ್ಯಂತರ ನಡುವೆ ಇದ್ದ ಮಧುರ ಪ್ರೀತಿಯನ್ನೊ, ಧೃತರಾಷ್ಟ್ರನು ದುರ್ಯೋಧನನ ಮೇಲೆ ಇಟ್ಟಿದ್ದ ಅಂಧ ಪ್ರೀತಿಯನ್ನೊ ,ಅಥವಾ ಶಬರಿಗೆ ರಾಮನ ಮೇಲಿದ್ದ ದಿವ್ಯ ಪ್ರೀತಿಯನ್ನೊ ಪ್ರಾಣಿಗಳೆರಡರ ನಡುವೆ ಕಾಣಬಹುದೆ ? ಪ್ರಾಣಿಗಳಲ್ಲಿರಬಹುದಾದ ಪರಸ್ಪರ ಪ್ರೀತಿಯ ಬಗ್ಗೆ ಹಲವಾರು ಸಂಶೋಧನೆಗಳು ಆಗಿವೆ. ಪ್ರಾಣಿಗಳ ವರ್ತನೆಯ ಬಗ್ಗೆ ಅವು ಜೊತೆಯಲ್ಲಿರುವುದು. ಒಂದರಲ್ಲೊಂದು ಅನುರಕ್ತವಾಗುವುದು, ಒಂದಕ್ಕೊಂದು ಮೇವು ಉಣಿಸುವುದು, ಜೋಡಿಯಲ್ಲೊಂದು ಸತ್ತಾಗ ಸಂಗಾತಿಯು ದುಃಖವನ್ನು ವ್ಯಕ್ತಪಡಿಸುವುದು-ಇವುಗಳ ಬಗ್ಗೆ ನಿಸರ್ಗ ವಿಜ್ಞಾನಿಗಳು ಮತ್ತು ಪ್ರಾಣಿ ತಜ್ಞರು ಹಲವಾರು ಗಂಭೀರ ಅಧ್ಯಯನಗಳನ್ನು ನಡೆಸಿದ್ದಾರೆ. ಆಸ್ಟ್ರಿಯಾ ದೇಶದ ಕಾನ್ರಾಡ್ ಲೊರೆನ್ಜ್ ಮತ್ತು ಹಾಲೆಂಡ್‌ನ ನಿಕೊ ಟಿನ್‌ಬರ್‌ಜೆನ್ ಇವರ ಪೈಕಿ ಅಗ್ರಗಣ್ಯರು. ಇವರಲ್ಲದೆ ಮೇಟ್ಟಿಸ್ಯೂ ಆ್ಯಥೆನ್, ಜೇನ್ ಗುಡಾಲ್, ಹೋಪ್ ಪೆಡೆನ್, ಗೆವಿನ್ ಮಾರ್ಕ್ಸ್‌ವೆಲ್-ಇವರುಗಳ ಕೊಡುಗೆಯೂ ಈ ಕ್ಷೇತ್ರದಲ್ಲಿ ಗಮನಾರ್ಹವಾಗಿದೆ.

ಪ್ರಾಣಿ ವರ್ತನೆಯಲ್ಲಿ-ಮಾನವನೂ ಸೇರಿದಂತೆ- 'ಹುಟ್ಟರಿವು' ಅಥವಾ ಇನ್‌ಸ್ಟಿಂಕ್ಟ್ ಪ್ರಮುಖ ಪಾತ್ರ ವಹಿಸುತ್ತದೆ. 'ಹುಟ್ಟರಿವು' ಎಂದರೆ 'ಪ್ರಯತ್ನಪಟ್ಟು ಕಲಿಯದೆ, ಹುಟ್ಟಿನಿಂದಲೇ ಬರುವ ವರ್ತನೆ ಅಥವಾ ಸಹಜ ಸ್ವಭಾವದಿಂದ ಪ್ರಕಟವಾಗುವ ಗುಣ'. ಇದು ಮಕ್ಕಳಿಗೆ ತಂದೆ ತಾಯಿಯಿಂದ ವಂಶ ಪಾರಂಪರ್ಯವಾಗಿ ಹಾದು ಬರುತ್ತದೆ. ಮೇಲ್ನೋಟಕ್ಕೆ ಪ್ರೀತಿಯಂತೆ ತೋರುವ ಹಲವಾರು ಪ್ರಾಣಿವರ್ತನೆಯು, ಕೇವಲ ಹುಟ್ಟರಿವಿನಿಂದ ಪ್ರೇರಿತ-ಎಂದು ಕೆಲವು ತಜ್ಞರು ಅಭಿಪ್ರಾಯ ಪಡುವುದುಂಟು. ತಾಯಿಯ ಜೊತೆಯಲ್ಲಿರುವ ನಾಯಿಮರಿಯನ್ನು ಬೇರ್ಪಡಿಸಲು ಪ್ರಯತ್ನಿಸಿದಾಗ ತಾಯಿ ಬೊಗಳಿ ಎಗರಿ ಬೀಳುವುದು, ಪಕ್ಷಿಯು ತನ್ನ ಮರಿಗೆ ಗುಟುಕು ಕೊಡುವುದು, ಕುರಿಮರಿಯು ತನ್ನ ತಾಯಿಯನ್ನು ಹಿಂಬಾಲಿಸುವುದು- ಇವುಗಳಿಗೆ 'ಹುಟ್ಟರಿವು' ಅಥವ 'ಬಂಧ' ಕಾರಣವೆಂದು ಹೇಳಬಹುದು. ಆದರೆ ಕೇವಲ 'ಹುಟ್ಟರಿವು' ಅಥವಾ 'ಬಂಧ' ದಿಂದ ವಿವರಿಸಲಾಗದ ಹಲವು ಪ್ರಾಣಿ ವರ್ತನೆಯನ್ನು ತಜ್ಞರು ಗಮನಿಸಿ ವರದಿ ಮಾಡಿದ್ದಾರೆ. ಅಂತಹ ಕೆಲವು ನಿದರ್ಶನಗಳನ್ನು ನೋಡೋಣ.

ಬಾತುಗಳ ಜೋಡಿಯಲ್ಲಿನ ಹೆಣ್ಣು ಬಾತನ್ನು ನರಿಯು ಕೊಂದು, ಅರ್ಧಭಾಗವನ್ನು ತಿಂದು, ಉಳಿದ ಕಳೇಬರವನ್ನು ಅಲ್ಲೇ ಬಿಟ್ಟು ಹೋದಾಗ, ಗಂಡು ಬಾತು ಹೇಗೆ ವರ್ತಿಸಿತೆಂಬುದನ್ನು ನಿಸರ್ಗ ವಿಜ್ಞಾನಿ ಕಾನ್ರಾಡ್ ಲೊರೆನ್ಸ್ ವರ್ಣಿಸಿದ್ದಾರೆ. ಸಂಗಾತಿಯ ಕಳೇಬರದ ಪಕ್ಕ ಮೌನವಾಗಿ ನಿಂತ ಗಂಡು ಬಾತಿನ ದೇಹ ಮತ್ತು ತಲೆ ಕ್ರಮೇಣ ಬಗ್ಗಿದವು. ತನ್ನನ್ನು ಬೇರೆ ಬಾತುಗಳಿಂದ ರಕ್ಷಿಸಿಕೊಳ್ಳಲೂ ಇಷ್ಟಪಡದ ಆ ಗಂಡು ಬಾತು, ಚೇತರಿಸಿಕೊಂಡು ಹೊಸ ಸಂಗಾತಿಯನ್ನು ಹುಡುಕಿಕೊಳ್ಳಲು ಒಂದು ವರ್ಷವೇ ಬೇಕಾಯಿತು.

ಕ್ಲೀವ್‌ಲ್ಯಾಂಡ್‌ನ ಮೆಟ್ರೊಪಾರ್ಕ್

ಮೃಗಾಲಯದಲ್ಲಿದ್ದ ಗಂಡು ಗೊರಿಲ್ಲಾಗೆ ಎರಡು ಹೆಣ್ಣು ಗೊರಿಲ್ಲಾಗಳನ್ನು ಪರಿಚಯಿಸಿದರು. ಗಂಡು ಗೊರಿಲ್ಲ ಈ ಎರಡೂ ಹೆಣ್ಣು ಗೊರಿಲ್ಲಾಗಳ ಜೊತೆಗೂಡಲು ನಿರಾಕರಿಸಿತು. ಆದರೆ, ವಯಸ್ಸಾದ ಹೆಣ್ಣು ಗೊರಿಲ್ಲಾ ಒಂದನ್ನು ಭೇಟಮಾಡಿದಾಗ, ಆಶ್ಚರ್ಯಕರ ರೀತಿಯಲ್ಲಿ ಅನುರಕ್ತಗೊಂಡಿತು. ಹೆಣ್ಣು ಗೊರಿಲ್ಲಾಗೆ ಮರಿಗಳಾಗುವ ವಯಸ್ಸು ಮೀರಿದ್ದರಿಂದ, ಮೃಗಾಲಯದ ವ್ಯವಸ್ಥಾಪಕರು ಈ ಜೋಡಿಯನ್ನು ಬೇರ್ಪಡಿಸಿ, ಗಂಡು ಗೊರಿಲ್ಲಾವನ್ನು ಬೇರೊಂದು ಮೃಗಾಲಯಕ್ಕೆ ವರ್ಗಾಯಿಸಬೇಕಾಯಿತು. ಸಂಗಾತಿಯ ಆಯ್ಕೆಯಲ್ಲಿ ಪ್ರೀತಿಯ ಪಾತ್ರವು ಇರುವುದಕ್ಕೆ ಸಾಧ್ಯವೆಂಬುದು ಈ ಘಟನೆಯಿಂದ ಕಂಡುಬರುತ್ತದೆ

ಹಕ್ಕಿಗಳ ಪರಸ್ಪರ ಪ್ರೀತಿಯ ಬಗ್ಗೆ ಬೆಳಕು ಚೆಲ್ಲುವ, ಇಂತಹುದೇ ಕುತೂಹಲಕಾರಿ ಘಟನೆಯನ್ನು ಪಕ್ಷಿಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿರುವ ಸ್ಯೂ ಟ್ಯಡೆನ್ ಹೇಳಿದ್ದಾರೆ. ಸುಂದರ ರೆಕ್ಕೆ ಪುಕ್ಕಗಳಿರುವ ಒಂದು ಗಂಡು ಗಿಣಿಯನ್ನು ಅವರು ಪಂಜರದಲ್ಲಿದ್ದ ಹೆಣ್ಣು ಗಿಣಿಗೆ ಪರಿಚಯಿಸಿಕೊಟ್ಟರು. ಆದರೆ ಗಂಡು ಗಿಣಿಯು ಆ ಹೆಣ್ಣು ಗಿಣಿಯನ್ನು ಸಂಗಾತಿಯಾಗಿ ಸ್ವೀಕರಿಸುವುದಿರಲಿ, ಪಂಜರದೊಳಗೆ ಹೆಣ್ಣು ಗಿಣಿ ಇರುವುದರ ಅರಿವೇ ಇಲ್ಲದಂತೆ ನಡೆದುಕೊಂಡಿತಂತೆ. ಆಶ್ಚರ್ಯಕರ ಸಂಗತಿಯೆಂದರೆ, ಹಲವು ತಿಂಗಳುಗಳ ತರುವಾಯ ಅದೇ ಗಂಡು ಗಿಣಿಗೆ, ಸರಿಯಾಗಿ ರೆಕ್ಕೆ ಪುಕ್ಕಗಳೇ ಇಲ್ಲದೆ, ಚರ್ಮವೆಲ್ಲ ಸುಕ್ಕುಗಟ್ಟಿ, ಕ್ಷೀಣ ಸ್ಥಿತಿಯಲ್ಲಿದ್ದ ಹೆಣ್ಣು ಗಿಣಿಯನ್ನು ಪರಿಚಯಿಸಿದಾಗ, ಇದನ್ನು ಪ್ರಾಣ ಸಂಗಾತಿಯೆಂದೇ ತಿಳಿದು, ಇದರ ಜೊತೆಗೂಡಿ, ಮರಿಯನ್ನು ಕೂಡ ಮಾಡಿತು.

ಹುಟ್ಟರಿವು ಪ್ರಾಣಿಗಳನ್ನು ಜೊತೆಯಾಗಿರುವುದಕ್ಕೆ ಪ್ರೇರೇಪಿಸಬಹುದಾದರೂ, ಅವು ಸಂಗಾತಿಯನ್ನು ಆಯುವಾಗ ಪ್ರೀತಿಯ ಪಾತ್ರವು ಇರುವುದಕ್ಕೆ ಸಾಧ್ಯ-ಎಂದು ಈ ನಿದರ್ಶನವು ಕೂಡ ತೋರಿಸುತ್ತದೆ.

ಮಾನವ ಮತ್ತು ಪ್ರಾಣಿಗಳ ನಡುವೆ ಇರಬಹುದಾದ ಪ್ರೀತಿ ವಾತ್ಸಲ್ಯವನ್ನು ತೋರಿಸುವ ಮತ್ತೊಂದು ಘಟನೆಯನ್ನು ಗೆವಿನ್ ಮ್ಯಾಕ್ಸ್‌ವೆಲ್ ತಮ್ಮ 'ರೇವೆನ್ ಸೀಕ್ ದೈ ಬ್ರದರ್ಸ್' ಎಂಬ ಪುಸ್ತಕದಲ್ಲಿ ವಿವರಿಸಿದ್ದಾರೆ. ಕಾಲಿಲ್ಲದ, ಊರುಗೋಲು ಸಹಾಯದಿಂದ ನಡೆದಾಡುತ್ತಿದ್ದ ಒಬ್ಬ ವ್ಯಕ್ತಿ ತಾನು ಬಹಳ ಅಕ್ಕರೆಯಿಂದ ಸಾಕಿದ್ದ ನೀರು ನಾಯಿಯನ್ನು ಮ್ಯಾಕ್ಸ್‌ವೆಲ್‌ಗೆ ಕೊಟ್ಟು, ಇದನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಹೇಳಿ, ಸ್ವಲ್ಪ ಕಾಲದ ಬಳಿಕ ತೀರಿಕೊಂಡನು. ಆ ನೀರು ನಾಯಿ ಮ್ಯಾಕ್ಸ್‌ವೆಲ್ ನಿರ್ಮಿಸಿದ್ದ ಬೇಲಿಯ ಆವರಣದಿಂದ ಆಗಿಂದಾಗ್ಗೆ ತಪ್ಪಿಸಿಕೊಂಡು ಹತ್ತಿರದ ಹಳ್ಳಿಗೆ ಹೋಗುತ್ತಿತ್ತು. ಅಲ್ಲಿ ಊರುಗೋಲು ಬಳಸುತ್ತಿದ್ದ ಒಬ್ಬ ವ್ಯಕ್ತಿಯನ್ನು ಹಿಂಬಾಲಿಸಿ, ಅವನ ಮನೆಯಲ್ಲಿ ಗೂಡು ಕಟ್ಟುವುದಕ್ಕೆ ಪ್ರಯತ್ನಿಸುತ್ತಿತ್ತು. ಊರುಗೋಲನ್ನು ಉಪಯೋಗಿಸುತ್ತಿದ್ದ ಈತನನ್ನು ನೋಡಿದಾಗ ನೀರು ನಾಯಿಗೆ ತನ್ನನ್ನು ಮಮತೆಯಿಂದ ಸಲಹಿದ ಮೊದಲ ಮಾಲೀಕನ ನೆನಪು ಬರುತ್ತಿದ್ದಿರಬಹುದು - ಎಂದು ಮ್ಯಾಕ್ಸ್‌ವೆಲ್ ಅಭಿಪ್ರಾಯಪಟ್ಟಿದ್ದಾರೆ.

ಇಷ್ಟಲ್ಲದೆ ಪ್ರಾಣಿ ಜೋಡಿಗಳು ಪರಸ್ಪರ ತೋರುವ ಶ್ರದ್ಧೆಯಲ್ಲಿ ಪ್ರೇಮದ

ಕುರುಹು ಇದೆ ಎಂದು ಪ್ರಾಣಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ತಜ್ಞರು ಅಭಿಪ್ರಾಯ ಪಡುತ್ತಾರೆ. ಹೆಬ್ಬಾತುಗಳು, ಹಂಸಗಳು, ಚೀನೀಬಾತುಗಳು ವೈವಾಹಿಕ ನಿಷ್ಠೆಯ ಪ್ರತೀಕಗಳಾದರೆ ; ತಂತ್ರ ಮತ್ತು ಮೋಸ ಗಳಿಗೆ ಪ್ರಸಿದ್ಧವಾಗಿರುವ ಹುಲ್ಲುಗಾವಲಿನ ತೋಳಗಳು ಕೂಡ ಪರಸ್ಪರ ಶ್ರದ್ಧೆ ತೋರಿಸಿ, ಸ್ಥಿರ ಜೋಡಿಗಳಾಗಿ ಉಳಿಯುತ್ತವೆ.

ಇಷ್ಟಾದರೂ, ಪ್ರಾಣಿಗಳಿಗೆ ಭಾವ ಪ್ರಧಾನವಾದ ಅಥವಾ ರಮ್ಯ ಪ್ರೇಮ (Romantic Love) ಗೊತ್ತಿಲ್ಲವೆಂದು ವಾದಿಸುವ ಜೇನ್ ಗುಡಾಲ್, 'ಕೋಮಲತೆ, ರಕ್ಷಣೆ, ಸಹನೆ, ಆಧ್ಯಾತ್ಮಿಕ ಉಲ್ಲಾಸಗಳನ್ನೊಳಗೊಂಡ ಉದ್ವೇಗಭರಿತ ಪ್ರೇಮ ಪ್ರಾಣಿಗಳೆರಡರ ನಡುವೆ ಇರುವ ಸಾಧ್ಯತೆ ಕಡಿಮೆ'-ಎಂದು ಅಭಿಪ್ರಾಯ ಪಡುತ್ತಾರೆ.

ಮಾನವನ ಕಲ್ಪನೆಯಲ್ಲಿರುವ, ಉದ್ವೇಗಭರಿತ, ಭಾವೋದ್ರಿಕ್ತ ಪ್ರೀತಿಯು ಪ್ರಾಣಿಗಳ ನಡುವೆ ಇರಬಹುದೆಂಬುದಕ್ಕೆ ಸಾಕಷ್ಟು ವೈಜ್ಞಾನಿಕ ಪುರಾವೆಗಳಿಲ್ಲದಿರಬಹುದು. ಆದರೆ ವನ್ಯ ಪ್ರಪಂಚದ ದಿವ್ಯ ಮೃಗಗಳು ಹರ್ಷ, ಪ್ರೀತಿ ಮತ್ತು ದುಃಖಗಳನ್ನು ಅನುಭವಿಸಬಲ್ಲವು ಎಂದು ನಾವು ಈವರೆಗೆ ಕೇಳಿದ ನಿದರ್ಶನ ಗಳು ಸಾದರಪಡಿಸುತ್ತವೆ.

ಯಾವ ಪ್ರಾಣಿಯನ್ನೂ ಹಿಂಸಿಸದಿರುವುದು ; ಬೇರೆಯವರ ವಸ್ತುಗಳನ್ನು ಕಡಿಯದಿರುವುದು ಮತ್ತು ಸುಳ್ಳು ಹೇಳದಿರುವುದು - ಇವೇ ಸತ್ಪುರುಷರು ಆಚರಿಸಬೇಕಾದ ಧರ್ಮಗಳು.

ಭಗವಾನ್ ಮಹಾವೀರ

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು ; ಎಲ್ಲರನ್ನೂ ಪ್ರೀತಿಸುವುದು ; ಎಲ್ಲರಿಗೂ ಒಳ್ಳೆಯದನ್ನು ಬಯಸುವುದು - ಇದೇ ಅಹಿಂಸಾಧರ್ಮ.

-ಮಹಾತ್ಮ ಗಾಂಧೀಜಿ

ಎಷ್ಟೇ ಚೆನ್ನಾಗಿದ್ದರೂ ಭವಿಷ್ಯವನ್ನು ನಂಬಬಾರದು ; ಕಳೆದು ಹೋದದ್ದನ್ನು ಕುರಿತು ಚಿಂತಿಸಬಾರದು ; ವರ್ತಮಾನ ಕಾಲದ ಕರ್ತವ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸಬೇಕು.

ಲಾಂಗ್‌ಫೆಲೋ

ಹೊಗಳಿಕೆಯೆಂಬ ಮಂತ್ರ ದಂಡ

ಗೋಪಾಲ ಆತ್ರಿಕ
೭-೫-೪೨ ‘ರಮಾ ನಿಲಯ’
ಜವಾಹರ ನಗರ
ರಾಯಚೂರು-೫೮೪ ೧೦೧

ಬೇಸಿಗೆಯ ಒಂದು ಮಧ್ಯಾಹ್ನದ ಸಮಯ. ನಾನು ಮತ್ತು ನನ್ನ ಪತ್ನಿ ಇಬ್ಬರು ಗೆಳೆಯರು ತೋಟದಲ್ಲಿ ಕುಳಿತಿದ್ದೆವು. ಅವರ ಆರು ವರ್ಷದ ಮಗ ತನ್ನಷ್ಟಕ್ಕೆ ಆಟಗೆಗಳ ಜೊತೆ ಆಡುತ್ತಿದ್ದ. ಅವನಿಗೆ ಯಾರೂ ಏನೂ ಅನ್ನಲಿಲ್ಲ. ಕೊನೆಗೆ ಸುಮಾರು ಒಂದು ಗಂಟೆಯ ಅನಂತರ ಆ ಮಗು ನಮ್ಮ ಕಡೆಗೆ ಬಂದು ತನ್ನ ಕೈಯಲ್ಲಿದ್ದ ಸುರುಳಿಸುತ್ತಿದ್ದ ಪತ್ರಿಕೆಯಿಂದ ತನ್ನ ತಂದೆಯ ತಲೆಗೆ ಹೊಡೆದ. ''ಕಿಡಿಗೇಡಿ.... ದರಿದ್ರ...'' ಎಂದು ಅವನ ತಾಯಿ ಬಯ್ಯುದದ್ದು ಮಕ್ಕಳ ಮನಶಾಸ್ತ್ರಜ್ಞ ಹಾಗೂ ಒಬ್ಬ ಪಾಲಕನಾಗಿರುವ ನನಗೆ ಈ ಮಾತುಗಳು ಸರಿಯೆನಿಸಲಿಲ್ಲ. ಮಗುವಿನ ಒಳ್ಳೆಯ ವರ್ತನೆ ನಮ್ಮ ಗಮನ ಸೆಳೆದಿರಲಿಲ್ಲ. ಆದ್ದರಿಂದ ಅವನು ಕೆಟ್ಟ ವರ್ತನೆಯ ಮೂಲಕ ತನ್ನೆಡೆಗೆ ನಮ್ಮ ಗಮನ ಸೆಳೆಯುವುದರಲ್ಲಿ ಯಶಸ್ವಿಯಾಗಿದ್ದ.

ಅನೇಕ ಪಾಲಕರಂತೆ, ಈ ತಾಯಿ ಕೂಡಾ, ಮಗು ಚೆನ್ನಾಗಿ ವರ್ತಿಸಿದಾಗ ಪುರಸ್ಕರಿಸದೆ, ಅವನು ಕೆಟ್ಟದಾಗಿ ವರ್ತಿಸಿದ್ದನ್ನು ಮಾತ್ರ ಲಕ್ಷ್ಯಕ್ಕೆ ತೆಗೆದುಕೊಂಡಿದ್ದಳು.

ಮಕ್ಕಳು ಕೆಟ್ಟದಾಗಿ ವರ್ತಿಸಿದಾಗ- ಸ್ವಲ್ಪ ಎಚ್ಚರಿಕೆ ನೀಡದೆ ತಮ್ಮ ಸಿಟ್ಟನ್ನೆಲ್ಲಾ ಹೊರಹಾಕುತ್ತಾರೆ. ಮಕ್ಕಳ ವರ್ತನೆಯಲ್ಲಿ ಏನಾದರೂ ಲೋಪವಿದ್ದರೆ ಒದರಾಡಿ ಬಿಡುತ್ತಾರೆ. ಆದರೆ ಅದೇ ಪಾಲಕರು ಮಕ್ಕಳು ಒಳ್ಳೆಯ ರೀತಿಯಲ್ಲಿ ನಡೆದು ಕೊಂಡಾಗ ಹೊಗಳಲು ಮರೆಯುತ್ತಾರೆ.

ನಮ್ಮ ಇನ್ನೊಬ್ಬ ಸ್ನೇಹಿತೆ ಅವಕಾಶ ಸಿಕ್ಕಾಗಲೆಲ್ಲ ತನ್ನ ನಾಲ್ಕು ಮಕ್ಕಳನ್ನು ಹೊಗಳುತ್ತಿದ್ದಳು. ಆಕೆಯ ಮಕ್ಕಳು ಒಮ್ಮೆ ಚಹಾ ತಯಾರಿಸಿದ್ದರು. ನಾವು ಕುಡಿದನಂತರ ತಟ್ಟೆಗಳನ್ನೆಲ್ಲಾ ತೆಗೆದು ಸ್ವಚ್ಛಗೊಳಿಸಿದರು. ''ನೀವೆಲ್ಲಾ ಚೆನ್ನಾಗಿ ಕೆಲಸ ಮಾಡಿದ್ದೀರಿ'' ಎಂದೆನ್ನುತ್ತಲೇ ಇದ್ದಳು. ಅಂದು ಸಂಜೆ ಅವರನ್ನೆಲ್ಲಾ ಹತ್ತಿರ ಕರೆದು ಅಪ್ಪಿ ತನ್ನ ಆನಂದ ವ್ಯಕ್ತಪಡಿಸಿದಳು.

ಈ ಮಕ್ಕಳೇನಾದರೂ ಅಸಭ್ಯವಾಗಿ ವರ್ತಿಸಿದರೆ, ಅವರ ಕಡೆ ತನ್ನ ಕಣ್ಣು ನೋಟ ಹರಿಸುತ್ತಿದ್ದಳು. ಅನಂತರ ತಾನು ೧ ರಿಂದ ೧೦ರವರೆಗೆ ಎಣಿಸಹತ್ತುತ್ತಿದ್ದಳು. ''೧೦ ರ ಎಣಿಕೆ ಆದ ನಂತರ ನೀನು ಏನುಮಾಡುತ್ತೀ? ಎಂದು ನಾನು ಕೇಳಿದೆ. ನನ್ನ ಕಡೆ ಕೂಡಾ ಅದೇ ರೀತಿ ನೋಡುತ್ತ ''ನಾನು ಎಂದೂ ೧೦ ರವರೆಗೆ ತಲುಪುವುದೇ ಇಲ್ಲ'' ಎಂದು ಉತ್ತರಿಸಿದಳು.

ಹೊಗಳಿಕೆ ನಮಗೆಲ್ಲಾ ಆ ಅವಶ್ಯತೆಗಳಿಗೆ ಅಥವಾ ಶಿಕ್ಷೆಗಿಂತಲೂ ಇದು ಚೆನ್ನಾಗಿ ಕೆಲಸ ಮಾಡುತ್ತದೆ. ಅದು ಪರಿಣಾಮಕಾರಿಯಾಗಬೇಕಾದರೆ ಶಿಕ್ಷೆ ಕಠಿಣವಾಗಿರಬೇಕು. ಆದರೆ ಮಕ್ಕಳಿಗೆ ಅಪ್ಪುಗೆ ಅಥವಾ ಹೊಗಳಿಕೆಯ ಪುರಸ್ಕಾರಗಳು ಬಹಳ

೧೯೯೮ ರ ನವೆಂಬರ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಸ್ಯಾಬಟ್ರ ಅವರ ಪೇರೆಂಟಿಂಗ್ ಇನ್- ಪ್ರೈಸ್ ಆಫ್ ಪ್ರೈಸ್ ಎಂಬ ಲೇಖನದ ಅನುವಾದ

ಪರಿಣಾಮಕಾರಿ! ಅವರ ಜೊತೆಗಿನ ಜೀವನ ಗುಲಾಬಿ ಹೂವಿನ ಹಾಸಿಗೆಯಾಗಲು ಸಾಧ್ಯವಿದೆ; ಅಲ್ಲಿ ಮುಳ್ಳುಕಂಟಿಗಳೂ ಉಂಟು.

ಹೊಗಳಿಕೆಯ ಜೊತೆಗೆ ಮಕ್ಕಳು ಪ್ರತಿಷ್ಠೆ ಮತ್ತು ಜವಾಬ್ದಾರಿಯನ್ನೂ ಬಯಸುತ್ತಾರೆ. ನಿಜ ಹೇಳಬೇಕೆಂದರೆ, ನಾವು ವಿಶೇಷ ವ್ಯಕ್ತಿಗಳು ಬಹುಮುಖ್ಯವೆಂಬ ಅನಿಸಿಕೆ ನಮಗೆ ಅವಶ್ಯ ಬೇಕಾದರೆ ನಮ್ಮ ದೌರ್ಬಲ್ಯಗಳ ಬಗ್ಗೆ ಹೇಳಿರಿ...ಆದರೆ ನಮ್ಮ ಸಾಮರ್ಥ್ಯಗಳ ಬಗ್ಗೆ ಹೇಳಲು ಮರೆಯದಿರಿ.

ಒಂದು ಮಗುವಿಗೆ ಪ್ರತಿಷ್ಠೆಯ ರುಚಿ ತೋರಿಸುವುದರ ಮೂಲಕ ಅವನ ಅಥವಾ ಅವಳ ನಡತೆಯಲ್ಲಿನ ದೋಷಗಳನ್ನು ದೂರಗೊಳಿಸಿ ಗುಣಗಳನ್ನು ತೀವ್ರಗೊಳಿಸಬಹುದು. ಗ್ರೆಗರಿ ಎಂಬ ಆರುವರ್ಷದ ಹುಡುಗ ವಿಪರೀತವಾಗಿ ಬೆಳೆದಿದ್ದ. ಆ ಶಿಶುವಿಹಾರದಲ್ಲಿ ಅವನಷ್ಟು ದೊಡ್ಡ ಮಕ್ಕಳು ಬೇರಾರೂ ಇರಲಿಲ್ಲ. ಅವನು ಇತರರನ್ನು ಹೆದರಿಸುತ್ತಿದ್ದನು. ಅವನು ಆಟದ ಬಯಲಿನಲ್ಲಿ ಓಡುತ್ತಿದ್ದರೆ, ಉನ್ಮಾದಗೊಂಡ ಒಂದು ವಿದ್ಯುದ್ಯಾಗ ದಾರಿಯಲ್ಲಿ ಬಂದವರನ್ನು ಕೆಡವುತ್ತ ಸಾಗುವುದನ್ನು ನೆನಪಿಗೆ ತರುತ್ತಿತ್ತು. ಮಕ್ಕಳ ಮನಶ್ಶಾಸ್ತ್ರಜ್ಞನಾದ ನಾನು ಶಾಲೆಯ ಉಪಾಧ್ಯಾಯಿನಿ ಜೊತೆ ಚರ್ಚಿಸಿ, ಈ ಬಗ್ಗೆ ಪ್ರಯೋಗ ಮಾಡಲು ನಿರ್ಧರಿಸಿದೆವು.

ಆಗ ಕ್ರಿಸ್‌ಮಸ್ ಹಬ್ಬ ಸಮೀಪಿಸಲಿತ್ತು. ಗ್ರೆಗರಿಗಾಗಿ ಸುನೆಹರಿ ಕಾಗದದಿಂದ ಒಂದು ಶಿರಸ್ತ್ರಾಣ ಮಾಡಿದೆವು. ಏಸುಕ್ರಿಸ್ತನ ಜನಪದ ನಾಟಕದಲ್ಲಿ ಸ್ವಲ್ಪ ತಿದ್ದುಪಡಿ ಮಾಡಿ, ಗ್ರೆಗರಿಗೆ ಗೋಲಿಯಥನ ಪಾತ್ರ ಕೊಟ್ಟೆವು. 'ನೀನು ಬಹಳ ಬಲಶಾಲಿ, ಆದರೆ ನೀನು, ಶಿಶು ಏಸು, ಅವನ ತಾಯಿ ಮೇರಿ ಮತ್ತು ಉಳಿದ ಮಕ್ಕಳನ್ನು ನೋಡಿಕೊಳ್ಳಬೇಕು'' ಎಂದು ಆ ಪಾತ್ರದ ಬಗ್ಗೆ ಅವನಿಗೆ ವಿವರಿಸಲಾಯಿತು.

ಗ್ರೆಗರಿ ಎಷ್ಟು ಚೆನ್ನಾಗಿ ನಟಿಸಿದನೆಂದರೆ, ಅವನೇ ನಾಟಕದ ಮುಖ್ಯ ಆಕರ್ಷಣೆಯಾಗಿ ಬಿಟ್ಟ. ಇದಾದ ನಂತರ ಕೂಡಾ ಆಟದ ಮೈದಾನದಲ್ಲಿ ಅವನು ತನ್ನ ಸುನೆಹರಿ ಕಾಗದದ ಶಿರಸ್ತ್ರಾಣ ಧರಿಸಿ, ಉಳಿದ ಮಕ್ಕಳಿಗೆ ಯಾವುದೇ ಅಪಾಯವಾಗದಂತೆ ನೋಡಿಕೊಳ್ಳುತ್ತಿದ್ದನು. ಅವನ ಈ ಒಳ್ಳೆಯ ವರ್ತನೆಯನ್ನು ಅವನ ಉಪಾಧ್ಯಾಯಿನಿ ಹೊಗಳಿದಳು. ಹಿಂದೆ ಶಿಕ್ಷೆ ಅವನ ಮೇಲೆ ಪರಿಣಾಮ ಬೀರಿರಲಿಲ್ಲ. ಅವನು ಯಾವಾಗಲೂ ಬಯಸಿದ್ದು ಪ್ರತಿಷ್ಠೆ ಮತ್ತು ಮನ್ನಣೆ.

ಜವಾಬ್ದಾರಿ ವಹಿಸಿಕೊಳ್ಳುವಲ್ಲಿ ಮಕ್ಕಳಿಗೆ ಪ್ರೋತ್ಸಾಹ ಮತ್ತು ಸಹಾಯದ ಅವಶ್ಯಕತೆ ಇರುತ್ತದೆ. ಒಬ್ಬ ವ್ಯಕ್ತಿ ತನ್ನ ನಡತೆಯ ಬಗ್ಗೆ ಜವಾಬ್ದಾರಿಯುತವಾಗಿರುವುದು ಮತ್ತು ಇತರರ ಅಗತ್ಯಗಳಿಗೆ ಸ್ಪಂದಿಸುವುದೇ ಶಿಸ್ತು.

ಜೇಮ್ಸ್ ನಾಲ್ಕು ವರ್ಷದ ಬಾಲಕ. ಒಂದು ದಿನ ಅವನ ತಾಯಿಯ ಫೋನ್ ಬಂತು. ''ನನ್ನ ಮಗನ ಧ್ವನಿ ಬಹಳ ಜೋರಾಗಿದೆ'' ಎಂದಳು. ''ಎಷ್ಟು ಜೋರು?'' ಎಂದೆ. ಅದಕ್ಕೆ ಅವಳು, ಅವನ ಧ್ವನಿಯಿಂದ ನೆರೆಹೊರೆಯವರು ಕುಪಿತರಾಗಿದ್ದಾರೆ ಮತ್ತು ಇತರರ ಮಕ್ಕಳು ಹೆದರುತ್ತಿದ್ದಾರೆ'' ಎಂದಳು. ಜೇಮ್ಸ್‌ನನ್ನು ನನ್ನ ಹತ್ತಿರ ಕರೆದು ತಂದಳು. ಆ ತಾಯಿ ಅವನ ಮೇಲೆ ಕೂಗಾಡಿ ಛಟಾರೆಂದು ಹೊಡೆದು ಮೆತ್ತಗೆ ಮಾತಾಡುವಂತೆ ಮಾಡಲು ಎಲ್ಲ ರೀತಿಯಲ್ಲೂ ಪ್ರಯತ್ನಿಸಿದ್ದಳು.

'ಈ ಬಾಲಕನ ಗಲಾಟೆ ಕಡಿಮೆ ಮಾಡಲು ನನಗೊಂದು ಯೋಚನೆ ಹೊಳೆಯಿತು. ಕೊಕೊ ಡಬ್ಬಿಯ ತಗಡಿನ ಮುಚ್ಚಳಿಕೆಯೊಂದನ್ನು ತೆಗೆದುಕೊಂಡು

ಅದರಲ್ಲಿ ಕೆಲವು ರಂಧ್ರಗಳನ್ನು ಮಾಡಿ ದಾರ ಪೋಣಿಸಿ ಅದನ್ನು ಜೇಮ್ಸ್‌ನ ಕೊರಳಲ್ಲಿ ಹಾಕಿದೆ. ''ಇದೇಕೆ ?'' ಎಂದು ಜೇಮ್ಸ್ ಆರ್ಭಟಿಸಿದ.

ನಾನು ಜೇಮ್ಸ್‌ನಿಗೆ ಒಂದು ರೇಡಿಯೊ ತೋರಿಸಿ ಅದರಲ್ಲಿ ಧ್ವನಿಯನ್ನು ಏರಿಸುವ ಮತ್ತು ಕಡಿಮೆ ಮಾಡುವ ಸಾಧನವಿರುವುದನ್ನು ವಿವರಿಸಿದೆ. ಅವನು ಕೂಡಾ ಮಾತಾಡುವಾಗ ಈ ಕೊಕೊ ತಗಡಿನ ಮುಂಚ್ಚಳಿಕೆಯನ್ನು ಧ್ವನಿ ನಿಯಂತ್ರಕದಂತೆ ಬಳಸಬೇಕೆಂದು ತಿಳಿಸಿ ಹೇಳಿದೆ. ಅವನ ಧ್ವನಿ ಏರಿದಾಗಲೆಲ್ಲ ಅವನ ತಾಯಿ ''ಸ್ವಲ್ಪ ಮೆತ್ತಗೆ...'' ಎನ್ನುತ್ತಿದ್ದಳು. ಇವನು ಮೆತ್ತಗೆ ಮಾತಾಡಿದಾಗ, ''ಹಾಂ... ಇದೇ ಸರಿ'' ಎಂದು ಅವನ ತಾಯಿ ಅನ್ನುತ್ತಿದ್ದಳು.

ಕೆಲವೇ ದಿನಗಳಲ್ಲಿ ಜೇಮ್ಸ್‌ನ ಧ್ವನಿ ಸಾಮಾನ್ಯ ಸ್ಥಿತಿಗೆ ಬಂತು. ಒಂದು ಹೊಸ ಉಪಾಯ ಮತ್ತು ಹೊಗಳಿಕೆ ಆಶ್ಚರ್ಯಕರ ರೀತಿಯಲ್ಲಿ ಕೆಲಸ ಮಾಡಿದ್ದವು.

ಅನೇಕ ವರ್ಷಗಳ ಹಿಂದೆ ನಾನು ಮನಶಾಸ್ತ್ರಜ್ಞನ ತರಬೇತು ಪಡೆಯುವಾಗ ಒಬ್ಬ ಸಲಹೆಗಾರನ ಹತ್ತಿರ ಕೆಲಸ ಮಾಡು ತ್ತಿದ್ದೆ. ಅವನು ಎಂದೂ ನನ್ನನ್ನು ಹೊಗಳಿ ರಲಿಲ್ಲ. ಒಂದು ದಿನ ನಾನು ''ನಾನು ಹೇಗೆ ಕೆಲಸ ಮಾಡುತ್ತಿದ್ದೇನೆ '' ಎಂದು ಅವನನ್ನು ಕೇಳಿದೆ. ಅವನು ಚಕಿತಗೊಂಡು ನೀನು ಚನ್ನಾಗಿ ಕೆಲಸ ಮಾಡುತ್ತಿರುವಿ ಆದರೆ ಇದನ್ನೇಕೆ ಕೇಳುತ್ತಿರುವಿ?'' ಎಂದ.

ಅವನು ಹಾಗೆನ್ನುವುದು ನನಗೆ ಬೇಕಾಗಿತ್ತು. ಆದ್ದರಿಂದಲೇ ಕೇಳಿದ್ದೆ. ಹೊಗಳಿಕೆ ಕೂಡಾ ಮಾನವನ ಅವಶ್ಯಕತೆ ಗಳಲ್ಲೊಂದಾಗಿದೆ. ಅದಿರದಿದ್ದರೆ ನಾವ್ಯಾರೂ ಉತ್ತಮವಾಗಿ ಕೆಲಸ ಮಾಡಲಾರೆವು. ಹೊಗಳಿಕೆ ಇದ್ದರೆ ನಾವಾಗಿಯೇ ಉತ್ತಮ ವಾದದ್ದನ್ನು ನೀಡುತ್ತೇವೆ. ''ನೀನು ಅದ್ಭುತವಾಗಿ ಕಾಣುತ್ತೀ ! ''ಆ ಊಟ ಬಾರೀಯಾಗಿತ್ತು !'' ''ನೀನು ಭಯಂಕರ ನಾಗಿರುವಿ!'' ಇಂಥ ಶಬ್ದಗಳ ಪರಿಣಾಮ ಹೇಗಿರುತ್ತದೆಂಬುದನ್ನು ಗಮನಿಸಬೇಕು. ಹೊಗಳಿಕೆಯ ಕೆಲವು ಮಾತುಗಳು, ಆತ್ಮೀಯ ವಾಗಿ ಮೈದಡುವುದು. ಒಂದು ಅಪ್ಪುಗೆ, ಇನ್ನೊಬ್ಬರ ಮೇಲೆ -ಅದರಲ್ಲೂ ಮಕ್ಕಳ ಮೇಲೆ- ವಿಶೇಷ ಪರಿಣಾಮ ಬೀರಬಲ್ಲದು.

ತಾವು ಮಾಡುವ ಕೆಲಸಕ್ಕೆ ಮಾನ್ಯತೆ ಮತ್ತು ಪ್ರೋತ್ಸಾಹ ದೊರೆಯಲೆಂದು ಮಕ್ಕಳು ಹಂಬಲಿಸುತ್ತವೆ. ಮೆಚ್ಚುಗೆಯ ಎರಡು ಮಾತುಗಳು, ಅವರು ಮಾಡಿದ ಕೆಲಸಕ್ಕೆ ಪುರಸ್ಕಾರವಾಗಿ ಪರಿಣಮಿಸುತ್ತವೆ ; ಅವರ ಅಸ್ತಿತ್ವವನ್ನು ಗುರುತಿಸಿದಂತೆಯೂ ಆಗುತ್ತದೆ. ಅತಿಯಾಗಿ ಹೊಗಳುವುದು ಬೇಕಾಗಿಲ್ಲ. ಆದರೆ ಅವಶ್ಯವಿದ್ದಲ್ಲಿ ಹೊಗಳುವುದನ್ನು ಮರೆಯಬಾರದು. ಕೇವಲ ಅದರ ಬಗ್ಗೆ ಆಲೋಚಿಸುವುದರಿಂದ ಉಪಯೋಗವಿಲ್ಲ. ನಾವು ಮಾತುಗಳಲ್ಲಿ ಹೇಳಲೇಬೇಕು.

ಪ್ರಪಂಚಕ್ಕೆ ಹೊಸದಾಗಿ ಹೇಳಲು ನನ್ನಲ್ಲಿ ಏನು ಇಲ್ಲ.
ಸತ್ಯ ಮತ್ತು ಅಹಿಂಸೆಗಳು ಪರ್ವತಗಳಷ್ಟೇ ಹಳೆಯವು.
ಮಹಾತ್ಮ ಗಾಂಧೀಜೀ

ವಿಸ್ತಾರದಲಿ ಬಾಳು ವೈಶಾಲ್ಯದಿಂ ಬಾಳು

ಡಾ. ಎಚ್. ಎಸ್. ಸುಜಾತಾ
೫೩, 'ಸುಹಾಸ', ೪ನೇ ಮುಖ್ಯ
ರಸ್ತೆ, ಮಾರುತಿ ದೇವಸ್ಥಾನದ
ಬೀದಿ, ಕುವೆಂಪುನಗರ
ಮೈಸೂರು-೫೭೦ ೦೦೯

ಶುಭ್ರತೆಯೇ ಸೌಂದರ್ಯ

ಯಾವ ವ್ಯಕ್ತಿಗೇ ಆಗಲಿ ತಾನು ಹುಟ್ಟಿದ ದೇಶ ಸುಂದರವಾದದ್ದು. ''ನಮ್ಮ ದೇಶ ಅತ್ಯಂತ ಸುಂದರ, ಇಲ್ಲಿನ ಸೊಬಗು ಬೇರೆಲ್ಲೂ ಇಲ್ಲ'' ಎಂದು ನನ್ನ ಅನೇಕ ಸ್ನೇಹಿತೆಯರು ಹೇಳುತ್ತಾರೆ. ಅಂಥ ಹೊತ್ತಿನಲ್ಲಿ ವಿರುದ್ಧ ಸಾಕ್ಷ್ಯಗಳನ್ನು ನಾನು ಕಾಣುತ್ತೇನೆ. ವಾಸ್ತವವನ್ನು ಅವರ ಗಮನಕ್ಕೆ ತರಲು ಪ್ರಯತ್ನಿಸಿ ಅವರ ಉರಿಗಣ್ಣಿಗೆ ಪಕ್ಕಾಗುತ್ತೇನೆ.

ನಮ್ಮ ದೇಶ ನೈಸರ್ಗಿಕವಾದ ಚೆಲುವನ್ನು ಅಪಾರವಾಗಿ ಹೊಂದಿರುವುದು ನಿಜ. ಒಂದು ಕಡೆ ಇಲ್ಲಿನ ಪರ್ವತ, ಬೆಟ್ಟ, ಗುಡ್ಡ, ಕಣಿವೆಗಳು; ನದಿ, ಜಲಪಾತಗಳು; ಅರಣ್ಯ, ವನ್ಯಪ್ರಾಣಿಗಳು ಪ್ರವಾಸಿಗರ ಕಣ್ಮನಗಳನ್ನು ಸೆಳೆದರೆ, ಇನ್ನೊಂದೆಡೆ ಮಾನವ ನಿರ್ಮಿತ ದೇವಾಲಯಗಳು ಶಿಲ್ಪಗಳು ನೋಡುಗರ ಹೃದಯಗಳನ್ನು ಅಪಹರಿಸುತ್ತವೆ. ಆದರೆ ಇಂಥ ಸಂಪತ್ತನ್ನು ನಾವು ಶುಭ್ರವಾಗಿ ಇರಿಸಿಕೊಂಡಿದ್ದೇವೆಯೇ, ಸುಂದರವಾಗಿ ರೂಪಿಸಿಕೊಂಡಿದ್ದೇವೆಯೇ ಎಂಬ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಂಡಲ್ಲಿ ಬರುವ ಪ್ರಾಮಾಣಿಕ ಉತ್ತರ ನಿರಾಶಾದಾಯಕವಾಗಿರುತ್ತದೆ. ಈ ದಿನಗಳಲ್ಲಿ ಯಾವ ಪ್ರವಾಸಿ ತಾಣಕ್ಕೆ ಹೋದರೂ ನಮ್ಮನ್ನು ಸ್ವಾಗತಿಸುವುದು ತಿಂದು ಬಿಸುಟ ಸಿದ್ಧ ಆಹಾರಗಳ ಪಾಲಿಥೀನ್ ಚೀಲಗಳು, ಕಾಗದದ ತಟ್ಟೆಗಳು, ಮದ್ಯದ ಬಾಟಲಿಗಳು, ಸಿಗರೇಟ್ ತುಂಡುಗಳು. ಕುಪ್ಪೆ ಕುಪ್ಪೆಯಾಗಿ ಬಿದ್ದು ಗಾಳಿಯಲ್ಲಿ ಹಾರಾಡಿ ಅಲ್ಲಲ್ಲಿ ಚದುರಿ ಹೋಗಿರುವ ಈ ವಸ್ತುಗಳನ್ನು ಕಂಡಾಗ ಸೌಂದರ್ಯಾನ್ವೇಷಿಗಳಾಗಿರುವ ಪ್ರವಾಸಿಗರಿಗೆ ಮೈ ಪರಚಿಕೊಳ್ಳುವಂತೆ ಆಗುತ್ತದೆ. ನಮಗೇ ನಾಚಿಕೆಯಾಗುವಂತೆ ಇರುವ ನಮ್ಮ ದೇಶದ ಈ ದೃಶ್ಯಗಳನ್ನು ವಿದೇಶೀಯರು ಕಂಡಾಗ ಅವರು ಏನೆಂದು ಭಾವಿಸುತ್ತಾರೆ ಎಂದು ನಾನು ಹಲವು ಬಾರಿ ಯೋಚಿಸಿದ್ದೇನೆ. ''ನಿಮ್ಮದು ಬಹು ಸುಂದರ ದೇಶ'' ಎಂದು ಯಾರಾದರೂ ವಿದೇಶೀಯರು ಹೇಳಿದರೆ ಇದು ಕೇವಲ ಸೌಜನ್ಯದ ಮಾತಾಗಿರಬಹುದೇ ಎಂಬ ಅನುಮಾನ ನನ್ನಲ್ಲಿ ಉದಯಿಸಿದ್ದು ಉಂಟು.

ನಾನು ಕೆಲವು ವರ್ಷಗಳ ಹಿಂದೆ ಸಿಂಗಪುರಕ್ಕೆ ಭೇಟಿ ಕೊಟ್ಟಾಗ ತದ್ವಿರುದ್ಧ ಸ್ಥಿತಿಯನ್ನು ಕಂಡೆ. ಸಿಂಗಪುರದಲ್ಲಿ ನಾವು ತಂಗಿದ್ದ ವಸತಿಗೃಹ, ಸಂದರ್ಶಿಸಿದ ವಸ್ತು ಸಂಗ್ರಹಾಲಯಗಳು, ಉದ್ಯಾನವನಗಳು, ಕಲಾಮಂದಿರಗಳು ಎಲ್ಲವೂ ಸ್ವಚ್ಛ, ಸುಂದರ, ಬೀದಿಗಳಲ್ಲಿ ಎಲ್ಲೂ ಕಾಗದದ ಚೂರು ಸಹ ಕಾಣದು. ನಮ್ಮ ವಸತಿಗೃಹದ ಪಕ್ಕದ ಕಿರುದಾರಿಯಲ್ಲಿ ರಸ್ತೆ ರಿಪೇರಿಯ ಕೆಲಸ ನಡೆಯಿತು. ಕೆಲಸ ಪ್ರಾರಂಭವಾದದ್ದು

ಜನಸಂಚಾರ ಕಡಿಮೆಯಾದ ಮೇಲೆ, ಸಂಜೆಯಾದಾಗ. ಬೆಳಗಿನ ಜಾವಕ್ಕೆ ಕೆಲಸ ಮುಗಿಯಿತು. ತತ್‌ಕ್ಷಣ ಜಲ್ಲಿಕಲ್ಲು, ಸಿಮೆಂಟ್ ಇತ್ಯಾದಿಗಳನ್ನು ಗುಡಿಸಿ ಎತ್ತಿ ಹಾಕಿದರು. ಸಣ್ಣ ಬ್ರಷ್ ತಂದು ಅಳಿದುಳಿ ದಿದ್ದ ಮರಳ ಕಣಗಳನ್ನು ಸಹ ಬಿಡದೆ ಗುಡಿಸಿದರು. ಮತ್ತೆ ಓಡಾಟ ಪ್ರಾರಂಭ ವಾಗುವ ವೇಳೆಗೆ ರಸ್ತೆ ಶುಭ್ರವಾಗಿ ಹೊಳೆಯುತ್ತಿತ್ತು. ಅತಿ ಕಠಿಣ ಪ್ರಯತ್ನದ ಮೂಲಕ ನೈರ್ಮಲ್ಯವನ್ನು ಕಾಪಾಡಿಕೊಳ್ಳುವ ಅಲ್ಲಿನ ರೀತಿ ನೀತಿಗಳು ಯಾರನ್ನಾದರೂ ಮೆಚ್ಚಿಸುವಂಥವು. ಮುಂದಿನ ಹಂತವೇ ಸೌಂದರ್ಯ. ಶುಭ್ರತೆಯ ಮೂಲಕ ಅರಳುವ ಸೌಂದರ್ಯ, ಪುಟ್ಟ ಚಿಲುಮೆ ಇರಲಿ, ದೊಡ್ಡ ಜಲಪಾತವಿರಲಿ ಅದರ ಸುತ್ತಮುತ್ತಲ ಜಾಗವನ್ನು ಸೊಗಸಾಗಿ ಕಾಣುವಂತೆ ಮಾಡುತ್ತಾರೆ. ಗಮ್ಯಸ್ಥಾನಕ್ಕೆ ಹೋಗಿ ಸೇರಿದಾಗ ನಮ್ಮ ಮನಸ್ಸು ತಾನಾಗಿ ಮುದಗೊಳ್ಳುತ್ತದೆ. ಇದಕ್ಕಿಂತಲೂ ಚೆಲುವಾದ ತಾಣಗಳು ನಮ್ಮಲ್ಲೇ ಇವೆ ಯಲ್ಲ ಎನಿಸಿದಾಗಲೆಲ್ಲ ಅಂಥ ತಾಣಗಳನ್ನು ನಾವು ಹಾಳುಗೆಡವಿರುವ ಸಂಗತಿ ಹೊಳೆದು ಸಂಕಟವಾಗುತ್ತದೆ.

ನಮ್ಮ ಮನೆಯನ್ನು ನಾವು ಶುಚಿ ಯಾಗಿರಿಸಿಕೊಳ್ಳಬೇಕು. ನಾವು ಓಡಾಡುವ ರಸ್ತೆಗಳನ್ನು ಶುಭ್ರವಾಗಿಟ್ಟುಕೊಳ್ಳಬೇಕು. ನಾವು ಹೋಗಿ ಬರುವ ಸ್ಥಳಗಳನ್ನು ಸ್ವಚ್ಛವಾಗಿರಿಸಿಕೊಳ್ಳಬೇಕು. ಈ ಹೊರಗಣ ಶುಭ್ರತೆ ನಮ್ಮ ಒಳಗಣ ಶುಭ್ರತೆಗೂ ಮೆಟ್ಟಿಲಾಗಬೇಕು, ಆಗುತ್ತದೆ. ಒಳಹೊರಗಿನ ಈ ನಿರ್ಮಲ ನೀತಿಯಿಂದ ಚೆಲುವು ತಾನಾಗಿ ಕೂಡಿಕೊಳ್ಳುತ್ತದೆ.

ಸುಂದರವಾದ ವಸ್ತು ಸದಾಕಾಲ ಸಂತೋಷವನ್ನು ನೀಡುವಂಥದ್ದು ಎಂಬ ಕೀಟ್ಸ್‌ನ ಮಾತನ್ನು ನೆನೆದಾಗ, ನಮ್ಮ ಸುತ್ತಲಿನ ಸೌಂದರ್ಯ ನಿಸರ್ಗ ನಮಗೆ ನೀಡಿದ ಕೊಡುಗೆ, ಅದನ್ನು ಹಾಳು ಮಾಡಲು ನಮಗೆ ಹಕ್ಕಿಲ್ಲ, ಅದನ್ನು ಸವಿಯುವ ಅದೃಷ್ಟವನ್ನು ನಾವು ಉಳಿಸಿ ಕೊಳ್ಳಬೇಕು ಎಂದು ಅರಿವಾದಾಗ ಸೌಂದರ್ಯ ಸಂಪಾದನೆಗೆ ಶುಭ್ರತೆ ಗಿಂತಲೂ ಹೆಚ್ಚಿನ ಸಾಧನವಿಲ್ಲ ಎಂಬುದು ಹೊಳೆಯುತ್ತದೆ. ನಿಜವಾದ ಸೌಂದರ್ಯ ವನ್ನು ಪಡೆದರೆ ಸತ್ಯದ ಸಮೀಪಕ್ಕೆ ಸಾರಿದಂತೆ. ಏಕೆಂದರೆ ಭಾರತೀಯ ನಂಬಿಕೆಗೆ ಸತ್ಯ ಸೌಂದರ್ಯಗಳು ಬೇರೆ ಬೇರೆ ಅಲ್ಲ. ನಿಜ ''ಋತದ ಪರಿಮುದ್ರೆ ಸರಳತೆ, ಸತ್ಯದ ಪರಿವೇಷ ಸೌಂದರ್ಯ, ಸೌಂದರ್ಯದ ಪ್ರಭೆಯೇ ಸ್ವಚ್ಛತೆ, ಸ್ವಚ್ಛತೆಯ ಪ್ರಕಾಶ ಶುಭ್ರತೆ''.

ಧೈರ್ಯದ ನಿಲುವು

ಈ ದಿನಗಳಲ್ಲಿ ನಮ್ಮ ಹೆಣ್ಣುಮಕ್ಕಳ ಕಾರ್ಯಕ್ಷೇತ್ರಗಳು ವಿಸ್ತಾರಗೊಳ್ಳುತ್ತಿರು ವುದು ಸಂತೋಷದ ಸಂಗತಿ. ಸಾರ್ವಜನಿಕ ರಂಗದ ಎಲ್ಲ ಪ್ರಕಾರಗಳಲ್ಲೂ ಅವರು ತಮ್ಮ ಅರ್ಹತೆಯನ್ನು ಸಾಬೀತು ಮಾಡುತ್ತಿದ್ದಾರೆ.. ವೈದ್ಯರಾಗಿ, ಇಂಜನಿಯರ್ ಆಗಿ, ವಿಮಾನ ಚಾಲಕಿಯರಾಗಿ, ಅಧ್ಯಾಪಕಿಯರಾಗಿ, ಬ್ಯಾಂಕು ಕಾರ್ಖಾನೆಗಳಲ್ಲಿ ದುಡಿಯುವ ವರಾಗಿ ಅವರು ಹೆಸರು ಮಾಡಿದ್ದಾರೆ. ಪರ್ವತಾರೋಹಣದಿಂದ ಹಿಡಿದು ಉಪ ಗ್ರಹ ಉಡ್ಡಾಣದವರೆಗೆ ಪಾಲ್ಗೊಂಡಿದ್ದಾರೆ. ತಮ್ಮ ಕರ್ತವ್ಯ ನಿರ್ವಹಣೆಗಾಗಿ ಎಂತಹ ಶ್ರಮವಹಿಸಲೂ ಅವರು ಸಿದ್ಧರಾಗಿದ್ದಾರೆ. ಇದು ನಿಜವಾಗಿ ಹೆಮ್ಮೆ ಪಡಬಹುದಾದ ಬೆಳವಣಿಗೆ.

ಈ ಹೊತ್ತಿನಲ್ಲಿ ನಮ್ಮ ಸಮಕಾಲೀನ ಆದರ್ಶ ಮಹಿಳೆಯರಲ್ಲಿ ಇಬ್ಬರು ವಿಶೇಷವಾಗಿ ನನ್ನ ಲಕ್ಷ್ಯ ಸೆಳೆದಿದ್ದಾರೆ. ಮೊದಲನೆಯವರು ಪ್ರಖ್ಯಾತ ನರ್ತಕಿ ಸುಧಾಚಂದ್ರನ್. ವರುಷಗಳ ಕೆಳಗೆ ವಾಹನ ಅಪಘಾತವೊಂದರಲ್ಲಿ ಕಾಲು ಕಳೆದುಕೊಂಡ ಸುಧಾ ಅವರಿಗೆ ಜೀವನವೇ ಶೂನ್ಯವೆನಿಸಿತು. ನೃತ್ಯಗಾತಿಯಾದವರಿಗೆ ಕಾಲಿನ ಮಹತ್ವ ಎಷ್ಟೆಂದು ಯಾರಿಗೂ ತಿಳಿಯ ಹೇಳಬೇಕಿಲ್ಲ. ಅಂತಹ ಹೊತ್ತಿನಲ್ಲಿ ತಾನು ಬದುಕಿ ಉಳಿಯುತ್ತೇನೆ, ಅಷ್ಟು ಮಾತ್ರವೇ ಅಲ್ಲ, ನೃತ್ಯವನ್ನೂ ಮುಂದುವರೆಸುತ್ತೇನೆ ಎಂದು ಸುಧಾ ದೃಢ ನಿಶ್ಚಯ ಮಾಡಿದರು. ಕಾಲಿಲ್ಲದವರಿಗಾಗಿ ವಿಶೇಷವಾಗಿ ತಯಾರಿಸಿದ ಜಯಪುರ ಕಾಲು ಅವರ ನೆರವಿಗೆ ಬಂತು. ಪ್ರಾರಂಭದಲ್ಲಿ ಸುಧಾ ತೀವ್ರವಾಗಿ ನೋವನ್ನು ಅನುಭವಿಸಬೇಕಾಯಿತು. ಎಳೆಯ ಮಗುವಿನಂತೆ ಹೆಜ್ಜೆ ಹಾಕಲು ಶ್ರಮಪಡಬೇಕಾಯಿತು. ನಡಿಗೆಯ ಜೊತೆಗೆ ನಾಟ್ಯದ ಅಭ್ಯಾಸವನ್ನೂ ಮೊದಲಿನಿಂದ ಪ್ರಾರಂಭಿಸ ಬೇಕಾಯಿತು. ಆಕೆಯ ಕಠಿಣ ತಪಸ್ಸು ಕಡೆಗೂ ಫಲ ಕೊಟ್ಟಿತು. ಸುಧಾ ತಮ್ಮ ಜೀವನಕಾಲದಲ್ಲೇ ದಂತಕಥೆಯಾದರು. ಅವರ ಜೀವನವನ್ನು ಆಧರಿಸಿ ನಿರ್ಮಿತವಾದ ಚಲನಚಿತ್ರ ಅತ್ಯಂತ ಜನಪ್ರಿಯವಾಯಿತು. ಸುಧಾ ಈಗಲೂ ನೃತ್ಯ ಪ್ರದರ್ಶನಗಳನ್ನು ನೀಡುತ್ತಾರೆ. ಆಗಾಗ ಚಲನಚಿತ್ರಗಳಲ್ಲಿ ದೂರದರ್ಶನದ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಅವರ ಕೆಚ್ಚು, ಛಲ, ಆತ್ಮವಿಶ್ವಾಸಗಳು ನಮ್ಮ ಯುವತಿಯರಿಗೆ ನಿತ್ಯ ಆದರ್ಶವಾಗಬೇಕು.

ನಾನು ಮೆಚ್ಚಿದ ಇನ್ನೊಬ್ಬ ಧೀರ ಮಹಿಳೆ ಕಿರಣ್ ಬೇಡಿ. ಕಿರಣರು ತೀವ್ರ ಆಶಾವಾದಿ ಹಾಗೂ ಛಲಗಾತಿ. ಅವರೊಬ್ಬ ನಿಸ್ಪೃಹ ಪೊಲೀಸ್ ಅಧಿಕಾರಿ. ಅವರು ನಡೆದ ಹಾದಿಯಲ್ಲಿ ಎಂದೂ ಮಲ್ಲಿಗೆ ಚೆಲ್ಲಿರಲಿಲ್ಲ. ಹಲವು ರೀತಿಯ ಆತಂಕಗಳನ್ನು ಅವರು ಎದುರಿಸಬೇಕಾಯಿತು. ಆದರೆ ಕಿರಣರು ಎಂತಹ ಹೊತ್ತಿನಲ್ಲಿ ಜಗ್ಗಲಿಲ್ಲ. ಅವರ ಸಾಮರ್ಥ್ಯಕ್ಕೆ ಸವಾಲೋ ಎಂಬಂತೆ ತಿಹಾರ್ ಜೈಲಿನ ಮುಖ್ಯ ಅಧಿಕಾರಿಯಾಗಿ ಅವರನ್ನು ನೇಮಿಸಲಾಯಿತು. ಕುಪ್ರಸಿದ್ಧ ಪಾತಕಿಗಳ ಆವಾಸಸ್ಥಾನ ತಿಹಾರ್ ಜೈಲ್. ಕಿರಣರ ಆಟ ಇನ್ನು ಮುಗಿದಂತೆ ಎಂದು ಅವರ ಟೀಕಾಕಾರರು ನಗಲು ಸಿದ್ಧವಾಗುತ್ತಿದ್ದಾಗ ಕಿರಣ್ ತೀರ ಸಹಜ ರೀತಿಯಲ್ಲಿ ತಿಹಾರ್ ಜೈಲಿಗೆ ಹೋಗಿ, ತಮ್ಮ ಕಾರ್ಯವನ್ನು ಪ್ರಾರಂಭಿಸಿ ದರು. ಅಲ್ಲಿಯೂ ತಮ್ಮದೇ ಮುದ್ರೆ, ಪ್ರತಿಯೊಂದಕ್ಕೂ ಕಿರಣಸ್ಪರ್ಶ. ಅವರು ಮೊದಲಿಗೆ ಖೈದಿಗಳ ವಿಶ್ವಾಸ ಸಂಪಾದನೆ ಮಾಡುವತ್ತ ಹೆಜ್ಜೆ ಹಾಕಿದರು. ದೈಹಿಕ ವ್ಯಾಯಾಮ ಹಾಗೂ ಮಾನಸಿಕ ಚಿಂತನೆಗಳನ್ನು ಖೈದಿಗಳ ದಿನಚರಿಯಲ್ಲಿ ಅಳವಡಿಸಿದರು. ಓದು ತಿಳಿಯದವರಿಗೆ ಅಕ್ಷರಾಭ್ಯಾಸ, ಓದು ಬಲ್ಲವರಿಗೆ ಹೆಚ್ಚಿನ ಕಲಿಕೆಗೆ ಅವಕಾಶಗಳನ್ನು ಕಲ್ಪಿಸಿದರು. ಜೈಲಿನೊಳಗೆ ಪ್ರವೇಶಿಸಿದ ನಂತರ ತಮ್ಮನ್ನು ಮೊದಲ ಬಾರಿಗೆ ಮನುಷ್ಯರಂತೆ ಕಂಡ ಕಿರಣರ ಬಗ್ಗೆ ಖೈದಿಗಳಿಗೆ ಅಪರಿಮಿತ ಪ್ರೀತಿ ಉಕ್ಕಿ ಬಂತು. ಸಾಮಾನ್ಯ ಅಪರಾಧಿಗಳಿಂದ ಹಿಡಿದು ಕುಪ್ರಸಿದ್ಧ ಕೊಲೆಗಾರರವರೆಗೂ ಪ್ರತಿಯೊಬ್ಬರೂ ಕಿರಣ ಸಂಮೋಹನಕ್ಕೆ

ಒಳಗಾದರು. ತಿಹಾರ್ ಜೈಲು ತಿಹಾರ್ ಆಶ್ರಮವಾಗಿ ಪರಿವರ್ತಿತವಾಯಿತು. ನಗಲು ಸಿದ್ಧರಾಗಿದ್ದವರು ತಮ್ಮ ಬಾಯನ್ನೇ ಮುಚ್ಚಿಕೊಳ್ಳಬೇಕಾಯಿತು. ಈ ಹೊಸ ಪ್ರಯೋಗದಿಂದ ಕಿರಣರು ಇಡೀ ದೇಶದಲ್ಲಿ ಪರಿಚಿತರಾದರು, ಮಾತ್ರವಲ್ಲ ಅವರಿಗೆ ಅಂತಾರಾಷ್ಟ್ರೀಯ ಖ್ಯಾತಿಯೂ ದಕ್ಕಿತು.

ಸುಧಾಚಂದ್ರನ್ ಹಾಗೂ ಕಿರಣ್ ಬೇಡಿಯವರ ಮಾರ್ಗಗಳಲ್ಲಿ ಒಂದು ಸಾಮಾನ್ಯ ಸೂತ್ರವಿದೆ. ಕಷ್ಟ ಸಂಭವಿಸಿದಾಗ ದೈನ್ಯ, ಕೀಳರಿಮೆಗಳಿಗೆ ಒಳಗಾಗಬೇಕಾದ್ದು ಅನಿವಾರ್ಯವಲ್ಲ, ತಮ್ಮ ಅಸಹಾಯಕತೆಯನ್ನು ವೈಭವೀಕರಿಸಬೇಕಾಗಿಲ್ಲ, ಬೇರೊಬ್ಬರ ಆಸರೆಗಾಗಿ ಹಂಬಲಿಸಬೇಕಿಲ್ಲ ಎಂಬುದನ್ನು ಇಬ್ಬರೂ ರುಜುವಾತು ಮಾಡಿದರು. ಸಂಕಟದ ಸಮಯದಲ್ಲಿ ನಾವು ಮಾಡಬೇಕಾದ ಕರ್ತವ್ಯವೆಂದರೆ ಧೈರ್ಯ ಕಳೆದುಕೊಳ್ಳದೆ ಬಂದ ತೊಡಕನ್ನು ಸರಿಯಾಗಿ ಅರ್ಥೈಸಿ ಕೊಂಡು ಪರಿಹಾರವನ್ನು ಕಂಡುಕೊಳ್ಳಬೇಕು. ಈ ಇಬ್ಬರು ಧೀರವನಿತೆಯರೂ ತಮ್ಮ ಅಪೂರ್ವ ಸಾಧನೆಯಿಂದ ತಮ್ಮ ಜೊತೆಯವರಿಗೆ ಹಾಗೂ ಮುಂದಿನವರಿಗೆ ದಾರಿದೀಪಗಳಾಗಿದ್ದಾರೆ.

ನಿಜ, "ತರಣಿ ದರ್ಶನಕ್ಕಿಂತ ಕಿರಣಾನುಭವ ಸುಲಭ"!

ಖಾಸಗಿತನಕ್ಕೆ ಮನ್ನಣೆ

ನಮ್ಮ ದಿನನಿತ್ಯದ ವ್ಯವಹಾರಗಳನ್ನು ಸಾರ್ವಜನಿಕ ಹಾಗೂ ಖಾಸಗಿ ಎಂದು ಎರಡು ವಿಧವಾಗಿ ವಿಭಾಗ ಮಾಡಬಹುದು. ಸಾರ್ವಜನಿಕ ಎಂಬುದು ಹೊರಗಿನ ಪ್ರಪಂಚ ಎಂದೂ ಖಾಸಗಿ ಎಂಬುದು ಆಯಾ ವ್ಯಕ್ತಿಗೆ ಮಾತ್ರವೇ ಸೇರಿದ ವಲಯ ಎಂದೂ ಸ್ಥೂಲವಾಗಿ ಹೇಳಬಹುದು. ಅಂದರೆ ಸಾರ್ವಜನಿಕವಾದುದು ಸುತ್ತಲ ಹತ್ತು ಜನಕ್ಕೆ ಸೇರಿದ, ಸಾಮಾಜಿಕವಾಗಿ ಪರಿಗಣಿತವಾದ ವಿಷಯವಾದರೆ ಖಾಸಗಿ ಎನ್ನುವುದು ವೈಯಕ್ತಿಕವಾದುದು. ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳ ನಡುವೆ ಇರುವ ಗೆರೆ ಕೆಲವು ಕಡೆ ಗಾಢವೂ ಸ್ಪಷ್ಟವೂ ಆಗಿದ್ದರೆ ಕೆಲವೆಡೆ ಸೂಕ್ಷ್ಮವೂ ಅಸ್ಪಷ್ಟವೂ ಆಗಿರುತ್ತದೆ.

ಒಂದು ಸಮಾಜದ ಆಚಾರ, ವ್ಯವಹಾರಗಳು, ನೌಕರಿ, ಮದುವೆ, ಉಡುಪು ಮೊದಲಾದವುಗಳು ಸಾರ್ವಜನಿಕ ಒಪ್ಪಿಗೆಯ ಮುದ್ರೆಯನ್ನು ಪಡೆಯಬೇಕಾಗುತ್ತದೆ. ಅಲ್ಲಿ ಹತ್ತೂ ಜನರ ಅನುಕೂಲಕ್ಕೆ ಹಿತಕ್ಕೆ ಮೊದಲ ಮಣೆ, ಮಾನ್ಯತೆ. ಅಲ್ಲಿ ವ್ಯಕ್ತಿಯೊಬ್ಬನ ತೀರ್ಮಾನಕ್ಕೆ ಸ್ವಲ್ಪ ಭಂಗ ಬಂದರೂ ಸಹಿಸಿಕೊಳ್ಳಬೇಕಾದ್ದು ಅನಿವಾರ್ಯ. ಸೂರ್ಯನ ಬೆಳಕಿರುವಾಗ, ಹಗಲಿನಲ್ಲಿ, ಇಡೀ ಜಗತ್ತು ತನ್ನ ವ್ಯವಹಾರಗಳನ್ನು ನಡೆಸಿಕೊಳ್ಳುವಾಗ ವ್ಯಕ್ತಿಯೊಬ್ಬ ತಾನು ನಡುರಾತ್ರಿಯಲ್ಲಿ ವ್ಯವಹರಿಸುತ್ತೇನೆ, ಹಗಲು ನನಗಾಗದು ಎಂದರೆ ಆ ನಿಲುವು ಕೇವಲ ಅಪಹಾಸ್ಯಕ್ಕೆ ಈಡಾಗುತ್ತೆ, ಮಾತ್ರವಲ್ಲ, ಅಪಾಯಕ್ಕೆ ಆಹ್ವಾನ ನೀಡಿದಂತೆಯೂ ಆಗಬಹುದು.

ಅದೇ ರೀತಿ ಪ್ರತಿಯೊಬ್ಬ ವ್ಯಕ್ತಿಗೂ ಒಂದು ಒಳಗಿನ ಪ್ರಪಂಚವಿದೆ. ಅಲ್ಲಿ ತನ್ನದೇ ಆದ ಆಸೆ, ಆಕಾಂಕ್ಷೆಗಳಿರುತ್ತವೆ.

ತನಗೇ ವಿಶಿಷ್ಟವಾದ ಸೃಷ್ಟಿಶೀಲ ಚೈತನ್ಯವಿರುತ್ತದೆ. ತನ್ನೊಳಗೂ ಇಂಥ ಚೈತನ್ಯವನ್ನು ಸಹಜವಾಗಿ ಅರಳುವಂತೆ ಮಾಡುವುದು, ಸುಂದರವಾಗಿ ಅಭಿವ್ಯಕ್ತಿಸುವುದು ಪ್ರತಿಯೊಬ್ಬರ ಹಕ್ಕು. ಆದ್ದರಿಂದ ಖಾಸಗಿ ವಲಯದಲ್ಲಿ ಬೇರೆಯವರು ತಲೆ ಹಾಕಿದರೆ ಸಂಬಂಧಿತ ವ್ಯಕ್ತಿಗೆ ಉಸಿರು ಕಟ್ಟಿದಂತಾಗುತ್ತದೆ.

ನಮ್ಮ ಖಾಸಗಿ ಜಗತ್ತಿನಲ್ಲಿ ನಮ್ಮ ಕೆಲವೇ ಆಪ್ತರಿಗೆ ಪ್ರವೇಶವಿರುತ್ತದೆ. ಕೆಲವು ಬಾರಿ ಯಾರಿಗೂ ಪ್ರವೇಶ ಇರದೆಯೂ ಇರಬಹುದು. ನಮ್ಮ ಪ್ರೀತಿಯ ಪುಸ್ತಕ , ಆಯ್ಕೆಯ ಸಂಗೀತ, ವಿಶಿಷ್ಟವಾದ ಯಾವುದೇ ಹವ್ಯಾಸಗಳನ್ನು ಸವಿಯಲೂ ಭಾವನಾ ಲೋಕದಲ್ಲಿ ವಿಹರಿಸಲೂ ಯಥೇಷ್ಟ ಅವಕಾಶವಿರುವುದು ಖಾಸಗಿತನದ ನಿಜವಾದ ಸೌಭಾಗ್ಯ. ಉದಾಹರಣೆಗೆ ಮನರಂಜನೆಗಾಗಿ ಈ ದಿನಗಳಲ್ಲಿ ಬಹುಜನ ಅವಲಂಬಿಸುವ ದೂರದರ್ಶನ ಸಾರ್ವಜನಿಕವಾದುದು. ಹಲವು ಛಾನೆಲ್‌ಗಳಲ್ಲಿ ನಮಗೆ ಬೇಕಾದ ಛಾನೆಲ್ ಆರಿಸಿಕೊಳ್ಳುವ ಸ್ವಾತಂತ್ರ್ಯ ನಮಗಿದೆ ನಿಜ. ಆದರೆ ಯಾವುದೇ ಛಾನೆಲ್‌ನಲ್ಲೂ ನಮ್ಮದೇ ಆಯ್ಕೆ ನಡೆಯುವುದಿಲ್ಲ ಎನ್ನುವುದೂ ಸತ್ಯ. ಜೊತೆಗೆ ಪರದೆಯ ಮೇಲೆ ಮೂಡಿಬರುವ ಬಿಂಬವನ್ನು ನೋಡುತ್ತಿರುವುದು ನಾವು ಮಾತ್ರವೇ ಅಲ್ಲ. ಆದರೆ ನಮ್ಮ ಖಾಸಗಿ ಹವ್ಯಾಸವಾದ ಆತ್ಮೀಯ ಪುಸ್ತಕದ ಓದಿನ ಮಾತೇ ಬೇರೆ. ನಮಗೆ ಇಷ್ಟವಾದ ಪುಸ್ತಕವನ್ನು, ಬೇಕಾದ ಹೊತ್ತಿನಲ್ಲಿ, ನಮ್ಮ ಆಯ್ಕೆಯ ಸ್ಥಳದಲ್ಲಿ ನಾವೊಬ್ಬರೇ ಕೂತು ಓದಬಹುದು. ಪುಸ್ತಕದ ಓದು ಪೂರ್ಣವಾಗಿ ಖಾಸಗಿಯಾದದ್ದು. ನಾವೇ ಬಯಸದ ಹೊರತು ಅದು ಸಾರ್ವಜನಿಕ ಆಗುವುದಿಲ್ಲ.

ಸದಾಕಾಲ ಇನ್ನೊಬ್ಬರ ವ್ಯವಹಾರಗಳನ್ನು ಹದ್ದುಗಣ್ಣಿನಿಂದ ಪರೀಕ್ಷಿಸುವುದು, ಅವರ ಆರ್ಥಿಕ ಪರಿಸ್ಥಿತಿ, ವೈವಾಹಿಕ ಸ್ಥಿತಿ ಮುಂತಾದ ವೈಯಕ್ತಿಕ ವಿಷಯಗಳಿಗೆ ಸಂಬಂಧಿಸಿದಂತೆ ಬಾಣ ಬಿಟ್ಟಂತೆ ಪ್ರಶ್ನಿಸುವುದು. ಅನಂತರ ಅವರ ಬೆನ್ನಹಿಂದೆ ಚರ್ಚೆ ಮಾಡುವುದು ಸಂಬಂಧಿತ ವ್ಯಕ್ತಿಗಳ ಸೌಜನ್ಯದ ದುರುಪಯೋಗ ಮಾತ್ರ ಆಗುತ್ತದೆ. ಪರಸ್ಪರ ಸಂಬಂಧ ಕೆಡಲು ಕಾರಣವೂ ಆಗುತ್ತದೆ.

ಸಾರ್ವಜನಿಕ ಜೀವನವನ್ನು ತಲ್ಲಣಗೊಳಿಸಲು ಯಾರಿಗೂ ಹಕ್ಕಿಲ್ಲ. ಅದೇ ರೀತಿ ಬೇರೊಬ್ಬರ ಖಾಸಗಿ ಬದುಕಿನಲ್ಲಿ ಮೂಗು ತೂರಿಸಲೂ ಇತರರಿಗೆ ಹಕ್ಕಿಲ್ಲ. ಸಾರ್ವಜನಿಕ ಹಾಗೂ ಖಾಸಗಿ ವಲಯಗಳ ನಡುವಿನ ಮೇರೆಯನ್ನರಿತು, ಎರಡು ವಲಯಗಳ ನಡುವಿನ ಸಂಬಂಧವನ್ನು ಹದಗೆಡಿಸದೆ ಬಾಳಬಲ್ಲವರು ಜಾಣರು, ಅದೃಷ್ಟವಂತರು. ಅಂಥವರಿಗೆ ನೆರೆಹೊರೆಯವರ ಪ್ರೀತಿ, ಆಪ್ತರ ಮೆಚ್ಚುಗೆ ದೊರೆಯುತ್ತದೆ. ಯಾರ ಕೆಂಗಣ್ಣಿಗೂ ಅವರು ಗುರಿಯಾಗಬೇಕಿಲ್ಲ. ನಿಜ, ''ವಿಸ್ತಾರದಲಿ ಬಾಳು ವೈಶಾಲ್ಯದಿಂ ಬಾಳು, ಕತ್ತಲೆಯ ಮೊಡಕುಮೂಲೆಗಳ ಸೇರದಿರು, ಭಾಸ್ಕರನನುಗ್ರಹವೆ ನೂತ್ನಜೀವನ ಸತ್ತ್ವ ಮೃತ್ಯು ನಿನಗಲ್ಪತೆಯೊ ಮಂಕುತಿಮ್ಮ.''

ನಂಬಿ ಕೆಟ್ಟವರಿಲ್ಲವೋ

ಸವಿತಾ ಪ್ರಭಾಕರ
ನಂ.೬೬೮, ೧೧ನೇ ಕ್ರಾಸ್
ಗೋಕುಲಂ, ೩ನೇ ಹಂತ
ಮೈಸೂರು-೨

'ಕೃತಿಯಲ್ಲಿ ನಂಬಿಕೆ' ಎಂಬುದು ಇತ್ತೀಚೆಗೆ ಲಾಸ್ ಏಂಜಲೀಸ್‌ನಲ್ಲಿ ಹೊಸ ಅರ್ಥವನ್ನು ಪಡೆದುಕೊಂಡಿದೆ. ವಾರಕ್ಕೊಮ್ಮೆ ಬೆಳಗಿನ ಹೊತ್ತಿನಲ್ಲಿ ಒಂದಿಷ್ಟು ಮಹಿಳೆಯರು ಸೇರಿ ಮನಸ್ಸು ಮತ್ತು ದೇಹವನ್ನು ಧ್ಯಾನ ಮತ್ತು ಚಲನೆಯಿಂದ ಚುರುಕುಗೊಳಿಸುತ್ತಿದ್ದಾರೆ.

ಈ ಕ್ರಿಯೆಯಿಂದ ಮನಸ್ಸಿಗೆ ಶಾಂತಿ ಲಭಿಸುವ ವಿಷಯ ಅಲ್ಲಿಗೆ ಬರುತ್ತಿದ್ದ 'ರೋಬರ್ಟ್ ಶ್ವವೀಜರ್' ಎಂಬ ಮಹಿಳೆಯೊಬ್ಬರನ್ನು ಆಕರ್ಷಿಸಿತು. ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕಿಯಾಗಿದ್ದ ಆಕೆ ಈಗ ಹೊಸದಾಗಿ ಕಂಡುಕೊಂಡ ಉಪಯೋಗವನ್ನು ವಾತರೋಗಕ್ಕಾಗಿ ಪ್ರಯೋಗಿಸಿದರು. ಹಾಗೆಯೇ ಜನರಲ್ಲಿ ಧಾರ್ಮಿಕ ಸಂಸ್ಕಾರದ ಜೊತೆ ಅವರ ಅನಾರೋಗ್ಯವನ್ನು ನಿಭಾಯಿಸುವುದರ ಬಗ್ಗೆ ತಿಳುವಳಿಕೆಯನ್ನು ನೀಡಿದ್ದಾರೆ.

ದೈವ ಭಕ್ತಿಯಿಂದ ದೈಹಿಕ ಆರೋಗ್ಯ ಉತ್ತಮಗೊಳ್ಳುತ್ತದೆ ಎಂಬ ಅಭಿಪ್ರಾಯ ಹೊಸದೇನೂ ಅಲ್ಲ. ಎಷ್ಟೋ ಜನರು ಕೊನೆ ಹಂತ ಮುಟ್ಟಿರುವ ಖಾಯಿಲೆಯಿರುವಾಗ ಕೂಡ ಕೇವಲ ತಮ್ಮಲ್ಲಿನ ನಂಬಿಕೆ ಮತ್ತು ದೃಢನಿರ್ಧಾರದಿಂದಲೇ ವೈದ್ಯರ ಊಹೆಗಿಂತಲೂ ಹೆಚ್ಚು ದಿನಗಳವರೆಗೆ ಬದುಕಿರುವ ನಿದರ್ಶನಗಳನ್ನು ಕೇಳಿದ್ದೇವೆ. ಈಗ ಹೊಸ ವಿಷಯವೇನೆಂದರೆ ದೈವನಿಷ್ಠೆಯಿಂದ ದೊರಕುವ ಪ್ರತಿಫಲದ ಈ ವಿಷಯವನ್ನು ವೈಜ್ಞಾನಿಕವಾಗಿ ಚಿಂತಿಸಲಾಗುತ್ತಿದೆ.

''ದೇಹದ ಅಸ್ವಸ್ಥತೆಯನ್ನು ಭಗವಂತ ಗುಣಪಡಿಸುತ್ತಾನೆ ಎಂಬುದನ್ನು ವೈಜ್ಞಾನಿಕವಾಗಿ ನಾವು ದೃಢಪಡಿಸಲಾಗದಿದ್ದರೂ ದೇವರಲ್ಲಿನ ನಂಬಿಕೆಯು ಮಾತ್ರ ಅನುಕೂಲಕರವಾದ ಫಲವನ್ನು ಕೊಡುತ್ತದೆ ಎಂಬುದನ್ನು ನಂಬುತ್ತೇನೆ'' ಎಂದು ಡಾ. ಡೇಲ್ ಮ್ಯಾಥ್ಯೂಸ್ ಎಂಬ ವೈದ್ಯಕೀಯ ಪ್ರಾಧ್ಯಾಪಕರೊಬ್ಬರು ಹೇಳಿದ್ದಾರೆ. ಅವರು 'ಆರೋಗ್ಯಕರವಾದ ಧಾರ್ಮಿಕ ನಂಬಿಕೆ ಮತ್ತು ಅಭ್ಯಾಸಗಳು ಜನರಿಗೆ ಒಳಿತನ್ನು ಮಾಡಬಹುದು ಎಂಬುದರಲ್ಲಿ ಒಂದಿಷ್ಟೂ ಅನುಮಾನವಿಲ್ಲ' ಎನ್ನುತ್ತಾರೆ.

ಪ್ರಶ್ನಾತೀತ ರುಜುವಾತು: ನಂಬಿಕೆ ಮತ್ತು ಆರೋಗ್ಯವನ್ನು ಒಂದಕ್ಕೊಂದು ಸೇರಿಸಿ ರುಜುವಾತುಪಡಿಸುವುದು ಎಷ್ಟು ಪ್ರಭಾವವುಳ್ಳದ್ದು. ಧಾರ್ಮಿಕ ಶ್ರದ್ಧೆಗೂ ದೀರ್ಘಾಯುಸ್ಸಿಗೂ ಸಂಬಂಧವಿರುವುದನ್ನು

೧೯೯೮ರ ನವೆಂಬರ್ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ ಫಿಲ್ಲಿಸ್ ಮಿಂತೋಷ್‌ರವರ ಫೈತ್ ಇಸ್ ಪವರ್‌ಫುಲ್ ಮೆಡಿಸಿನ್' ಲೇಖನದ ಅನುವಾದ

ಸುಮಾರು ಮೂವತ್ತಕ್ಕೂ ಹೆಚ್ಚಿನ ಅಧ್ಯಯನಗಳು ದೃಢಪಡಿಸುತ್ತವೆ.

ಕ್ಯಾಲಿಫೋರ್ನಿಯಾದಲ್ಲಿ ೫೨೮೬ ಜನರ ಮೇಲೆ ನಡೆಸಿದ ಸಮೀಕ್ಷೆಯ ಪ್ರಕಾರ ಚರ್ಚಿಗೆ ಹೋಗುವವರ ಸಾವಿನ ಸಂಖ್ಯೆಯು ಬೇರೆಯವರಿಗೆ ಹೋಲಿಸಿದರೆ ಗಣನೀಯವಾಗಿ ಕಡಿಮೆ ಇದೆ. (ಧೂಮಪಾನ, ಕುಡಿತ, ಬೊಜ್ಜು, ಜಡತೆ...ಇವುಗಳನ್ನು ಹೊರತುಪಡಿಸಿ.)

ಧಾರ್ಮಿಕತೆಗೆ ಕಟ್ಟುಬಿದ್ದ ಜನರಲ್ಲಿ ಕಡಿಮೆ ರೋಗಲಕ್ಷಣಗಳು ಅಥವಾ ಒಳ್ಳೇ ಆರೋಗ್ಯದ ಪರಿಣಾಮ ಕಂಡು ಬಂದಿತು. ಇವು ಕ್ಯಾನ್ಸರ್ ಅಧ್ಯಯನದಲ್ಲಿ ೮ ರಲ್ಲಿ ೭, ರಕ್ತದ ಒತ್ತಡದಲ್ಲಿ ೫ ರಲ್ಲಿ ೪, ಹೃದಯದ ಖಾಯಿಲೆಗಳಲ್ಲಿ ೬ರಲ್ಲಿ೪ ಹಾಗೂ ಸಾಮಾನ್ಯ ರೋಗದ ಅಧ್ಯಯನದಲ್ಲಿ ೫ ರಲ್ಲಿ ೪.

ಧಾರ್ಮಿಕತೆಗೆ ಬಲವಾಗಿ ಕಟ್ಟುಬಿದ್ದವರಲ್ಲಿ ಖಿನ್ನತೆ, ಆತ್ಮಹತ್ಯೆಯ ಆಲೋಚನೆ, ಮದ್ಯಪಾನದ ಪರಿಣಾಮ ಮತ್ತು ಇತರ ಕೆಟ್ಟ ಆಸಕ್ತಿಗಳು ಇಳಿಮುಖವಾಗಿರುತ್ತವೆ.

ಒಂದು ಸಮಗ್ರ ಅಧ್ಯಯನದಲ್ಲಿ ತಿಳಿದು ಬಂದದ್ದು ಏನೆಂದರೆ ಧಾರ್ಮಿಕತೆ ಮತ್ತು ಆರೋಗ್ಯದ ನಡುವಿನ ಸಂಬಂಧವು ವಯಸ್ಸು, ಲಿಂಗ, ಸಾಂಸ್ಕೃತಿಕ ಅಥವಾ ಭೌಗೋಳಿಕ ಮಿತಿಗಳನ್ನು ಮೀರಿರುತ್ತದೆ. ಈ ಪೈಕಿ ಸುಮಾರು ೨೦೦ ಅಧ್ಯಯನಗಳಲ್ಲಿ ಧಾರ್ಮಿಕತೆಯು ಅನಾರೋಗ್ಯದೊಂದಿಗೆ ಸಂಬಂಧ ಹೊಂದಿದ್ದವೆಂದು ವೈದ್ಯಕೀಯ ವಿದ್ಯಾಲಯದ ನಿವೃತ್ತ ಮಹೋಪಾಧ್ಯಾಯ ಜೇಫ್ರಿ ಲೆವಿನ್ ಅವರು ವಿವರಿಸುತ್ತಾರೆ. ಮಕ್ಕಳಲ್ಲಿ, ದೊಡ್ಡವರಲ್ಲಿ, ಅಮೇರಿಕಾದ ಪ್ರೊಟೆಸ್ಟೆಂಟರಲ್ಲಿ, ಯೂರೋಪಿನ ಕ್ಯಾಥೋಲಿಕ್ಕರಲ್ಲಿ, ಜಪಾನಿನ ಬೌದ್ಧರಲ್ಲಿ, ಇಸ್ರೇಲಿನ ಯಹೂದಿಗಳಲ್ಲಿ, ೧೯೩೦ರ ಸುಮಾರಿನಲ್ಲಿದ್ದವರಲ್ಲಿ ಅಥವಾ ೧೯೮೦ ರ ದಶಕದಲ್ಲಿದ್ದವರಲ್ಲಿ ಈ ಧಾರ್ಮಿಕತೆ ಮತ್ತು ಆರೋಗ್ಯದ ಸಂಬಂಧವಿರುವುದನ್ನು ಲೆವಿನ್‌ರ ಅಧ್ಯಯನವು ಖಾತ್ರಿಪಡಿಸುತ್ತದೆ.

ಪ್ರಾರ್ಥನೆಯಿಂದ ಗುಣವಾಗುವುದು ಹೇಗೆ : ನಂಬಿಕೆಯು ಅಷ್ಟೊಂದು ಬಲವಾದ ರಕ್ಷಾ ಕವಚವೆನಿಸಿಕೊಳ್ಳುವುದು ಏಕೆ? ಕೆಲವು ಅನುಭವಶಾಲಿಗಳು ಹಲವು ರೀತಿಯ ಸಾಧ್ಯತೆಗಳನ್ನು ಸ್ಪಷ್ಟಪಡಿಸುತ್ತಾರೆ.

ಧಾರ್ಮಿಕ ಸೇವಾಕಾರ್ಯಗಳಲ್ಲಿ ಭಾಗವಹಿಸುವುದರಿಂದ ಜನಸಂಪರ್ಕವು ಶಾಶ್ವತವಾಗಿರುತ್ತದೆ. ಸಮಾಜದ ಒತ್ತಾಸೆಯೇ ಆರೋಗ್ಯ ಮತ್ತು ದೀರ್ಘಾಯಸ್ಸಿಗೆ ಉತ್ತೇಜನಕಾರಿಯಾಗಿದೆ.

'ನಂಬಿಕೆಯು ಭರವಸೆಯ ಭಾವನೆಯನ್ನು ನೀಡುತ್ತದೆ ಮತ್ತು ಒತ್ತಡವನ್ನು ನಿವಾರಿಸುತ್ತದೆ. ನಂಬಿಕೆಗೆ ಬದ್ಧನಾಗಿರುವ ವ್ಯಕ್ತಿಯು ಕಷ್ಟಗಳನ್ನಾಗಲೀ, ನೋವಿನ ಸ್ಥಿತಿಯನ್ನಾಗಲೀ ಯಾವುದೇ ರೀತಿಯ ನಷ್ಟವನ್ನಾಗಲೀ ಸುಲಭವಾಗಿ ನಿರ್ವಹಿಸಿಕೊಳ್ಳುತ್ತಾನೆ' ಎಂದು ಧಾರ್ಮಿಕ, ಆಧ್ಯಾತ್ಮಿಕ ಮತ್ತು ಆರೋಗ್ಯ ಅಧ್ಯಯನ ಸಂಸ್ಥೆಯ ಮೇಲ್ವಿಚಾರಕರಾದ ಡಾ. ಹಾರೋಲ್ಡ್

ಕಿಯೋನಿಗ್ ಅವರು ಅಭಿಪ್ರಾಯ ಪಡುತ್ತಾರೆ.

ಪ್ರಾರ್ಥನೆಯು ನಮ್ಮ ದೇಹದಲ್ಲಿ ಅನೇಕ ಅನುಕೂಲಕರವಾದ ಬದಲಾವಣೆಗಳನ್ನು ಪ್ರಚೋದಿಸುತ್ತದೆ.

ಪ್ರಾರ್ಥನೆ ಮಾಡುವಾಗ, ರಕ್ತದೊತ್ತಡ, ಆಹಾರದ ರಕ್ತಗತವಾಗುವಿಕೆ, ಹೃದಯದ ಬಡಿತ ಮತ್ತು ಉಸಿರಿನ ವೇಗವು ಸುಸ್ಥಿತಿಯಲ್ಲಿರುತ್ತವೆ ಎಂದು ವಿವರಿಸಿದ್ದಾರೆ. ಹಾರ್ವರ್ಡ್ ವೈದ್ಯಕೀಯ ಶಾಲೆಯ ಡಾ.ಹರ್ಬರ್ಟ್ ಬೆನಸನ್ ಎಂಬವರೂ ಪ್ರಾರ್ಥನೆಯನ್ನು ಮತ್ತೆ ಮತ್ತೆ ಪಠಿಸುವುದರಿಂದ ಕೂಡ ವಿಶ್ರಾಂತಿಯಿಂದ ದೊರಕುವ ಪರಿಣಾಮವೇ ಸಿಗುತ್ತದೆ ಎಂದಿದ್ದಾರೆ. ಬೇರೆ ಬೇರೆ ಆಲೋಚನೆಗಳು ಒಳಹೊಕ್ಕಾಗ ಒಂದು ಪದವನ್ನೋ ಪ್ರಾರ್ಥನೆಯನ್ನೋ ಶಬ್ದವನ್ನೋ ಮತ್ತೆ ಮತ್ತೆ ಉಚ್ಚರಿಸುತ್ತಿರಬೇಕು. ದೇವರಲ್ಲಿ ನಂಬಿಕೆಯನ್ನಿಟ್ಟುಕೊಂಡು ಧಾರ್ಮಿಕ ನುಡಿಗಳನ್ನು ಪಠಿಸುವವರು ಹೆಚ್ಚು ಅನುಕೂಲವನ್ನು ಪಡೆದುಕೊಳ್ಳುತ್ತಾರೆ ಎಂದು ಡಾ.ಬೆನಸನ್ ಹೇಳುತ್ತಾರೆ.

ಬೇರೆಯವರ ಪ್ರಾರ್ಥನೆಯಿಂದಲೂ ಗುಣವಾಗಬಹುದೇ:

ಬೇರೆಯವರ ಪ್ರಾರ್ಥನೆಯಿಂದಲೂ ಗುಣವಾಗುವುದರ ಬಗ್ಗೆ ಸಂಶೋಧಕರು ಪರೀಕ್ಷಿಸುತ್ತಿದ್ದಾರೆ. ಹೃದಯದ ಬೈಪಾಸ್ ಚಿಕಿತ್ಸೆ ಮಾಡಿಸಿಕೊಂಡ ರೋಗಿಗಳ ಅಧ್ಯಯನ ಮಾಡುತ್ತಿರುವ ಬೆನಸನ್ ಮತ್ತು ಸಂಗಡಿಗರು ಮತ್ತು ವಾತರೋಗದ ಬಗ್ಗೆ ಅಧ್ಯಯನ ಮಾಡುತ್ತಿರುವ ಮ್ಯಾಥ್ಯೂಸ್ ಅವರುಗಳು ಈ ಹಿಂದೆ (೧೯೮೮)ರಲ್ಲಿ ಹೃದಯ ತಜ್ಞ ರ್‍ಯಾನ್‌ಡೋಲ್ಫ್ ಬೈರ್ಡ್ ಎಂಬವರು ಸಮರ್ಥಿಸಿರುವುದನ್ನು ದೃಢಪಡಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ.

ಡಾ.ಬೈರ್ಡ್ ಅವರು ೩೯೩ ಹೃದಯರೋಗಿಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿದರು. ಒಂದು ಗುಂಪಿನವರ ಆರೋಗ್ಯಕ್ಕಾಗಿ ದೇಶಾದ್ಯಂತ ಪ್ರಾರ್ಥಿಸಲಾಯಿತು. ಮತ್ತೊಂದು ಗುಂಪಿನವರಿಗೆ ಈ ಪ್ರಾರ್ಥನೆ ಲಭ್ಯವಾಗಲಿಲ್ಲ. ರೋಗಿಗಳಿಗೆ ತಾವು ಯಾವ ಗುಂಪಿಗೆ ಸೇರಿದವರೆಂದು ತಿಳಿದಿರಲಿಲ್ಲ. ಪ್ರಾರ್ಥನೆ ಯನ್ನು ಪಡೆದುಕೊಂಡ ಗುಂಪಿನವರಿಗೆ ಹೆಚ್ಚಿನ ತೊಂದರೆಯಾಗಲಿಲ್ಲ. ನ್ಯುಮೋನಿಯಾ, ಹೃದಯಸ್ತಂಭನ ಮುಂತಾದ ಖಾಯಿಲೆಗಳು ಕಡಿಮೆ ಸಂಖ್ಯೆಯಲ್ಲಿ ಕಾಣಿಸಿಕೊಂಡು ಕಡಿಮೆ ಔಷಧಗಳನ್ನು ನೀಡಲು ಸಾಧ್ಯವಾಯಿತು.

ಮತ್ತಷ್ಟು ದಿಗ್ಭ್ರಮೆಗೊಳಿಸುವ ಸಮಾಚಾರವೆಂದರೆ ಚರ್ಚಾಸ್ಪದ ಅಧ್ಯಯನಗಳ ಕೂಡ ಪ್ರಾರ್ಥನೆಯು ಎಲ್ಲದರ ಮೇಲೂ ಪ್ರಭಾವ ಬೀರುತ್ತದೆ, ಬ್ಯಾಕ್ಟೀರಿಯಾದ ಬೆಳವಣಿಗೆಯಿಂದ ಹಿಡಿದು ಗಾಯಗಳನ್ನು ಗುಣಪಡಿಸುವವರೆಗೂ ಇದರ ಪರಿಣಾಮ ಇರುತ್ತದೆ ಎನ್ನುತ್ತವೆ ಕ್ಷುದ್ರ ಜೀವಿಗಳ ಮೇಲೆ ನಡೆಸುವ ಈ ಅಧ್ಯಯನವು ಕರಾರುವಕ್ಕಾಗಿ ವೈಜ್ಞಾನಿಕವಾಗಿ ನಡೆಯುತ್ತದೆ ಮತ್ತು ಶೋಧಿಸಿದ್ದನ್ನು ಸುಲಭವಾಗಿ ತಳ್ಳಿಹಾಕಿ ಬಿಡಲಾಗುವುದಿಲ್ಲ ಎಂದು ಹೇಳುತ್ತಾರೆ

‘ಪ್ರಾರ್ಥನೆಯು ಉತ್ತಮ ಔಷಧಿ’ಯ ಬರಹಗಾರರಾದ ಡಾ. ಲಾರಿ ಡಾಸ್ಸೆ ಎಂಬುವವರು.

ವಿಶ್ವಾಸವಿಡುವ ವೈದ್ಯರು:

ಪ್ರಾರ್ಥನೆಯಲ್ಲಿರುವ ಶಕ್ತಿಯನ್ನು ಡಾ. ಡಾಸ್ಸೆ ಅವರು ಸಂಪೂರ್ಣವಾಗಿ ಒಪ್ಪಿಕೊಂಡಿದ್ದಾರೆ ಮತ್ತು ತಮ್ಮ ರೋಗಿಗಳ ಒಳಿತಿಗಾಗಿ ವೈಯಕ್ತಿಕವಾಗಿ ಅವರು ಪ್ರಾರ್ಥಿಸುತ್ತಾರೆ. ಅಷ್ಟಾದರೂ ಅವರು ಮತ್ತು ಇತರ ಅನುಭವಶಾಲಿಗಳು ಈ ಕ್ಷೇತ್ರದಲ್ಲಿ ಎಚ್ಚರಿಕೆಯಿಂದಲೇ ಅಡಿಯಿಡುತ್ತಾರೆ. ಹೀಗಾಗಿ ಅವರು ಹೇಳುವುದೇನೆಂದರೆ ನಾವು ವಿಜ್ಞಾನದ ಹೆಸರಿನಲ್ಲಿ ಧರ್ಮವನ್ನು ಖಂಡಿತವಾಗಿಯೂ ದುರುಪಯೋಗ ಪಡಿಸಿಕೊಳ್ಳುವುದಿಲ್ಲ. ಜನರು ತಮಗಿಷ್ಟ ಬಂದ ಹಾಗೆ ನಿರ್ಣಯವನ್ನು ತೆಗೆದುಕೊಳ್ಳಬಹುದು.

ಅದಾಗಿಯೂ ಆರೋಗ್ಯ ರಕ್ಷಣಾ ಸಂಸ್ಥೆಗಳು ನಂಬಿಕೆ ಮತ್ತು ಆರೋಗ್ಯದ ಮಧ್ಯೆ ಇರುವ ಸಂಬಂಧದ ಬಗ್ಗೆ ಗಮನವೀಯಲು ಪ್ರಾರಂಭಿಸಿವೆ. ಆಧ್ಯಾತ್ಮಿಕತೆ ಮತ್ತು ಆರೋಗ್ಯದ ಬಗ್ಗೆ ಒಂದು ಸಮ್ಮೇಳನವನ್ನು ಹಾರ್ವರ್ಡ್ ವೈದ್ಯಕೀಯ ಶಾಲೆ ಮತ್ತು ಮೇಯೋಕ್ಲಿನಿಕ್‌ನವರು ಸಂಯೋಜಿಸಿದ್ದರು. ಅಮೇರಿಕಾದಲ್ಲಿ ಹೆಚ್ಚು ಕಡಿಮೆ ಅರ್ಧದಷ್ಟು ವೈದ್ಯಕೀಯ ಕಾಲೇಜಿನವರು ಈ ವಿಷಯದ ಬಗ್ಗೆ ಗಮನವನ್ನು ನೀಡಿದ್ದಾರೆ. ೧೯೯೬ ರ ಒಂದು ಸಮೀಕ್ಷೆಯ ಪ್ರಕಾರ ಅಮೇರಿಕಾದಲ್ಲಿ ಕುಟುಂಬ ವೈದ್ಯರ ಗೋಷ್ಠಿಯೊಂದರಲ್ಲಿ ಶೇಕಡಾ ತೊಂಬತ್ತೊಂಬತ್ತು ಮಂದಿ ಹೇಳಿದ್ದೇನೆಂದರೆ ಧಾರ್ಮಿಕ ನಂಬಿಕೆಯು ಗುಣಪಡಿಸುವುದರಲ್ಲಿ ಸಹಾಯಕವಾಗಿದೆ. ವೈಯಕ್ತಿಕ ಅನುಭವದ ಬಗ್ಗೆ ಪ್ರಶ್ನಿಸಿದಾಗ ಶೇಕಡಾ ಅರವತ್ತಮೂರರಷ್ಟು ವೈದ್ಯರುಗಳು ತಮ್ಮ ವೈದ್ಯಕೀಯ ಪರಿಸ್ಥಿತಿಯು ಉತ್ತಮಗೊಳ್ಳಲು ಭಗವಂತನು ಸಹಕರಿಸಿದ್ದಾನೆ ಎಂದು ನುಡಿದರು.

ಖಾಯಿಲೆ ಗುಣವಾಗುವುದಕ್ಕೆ ಪ್ರಾರ್ಥನೆ ಒಂದು ಶಕ್ತಿಯುತವಾದ ಸಾಧನವಾಗಿದೆ ಎಂದು ಅವರ ರೋಗಿಗಳು ಒಪ್ಪಿಕೊಳ್ಳುತ್ತಾರೆ ಎಂಬುದು ಸ್ಪಷ್ಟವಾದಂತಾಯಿತು. ಶೇಕಡಾ ೮೦ರಷ್ಟು ಅಮೇರಿಕನರು ಧಾರ್ಮಿಕ ನಂಬಿಕೆ ಮತ್ತು ಪ್ರಾರ್ಥನೆ ರೋಗವನ್ನು ಗುಣಪಡಿಸುವುದರಲ್ಲಿ ಸಹಾಯ ಮಾಡುತ್ತವೆ ಎಂದು ನಂಬಿರುವುದಾಗಿ ಸಮೂಹ ಮಾಧ್ಯಮಗಳು ತಿಳಿಸುತ್ತವೆ. ಶೇಕಡಾ ೬೦ರಷ್ಟು ಮಂದಿಯ ಪ್ರಕಾರ ವೈದ್ಯರು ತಮ್ಮ ರೋಗಿಗಳೊಡನೆ ಅವರ ನಂಬಿಕೆಗಳ ಬಗ್ಗೆ ಚರ್ಚಿಸಬೇಕು ಮತ್ತು ಅಗತ್ಯ ಬಿದ್ದಲ್ಲಿ ರೋಗಿಗಳು ಇಷ್ಟಪಟ್ಟರೆ ಅವರಿಗಾಗಿ ಪ್ರಾರ್ಥಿಸಲೂ ಬೇಕು ಎಂದಿದೆ.

ಧರ್ಮ ಮತ್ತು ಔಷಧಿಯ ಸಂಬಂಧದ ಈ ರೀತಿಯ ಹಂಬಲವು ಇಂದಿನ ಕ್ಷಿಪ್ರ ಹಾಗೂ ಯಾಂತ್ರಿಕ ಆರೋಗ್ಯ ರಕ್ಷಣಾ ವ್ಯವಸ್ಥೆಗೆ ಸ್ವಲ್ಪಮಟ್ಟಿನ ಪ್ರತಿಕ್ರಿಯೆಯಾಗಿದೆ. ಇದುವರೆಗೆ ಔಷಧಿಗಳು ದೈಹಿಕದ ಕಡೆಗೇ ಹೆಚ್ಚು ಗಮನಕೊಟ್ಟು ಧಾರ್ಮಿಕತೆಯನ್ನು ತಳ್ಳಿಹಾಕಿದ್ದುವು. ಆದರೆ ಈ ವಿಷಯ

ವೈದ್ಯರಿಗೆ ಮತ್ತು ರೋಗಿಗಳಿಗೆ ಸರಿಯೆನಿಸಲಿಲ್ಲ. ಆದ್ದರಿಂದ ಈಗ ಪರಿಸ್ಥಿತಿಯು ಒಂದಿಷ್ಟು ಹಿಂದಕ್ಕೆ ತೂಗುತ್ತಿದೆ.

ನಂಬಿಕೆಯು ಹೇಗೆ ಸಮರ್ಥವಾಗಿದೆ :

ಸಾಮಾನ್ಯ ಜನರಿಗೆ ಇದರ ಅರ್ಥ ವೇನು? ದೇವರನ್ನು ಪೂಜಿಸಿ, ಆರಾಧಿಸಿ ಅಂತ ಅಲ್ಲ. ಕೊಬ್ಬು ರಹಿತ ಆಹಾರವನ್ನು ಕಡ್ಡಾಯವಾಗಿ ಸೇವಿಸುವಂತೆ ವೈದ್ಯರು ಹೇಳಬಹುದು. ಆದರೆ ನಂಬಿಕೆಯನ್ನು ಬಲವಂತವಾಗಿ ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ನೀವು ಮಾಡಬಹುದಾದದ್ದು ಇದು :

ಖಾಯಿಲೆಯನ್ನು ಅನುಭವಿಸುತ್ತಿರುವಾಗ ಅಥವಾ ಶಸ್ತ್ರಚಿಕಿತ್ಸೆಯನ್ನು ಎದುರಿಸುತ್ತಿರುವಾಗ, ನಂಬಿಕೆಯು ನಿಮ್ಮ ಆರೋಗ್ಯ ರಕ್ಷಣೆಯ ಒಂದು ಭಾಗವಾಗಿದ್ದಲ್ಲಿ, ಅದನ್ನು ಗಟ್ಟಿಯಾಗಿ ವೈದ್ಯರಿಗೆ ಹೇಳಿಬಿಡಿ. ಹಾಗೆಂದು ನಿಮ್ಮ ವೈದ್ಯರು ನಿಮಗಾಗಿ ಅಥವಾ ನಿಮ್ಮ ಜೊತೆಯಲ್ಲಿ ಪ್ರಾರ್ಥಿಸಬೇಕೆಂದು ನಿರೀಕ್ಷಿಸಬಾರದು. ಆದರೆ ನಿಮಗೆ ಬೇಕಾದದ್ದನ್ನು ಗಮನಿಸಿ ನಿಮ್ಮ ಶಸ್ತ್ರಚಿಕಿತ್ಸೆಗಿಂತ ಮೊದಲು ನಿಮಗೆ ಪ್ರಾರ್ಥಿಸಲು ಅವಕಾಶ ಮಾಡಿಕೊಡಬಹುದು.

ನಂಬಿಕೆಯು ಜನರಿಗೆ ಅವರ ಬದುಕಿನ ಬಗ್ಗೆ ಒಂದಿಷ್ಟು ಹಿಡಿತವನ್ನು ಕಲ್ಪಿಸುತ್ತದೆ ಮತ್ತು ಇಂದಿನ ದಿನಗಳಲ್ಲಿ ಕೇವಲ ಯಾಂತ್ರಿಕವಾಗಿರುವ ವೈದ್ಯಕೀಯ ವೃತ್ತಿಯ ಮೇಲಿನ ಅವಲಂಬನೆಯನ್ನು ಹಿಡಿತಗೊಳಿಸುತ್ತದೆ ಎಂಬುದಾಗಿ ಡಾ. ಕ್ಯೋನಿಗ್ ಅವರು ನಂಬಿಕೆಯ ಪಾತ್ರವನ್ನು ಸಮರ್ಥಿಸುತ್ತಾರೆ.

ಶಕ್ತಿಯೇ ಜೀವನದ ಶ್ರೇಷ್ಠ ಮಾರ್ಗದರ್ಶಕ. ಧರ್ಮದ
ಉಳಿದ ವಿಷಯಗಳಲ್ಲಿ ಹೇಗೋಹಾಗೆ, ನಿಮ್ಮನ್ನು
ದುರ್ಬಲಗೊಳಿಸುವ ಪ್ರತಿಯೊಂದನ್ನೂ ತ್ಯಜಿಸಿ ಬಿಡು,
ಅದಕ್ಕೂ ನಿಮಗೂ ಸಂಬಂಧಬೇಡ.

ಸ್ವಾಮಿ ವಿವೇಕಾನಂದ

ಯಾರು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಾರೊ
ಅಂಥವರಿಗೆ ದೇವರೂ ಸಹಾಯ ಮಾಡುತ್ತಾನೆ.

ಎಸ್.ರಾಧಾಕೃಷ್ಣನ್

ಉಪಯೋಗಪ್ರದವಾದ ಸಾಂಬಾರ ಸೊಪ್ಪುಗಳು

ಎಂ.ಎಸ್. ಲಕ್ಷ್ಮಣಾಚಾರ್
೨೫೪, ವಿಶ್ವರೂಪ (ಮಹಡಿ)
೫ನೇ ಮುಖ್ಯ ರಸ್ತೆ, ೧೪ನೇ ಅಡ್ಡರಸ್ತೆ
ಜಯನಗರ, ಮೈಸೂರು-೫೭೦ ೦೧೪

ಪ್ರತಿದಿನ ನಾವು ಬಗೆಬಗೆಯ ಸೊಪ್ಪುಗಳನ್ನು ಅಡುಗೆಯಲ್ಲಿ, ಎಂದರೆ ಗೊಜ್ಜು ಸಾಂಬಾರ್, ಮೊಸರು ಬಜ್ಜಿ, ಸಾರು ಮುಂತಾದವುಗಳ ತಯಾರಿಕೆಯಲ್ಲಿ, ಸುವಾಸನೆ ಮತ್ತು ರುಚಿ ನೀಡಲೆಂದು ಉಪಯೋಗಿಸುತ್ತೇವೆ. ಇವುಗಳಲ್ಲಿ ಕೆಲವು ಪುಷ್ಟಿದಾಯಕ ಹಾಗೂ ಪೋಷಕಾಂಶಗಳುಳ್ಳವುಗಳಾಗಿರುತ್ತವೆ. ಅವುಗಳಲ್ಲಿ ಕೆಲವನ್ನು ಇತರೇ ಸೊಪ್ಪುಗಳಂತೆ ಕೇವಲ ಸೊಪ್ಪಿಗಾಗಿ ಅಲ್ಲದೆ ಅವುಗಳಿಂದ ದೊರಕುವ ಬೀಜವನ್ನು ಸಾಂಬಾರ ಪದಾರ್ಥವಾಗಿ ಉಪಯೋಗಿಸಲು ಬಳಸುತ್ತೇವೆ. ಆ ಚಿರಪರಿಚಿತವಾದ ಸಾಂಬಾರ ಸೊಪ್ಪುಗಳೆಂದರೆ ಕೊತ್ತುಂಬರಿ ಸೊಪ್ಪು, ಮೆಂತ್ಯದ ಸೊಪ್ಪು ಸಬಸಿಗೆ ಸೊಪ್ಪು, ಪುದೀನ ಸೊಪ್ಪು, ಕರೀಬೇವಿನ ಸೊಪ್ಪುಗಳಾಗಿವೆ.

೧. ಕೊತ್ತುಂಬರಿ : ಭಾರತದಲ್ಲಿ ಕೊತ್ತಂಬರಿ ಕೃಷಿಯು ವಿಪುಲವಾಗಿ ನಡೆಯುತ್ತಿದೆ. ಕೊತ್ತುಂಬರಿ ಗಿಡವು ೩೦ - ೯೦ ಸೆಂ.ಮೀ. ಎತ್ತರ ಬೆಳೆಯುತ್ತದೆ. ಅದರ ಎಲೆಗಳು ಸುವಾಸನೆ ಇರುವ ಹಸಿರು ಬಣ್ಣದ್ದಾಗಿರುತ್ತವೆ. ತೆಳ್ಳಗಿನ ಕಾಂಡಗಳಿದ್ದು ಅದರಲ್ಲಿ ಬಿಡುವ ಹೂವುಗಳು ಸಣ್ಣಗಿದ್ದು ಬಿಳಿ ಬೆರೆತ ಹಸಿರು ಬಣ್ಣದಲ್ಲಿರುತ್ತದೆ. ಇದರ ಕಾಯಿ ತೀವ್ರವಾದ ವಾಸನೆವುಳ್ಳದ್ದು ಗೋಳಾಕಾರವಾದದ್ದು ಆಗಿರುತ್ತವೆ. ಎಳೆಯ ದಾಗಿದ್ದಾಗ ಹಸಿರು ಬಣ್ಣಕ್ಕಿರುವ ಈ ಕಾಯಿ ಬಲಿತಾದ ಮೇಲೆ ಕಂದು ಹಳದಿ ಬಣ್ಣಕ್ಕೆ ತಿರುಗುತ್ತದೆ. ಮಾಗಿದ ಕಾಯಿಗಳನ್ನು ಒಣಗಿಸಿ ತೆಗೆದಾಗ ಅದನ್ನು ಕೊತ್ತುಂಬರಿ ಬೀಜ ಅಥವಾ ಧನಿಯಾ ಎಂದು ಕರೆಯುತ್ತಾರೆ.

ಔಷಧೀಯ ಗುಣಗಳು ಮತ್ತು ಉಪಯೋಗಗಳು : ಕೊತ್ತುಂಬರಿ ಬೀಜಗಳಿಗೆ ವಾತಹರ, ಮೂತ್ರವರ್ಧಕ, ಶಕ್ತಿದಾಯಕ, ಜಠರೋತ್ತೇಜಕ, ಪಿತ್ತ ವಿರೋಧಕ, ಶೈತ್ಯಹರ ಮತ್ತು ಕಾಮೋತ್ತೇಜಕ ಗುಣಗಳಿವೆಯೆಂದು ಆಯುರ್ವೇದದಲ್ಲಿ ಹೇಳಿರುವುದುಂಟು.

ಕೊತ್ತುಂಬರಿ ಸೊಪ್ಪಿನ ರಸವನ್ನು ಜೇನುತುಪ್ಪ ಬೆರೆಸಿ ಸೇವಿಸುವುದರಿಂದ ಜ್ಞಾಪಕಶಕ್ತಿ ವರ್ಧಿಸುವುದೆಂದು ಹೇಳುವುದುಂಟು. ಬಾಯಿ ಹುಣ್ಣು ನಿವಾರಣೆಗೆ ಕೊತ್ತುಂಬರಿ ಸೊಪ್ಪಿನ ರಸದಿಂದ ಬಾಯಿ ಮುಕ್ಕಳಿಸುವುದೊಳ್ಳೆಯದು. ಮೂಗಿನಲ್ಲಿ ರಕ್ತ ಸೋರುವುದಾದರೆ ಈ ರಸವನ್ನು ಮೂಗಿಗೆ ಹಾಕುವುದಾದರೆ ರಕ್ತವು ನಿಲ್ಲುತ್ತದೆ. ಕೊತ್ತುಂಬರಿ ರಸವನ್ನು ಒಂದು ಲೋಟ ಮಜ್ಜಿಗೆಯಲ್ಲಿ ಸೇರಿಸಿ ಕುಡಿದರೆ

ವಾಂತಿ, ಅಜೀರ್ಣಕ್ಕೆ ಶಮನ ಉಂಟಾಗುತ್ತದೆ. ಕೊತ್ತುಂಬರಿ ಸೊಪ್ಪಿನ ರಸದೊಂದಿಗೆ ನಿಂಬೆ ರಸ ಸೇರಿಸಿ ಮುಖಕ್ಕೆ ಕೆಲವು ದಿನಗಳು ಹಚ್ಚುವುದಾದರೆ ಮುಖದ ಮೇಲಿನ ಮೊಡವೆ ಇಲ್ಲದಂತಾಗುತ್ತದೆ.

ಕೊತ್ತುಂಬರಿ ಬೀಜದಿಂದ ತಯಾರಿಸಿದ ಕಷಾಯವು ಗಂಟಲು ನೋವು ಶೀತ ಮುಂತಾದ ಖಾಯಿಲೆಗಳ ಶಮನಕ್ಕೆ ಒಳ್ಳೆಯದು. ಜಠರದಲ್ಲಿ ವಾಯು ಸೇರಿಕೊಂಡಾಗ ಅಜೀರ್ಣ, ವಾಂತಿ ಅಥವಾ ಬೇರೇನಾದರೂ ಹೊಟ್ಟೆಯ ತೊಂದರೆ ಇದ್ದಲ್ಲಿ ಕೊತ್ತುಂಬರಿ ಬೀಜ ಏಲಕ್ಕಿ ಮತ್ತು ಕ್ಯಾರವೇ ಬೀಜಗಳನ್ನು ಬೆರೆಸಿ ಮಾಡಿದ ಕಷಾಯವನ್ನು ಸೇವಿಸುವುದರಿಂದ ಶಮನ ವುಂಟಾಗುತ್ತೆ. ಕೊತ್ತುಂಬರಿ ಬೀಜವನ್ನು ಅಗಿಯುವುದರಿಂದ ಬಾಯಿ ವಾಸನೆ ನಿವಾರಿಸ ಬಹುದು ಇದರ ಕಷಾಯವನ್ನು ತೆಗೆದುಕೊಳ್ಳುವುದಾದರೆ ಶಮನವಾಗುತ್ತದೆ. ಯೂರೋಪ್‌ನಲ್ಲಿ ಕೊತ್ತುಂಬರಿ ಬೀಜವನ್ನು ಮದ್ಯಪಾನೀಯ ತಯಾರಿಕೆಯಲ್ಲಿ ಮುಖ್ಯವಾಗಿ ಜಿನ್‌ನ ತಯಾರಿಕೆ ಯಲ್ಲಿ ಬಳಸಲಾಗುತ್ತಿದೆ.

೨. ಮೆಂತ್ಯ : ಕೊತ್ತುಂಬರಿ ಬೀಜದಂತೆಯೇ ಸಾಮಾನ್ಯವಾಗಿ ಸಾಂಬಾರ ಪದಾರ್ಥವಾಗಿ ಉಪಯೋಗಿಸಲ್ಪಡುವ ಮೆಂತ್ಯವು 'ಟ್ರಿಗೊನೆಲ್ಲಾ ಫೋಯಿನಮ್' ಎಂಬ ಸಸ್ಯ. ಸಾಂಬಾರ ಸೊಪ್ಪಿನ ಒಣಗಿದ ಬೀಜವು. ಇದರ ತವರು ಪೂರ್ವ ಯೂರೋಪ್ ಮತ್ತು ಇಥಿಯೋಪಿಯಾ ರಾಷ್ಟ್ರಗಳು, ಭಾರತರದಲ್ಲಿ ಇದನ್ನು ಇಂದು ೩೫-೪೦ ಸಾವಿರ ಹೆಕ್ಟರ್ ಪ್ರದೇಶದಲಿ ಬೆಳೆಸಿ ೪೫-೫೦ ಸಾವಿರ ಟನ್ ಮೆಂತ್ಯ ಬೀಜವನ್ನು ಉತ್ಪಾದಿಸುತ್ತಿದ್ದಾರೆ. ಉತ್ಪಾದನೆಯ ಮುಕ್ಕಾಲು ಭಾಗ ರಾಜಾಸ್ಥಾನದಿಂದ ದೊರಕುತ್ತದೆ. ಉಳಿದ ಪ್ರಮುಖ ಮೆಂತ್ಯ ಬೆಳೆಯುವ ಸಂಸ್ಥಾನಗಳೆಂದರೆ ಗುಜರಾತ್ , ಉತ್ತರ ಪ್ರದೇಶ ಮತ್ತು ಹರಿಯಾಣಗಳಾಗಿವೆ. ಉತ್ಪಾದನೆಯಲ್ಲಿ ೧/೪ ಭಾಗದಷ್ಟು ಪ್ರತಿವರ್ಷ ರಫ್ತಾಗುತ್ತಿದೆ. ಇದು ಸಾಮಾನ್ಯವಾಗಿ ಜಪಾನ್, ಕೊರಿಯಾ, ಶ್ರೀಲಂಕಾ, ಸೌದಿ ಅರೇಬಿಯಾ ಮುಂತಾದ ಅರೇಬಿಯನ್ ದೇಶಗಳು, ಯು.ಎ.ಇ. ಗಳಿಗಾಗಿದೆ.

ಮೆಂತ್ಯವು ೩೦ ರಿಂದ ೬೦ ಸೆಂ.ಮೀ. ಎತ್ತರಕ್ಕೆ ಬೆಳೆಯುವ ಸಸ್ಯ. ಇದರ ಎಲೆಯು ತಿಳಿ ಹಸಿರಾಗಿರುತ್ತದೆ. ಹಳದಿ ಹೂವುಗಳು ಮತ್ತು ತೆಳ್ಳಗೆ ಚೂಪಾದ ಉದ್ದನೆಯ ಕಾಯಿಗಳಿರು ತ್ತವೆ. ಈ ಕಾಯಿಗಳಲ್ಲಿ ಅಡಗಿರುವ ಬೀಜವು ಹಳದಿ-ಕಂದು ಬಣ್ಣದ್ದಾಗಿದ್ದು ಒಂದು ವಿಶೇಷ ವಾಸನೆಯುಳ್ಳದ್ದಾಗಿ ರುತ್ತೆ.

ಉಪಯೋಗಗಳು : ಮೆಂತ್ಯದ ಎಲೆಗಳು ಬಹು ತಂಪನ್ನೀಯುವ ಸೊಪ್ಪೆನಿಸಿ ಕೊಳ್ಳುವುದರಿಂದ ಸೊಪ್ಪುತರಕಾರಿ ಯಾಗಿ ಉಪಯೋಗಿಸುತ್ತಾರೆ. ಮೆಂತ್ಯದ ಸೊಪ್ಪನ್ನು ಆಗಾಗ ಅಡುಗೆಯಲ್ಲಿ ಬಳಸುವುದ ರಿಂದ ಮೈಕೈನೋವು, ಸೊಂಟ ನೋವು, ಹೃದಯ ಮತ್ತು ಶ್ವಾಸಕೋಶಗಳಿಗೆ ಸಂಬಂಧಿಸಿದ ರೋಗಗಳಿಗೆ ಶಮನ ವುಂಟಾಗುತ್ತದೆ. ಮೆಂತ್ಯವು 'ಕರಿ ಪೌಡರ್' ಮಿಶ್ರಣಗಳ ಒಂದು ಮುಖ್ಯ ಸಾಂಬಾರ ಪದಾರ್ಥವು. ಮೆಂತ್ಯದಲ್ಲಿ ಬಹು ಸ್ವಲ್ಪ ೦.೦೨ % ಗಿಂತ ಕಡಿಮೆ. ಪ್ರಮಾಣದಲ್ಲೇ ಚಂಚಲತೈಲ

ವಿರುವುದು. ಇದರ ಸಂಶೋಧನೆಯ ಬಗ್ಗೆ ಹೆಚ್ಚೇನೂ ತಿಳಿದಿಲ್ಲ. ಇದು ವಾಣಿಜ್ಯದಲ್ಲಿ ಪ್ರಾಮುಖ್ಯವನ್ನು ಪಡೆದಿಲ್ಲ.

ಔಷಧೀಯ ಗುಣಗಳು ಮತ್ತು ಉಪಯೋಗಗಳು : ಮೆಂತ್ಯದ ಬೀಜಗಳು ವಾತಹರ, ಶಕ್ತಿದಾಯಕ ಮತ್ತು ಕಾಮೋತ್ತೇಜಕ ಗುಣಗಳುಳ್ಳದ್ದಾಗಿದೆ ಯೆಂದು ಆಯುರ್ವೇದದಲ್ಲಿ ಹೇಳಿದೆ.

ಮೆಂತ್ಯದ ಸೊಪ್ಪು ಸುವಾಸನೆಯುಳ್ಳದ್ದೂ, ತಂಪಾದದ್ದೂ, ಮೆದು ಸುಖ ವಿರೇಚನವೂ ಆದದ್ದಾಗಿದೆ. ಮೆಂತ್ಯದಸೊಪ್ಪು ಅಜೀರ್ಣ, ಉಬ್ಬರ ಮತ್ತು ಮಂದಗತಿಯಲ್ಲಿನ ಯಕೃತ್‌ಗಳ ಚಿಕಿತ್ಸೆಯಲ್ಲಿ ಉತ್ತಮವು. ಎಲೆಗಳ ಕಷಾಯವನ್ನು ಬಾಯಿ ಹುಣ್ಣಿನ ನಿವಾರಣೆಗೆ ಬಾಯಿ ಮುಕ್ಕಳಿಸಲೆಂದು ಉಪಯೋಗಿಸಬಹುದು. ಪ್ರತಿದಿನವೂ ಎಳೆಯ ಮೆಂತ್ಯದ ಎಲೆಗಳನ್ನು ಅರೆದು ನೆತ್ತಿಗೆ ಹಚ್ಚಿಕೊಂಡು ಸ್ನಾನ ಮಾಡುವುದರಿಂದ ತಲೆಗೂದಲಿನ ಬೆಳವಣಿಗೆಗೂ ಅದರ ಬಣ್ಣವನ್ನು ಕಾಪಾಡಲೂ ಸಹಾಯಕವಾಗಿರುತ್ತೆ. ಅಂತೆಯೇ ಇದನ್ನು ಮಲಗುವುದಕ್ಕಿಂತ ಮುಂಚೆ ಮುಖಕ್ಕೆ ಹಚ್ಚಿಕೊಂಡರೆ ಚರ್ಮದ ಸುಕ್ಕು ಮೊಡವೆ ಇತ್ಯಾದಿಗಳು ನಿವಾರಣೆಯಾಗುತ್ತೆ ಮತ್ತು ಮುಖದ ಕಾಂತಿಯನ್ನು ಉತ್ತಮಪಡಿಸುತ್ತೆ.

ಮೆಂತ್ಯದ ಬೀಜದ ಕಷಾಯವನ್ನು ಸಿಡುಬು, ಆಮಶಂಕೆ ರೋಗಗಳಿಗೆ ಬಾಯಿ ಹುಣ್ಣು ಬರುವವರಿಗೆ ಕೊಡಬಹುದು. ನಿವಾರಣೆಯಾಗುತ್ತೆ. ಮೆಂತ್ಯದ ಬೀಜವನ್ನು ತುಪ್ಪದಲ್ಲಿ ಹುರಿದು ಸಾಕಷ್ಟು ಉಪ್ಪು ಮತ್ತು ಸೋಂಪು ಬೀಜವನ್ನು ಸೇರಿಸಿ ಅದನ್ನು ಪುಡಿಮಾಡಿ ಮಜ್ಜಿಗೆಯಲ್ಲಿ ಕಲೆಸಿ ಕುಡಿದರೂ ಸಾಕು ಆಮಶಂಕೆ ನಿವಾರಣೆಯಾಗುತ್ತದೆ. ಬಾಣಂತಿಯರಿಗೆ ಮೂರನೆಯ ತಿಂಗಳಿನಲ್ಲಿ ಮೆಂತ್ಯವನ್ನು ಉಪಯೋಗಿಸಿದ ತಿಂಡಿಗಳನ್ನು ಕೊಡುವುದರಿಂದ ಬಾಣಂತಿಯರ ಎದೆ ಹಾಲಿನಲ್ಲಿ ಹೆಚ್ಚಳ ಉಂಟಾಗುತ್ತದೆ. ಹಸು, ಎಮ್ಮೆಗಳಿಗೂ ಮೆಂತ್ಯವನ್ನು ತವುಡು ಹತ್ತಿ ಬೀಜಗಳೊಂದಿಗೆ ಬೆರೆಸಿ ತಿನ್ನಿಸುವುದರಿಂದ ಅವು ಹಾಲು ಹೆಚ್ಚು ಕೊಡುತ್ತವೆಂದು ತಿಳಿದು ಬಂದಿದೆ. ಮೆಂತ್ಯದ ಸೊಪ್ಪು ಉಪಯೋಗಿಸುವಂತೆಯೇ ಮೆಂತ್ಯದ ಬೀಜವನ್ನು ಅರೆದು ಉಪಯೋಗಿಸುವುದರಿಂದ ಮುಖ ಕಾಂತಿ, ಕೇಶವರ್ಧನೆ ಮುಖದಲ್ಲಿನ ಮೊಡವೆ, ಸುಕ್ಕುಗಳಿಗೆ ಶಮನ ಉಂಟಾಗುತ್ತದೆ. ಇತ್ತೀಚೆಗೆ ನಡೆದ ಕೆಲವು ಸಂಶೋಧನೆಗಳಿಂದ ಮೆಂತ್ಯದಲ್ಲಿ 'ಡಯಸ್‌ಜೆನಿನ್' ಎಂಬ ಸ್ಟಿರಾಯಿಡಲ್ ಪದಾರ್ಥವು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಮೆಂತ್ಯವನ್ನು ಸೆಕ್ಸ್ ಹಾರ್ಮೋನ್‌ಗಳ ತಯಾರಿಕೆಯಲ್ಲಿ ಹಾಗೂ ಗರ್ಭನಿರೋಧಕ ಮಾತ್ರೆಗಳ ತಯಾರಿಕೆಯಲ್ಲಿ ಉಪಯೋಗಿಸಬಹುದೆಂದು ತಿಳಿದು ಬಂದಿದೆ.

೩. ಸಬ್‌ಸಿಗೆ : ಸಬ್‌ಸಿಗೆ ಅಥವಾ ಸಬ್ಬಕ್ಕಿ ಸೊಪ್ಪಿನ ಸಸ್ಯ ಶಾಸ್ತ್ರ ನಾಮಧೇಯ 'ಅನೆಥಮ್ ಗ್ರಾವಿಯೋಲೆನ್ಸ್' ಮತ್ತು 'ಅನೆಥಮ್ ಸೋವಾ' ಭಾರತದಲ್ಲಿ ಹೆಚ್ಚು ಬೆಳೆಯುತ್ತಿರುವ ಸಸ್ಯದ ಶಾಸ್ತ್ರೀಯ ನಾಮವು 'ಅನೆಥಮ್ ಸೋವಾ'. ಈ ಸೊಪ್ಪಿನ ಪ್ರತಿಯೊಂದು ಭಾಗವೂ ಸುವಾಸನೆಯಿಂದ ಕೂಡಿದೆ. ಇದನ್ನು ಇಂಗ್ಲಿಷ್‌ನಲ್ಲಿ 'ದಿಲ್'

ಎಂದು ಕರೆಯುತ್ತಾರೆ. ಇದರ ತವರೂರು ಯೂರೋಪ್ ಮತ್ತು ಮೆಡಿಟರೇನಿಯನ್ ರಾಷ್ಟ್ರಗಳು. ಭಾರತದಲ್ಲಿ ಇದನ್ನು ಮಹಾರಾಷ್ಟ್ರ ಗುಜರಾತ್, ಆಂಧ್ರ ಪ್ರದೇಶ, ಮಧ್ಯಪ್ರದೇಶ ಮತ್ತು ರಾಜಾಸ್ತಾನಗಳಲ್ಲಿ ಬೆಳೆಯುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಇದನ್ನ ಚಳಿಗಾಲದ ಬೆಳೆಯಾಗಿ ಬೆಳೆಯುತ್ತಾರೆ.

ಸಬ್‌ಸಿಗೆ ಗಿಡವು ಸುಮಾರು ೧ ರಿಂದ ೨ಮೀ. ಎತ್ತರ ಬೆಳೆಯುತ್ತದೆ. ಇದರ ಎಲೆಗಳ ಬಣ್ಣ ತಿಳಿ ಹಸಿರು. ಛತ್ರ ಮಂಜರಿ ಆಕಾರದ ಹಳದಿ ಹೂಗಳಿರುತ್ತವೆ. ಇದರ ಬಲಿತ ತಿಳಿ ಕಂದು ಬಣ್ಣದ ಬೀಜಗಳು ಕ್ಯಾರವೇ(ದೊಡ್ಡ ಜೀರಿಗೆ) ವಾಸನೆಯನ್ನು ಹೋಲುವ ಸುವಾಸನೆ ಬಣ್ಣದ್ದಾಗಿ ಇರುತ್ತದೆ.

ಉಪಯೋಗಗಳು : ಸಬ್‌ಸಿಗೆಯನ್ನು ಒಳ್ಳೆಯ ಸೊಪ್ಪು ತರಕಾರಿಯಾಗಿ ಉಪಯೋಗಿಸುತ್ತಾರೆ. ಇದರ ಬೀಜಗಳನ್ನು ಮತ್ತು ಅದರ ಪುಡಿಯನ್ನು ಸೋಪುಗಳು, ಗೊಜ್ಜುಗಳು ಸಂಸ್ಕರಿಸಿದ ಮಾಂಸಗಳು, ಉಪ್ಪಿನಕಾಯಿ ಇವುಗಳಲ್ಲಿ ರುಚಿಕಾರಕವಾಗಿ ಉಪಯೋಗಿಸು ತ್ತಾರೆ. ಬೀಜಗಳನ್ನು ಪುಡಿಮಾಡಿ ಮಸಾಲೆಯಲ್ಲಿ ಉಪಯೋಗಿಸು ತ್ತಾರೆ. ಆಗತಾನೇ ಕುಯ್ಲು ಮಾಡಿದ ಸೊಪ್ಪಿನಲ್ಲಿ ಶೇಕಡ೦.೬೦ ನಿಂದ ೨.೮೪ ರಷ್ಟು ತೈಲಾಂಶವಿರುತ್ತದೆ. ಬೀಜಗಳ್ಲಿ ಶೇ.೧.೫ ರಿಂದ ೪.೦ ರಷ್ಟು ತೈಲವಿರುತ್ತದೆ. ತೈಲ ತೆಗೆದ ಮೇಲೆ ಉಳಿಯುವ ಬೀಜಗಳಲ್ಲಿ ಜಿಡ್ಡು, ಸಸಾರಜನಕ ಇರುತ್ತದೆ .ಇದನ್ನು ದನಗಳ ಆಹಾರವಾಗಿ ಉಪಯೋಗಿಸಬಹುದು. ಈ ತೈಲವನ್ನು ಸಾಬೂನಿನ ತಯಾರಿಕೆಯಲ್ಲೂ ಉಪಯೋಗಿಸುವುದುಂಟು.

ಔಷಧೀಯ ಗುಣಗಳು ಮತ್ತು ಉಪಯೋಗಗಳು : ಸಬ್‌ಸಿಗೆ ಎಲೆಗಳಿಗೆ ಉತ್ತೇಜಕ ಮತ್ತು ಮೂತ್ರೋತ್ಪಾದಕ ಗುಣಗಳಿವೆ. ಹಚ್ಚ ಹಸಿರು ಸಬ್‌ಸಿಗೆ, ಸೊಪ್ಪಿನಿಂದ ತೆಗೆದ ಕಷಾಯವನ್ನು ಮಕ್ಕಳ ಆಹಾರ ದೊಂದಿಗೆ ಕೊಡುವುದೇ ಆದರೆ ಅದು ಮಕ್ಕಳಲ್ಲಿರುವ ಅಜೀರ್ಣವನ್ನು ಶಮನಗೊಳಿಸುತ್ತದೆಂದು ಹೇಳುವುದುಂಟು. ಇದರ ಎಲೆಗಳನ್ನು ಸ್ವಲ್ಪ ಅರೆದು ಅರಿಶಿನ ದೊಂದಿಗೆ ಸೇರಿಸಿ ರಕ್ತ ಕುರುಗಳಿಗೆ ಕಟ್ಟಿದರೆ ಕುರುಗಳಲ್ಲಿ ಕೀವು ಉಂಟಾಗುವುದನ್ನು ತಡೆಯುತ್ತದೆ. ಇದರ ಎಲೆಗಳನ್ನು ಎಳ್ಳೆಣ್ಣೆಯಲ್ಲಿ ಕುದಿಸಿ ಉಪಯೋಗಿಸಿದರೆ ಮೂಳೆ ಸಂಧಿಗಳಲ್ಲುಂಟಾಗುವ ನೋವನ್ನೂ ಊತವನ್ನೂ ಕಡಿಮೆ ಮಾಡುತ್ತದೆ ಎಂದು ಹೇಳುವುದುಂಟು. ಸಬ್‌ಸಿಗೆ ಸೊಪ್ಪಿನಲ್ಲಿ ಅಧಿಕ ಪ್ರಮಾಣದಲ್ಲಿ ಕಬ್ಬಿಣ ಇರುವುದರಿಂದ ಮಕ್ಕಳಿಗೆ ಮತ್ತು ಬಾಣಂತಿಯರಿಗೆ ಉತ್ತಮ ಆಹಾರ, ದಕ್ಷಿಣ ಭಾರತದಲ್ಲಿ ಈ ಸೊಪ್ಪನ್ನು ಬಾಣಂತಿಯರಿಗೆ ಎದೆ ಹಾಲು ಹೆಚ್ಚಿಸಲು ಬಳಸುವುದುಂಟು.

ಸಬ್‌ಸಿಗೆ ಬೀಜವನ್ನು ನೀರಿನಲ್ಲಿ ನೆನಸಿ ಅದರ ತಿಳಿಯನ್ನು ಗ್ರೈಪ್ ವಾಟರ್‌ನಲ್ಲಿ ಬಳಸುತ್ತಾರೆ. ಸಬ್‌ಸಿಗೆ ಬೀಜ ಮತ್ತು ಅದೇ ಪ್ರಮಾಣದಲ್ಲಿ ಮೆಂತ್ಯದ ಬೀಜವನ್ನು ತೆಗೆದುಕೊಂಡು ಬಾಣಲೆಯಲ್ಲಿ ತುಪ್ಪದಲ್ಲಿ ಹುರಿದು ಅದನ್ನು ಉಪಯೋಗಿಸುವುದಾದರೆ ಭೇದಿ, ಅತಿಸಾರ, ಆಮಶಂಕೆಗಳಿಗೆ

ಔಷಧಿ ಯಾಗಿ ಉಪಯೋಗಿಸಬಹುದು . ಶೀತ, ಫ್ಲೂ, ಬ್ರಾಂಕೈಟೀಸ್ ಇವುಗಳಿಗೆ ಸಬ್‌ಸಿಗೆ ಬೀಜದ ಕಷಾಯವನ್ನು ಜೇನುತುಪ್ಪ ದೊಂದಿಗೆ ಪ್ರತಿದಿನ ಮೂರುಸಲ ತೆಗೆದು ಕೊಳ್ಳುವುದು ಒಳ್ಳೆಯದು.

ಸಬ್‌ಸಿಗೆ ಬೀಜದಿಂದ ಪಡೆದ ತೈಲದ ಒಂದು ತೊಟ್ಟನ್ನು ಒಂದು ಟೀಸ್ಪೂನ್ ಜೇನುತುಪ್ಪದಲ್ಲಿ ಸೇರಿಸಿ ಊಟವಾದ ನಂತರ ತೆಗೆದುಕೊಳ್ಳುವುದಾದರೆ ಅದು ಹೊಟ್ಟೆಯಲ್ಲಿನ ನಾನಾ ರೋಗಗಳನ್ನು ಶಮನ ಮಾಡುತ್ತೆಂದು ಹೇಳುವುದುಂಟು.

೪. ಪುದೀನಾ: ಪುದೀನಾವನ್ನು ಪುಷ್ಟಿದಾಯಕ ಮತ್ತು ಆರೋಗ್ಯದಾಯಕ ಸಾಂಬಾರ ಸೊಪ್ಪು ಎಂದು ಹೇಳುವುದುಂಟು. 'ಮೆಂತ ಆರ್ವೆನ್ಸಿಸ್ ' ಎಂಬ ಶಾಸ್ತ್ರೀಯ ನಾಮ ದಿಂದ ಅರಿಯಲ್ಪಡುವ ಇದನ್ನು ಇಂಗ್ಲಿಷ್ ನಲ್ಲಿ 'ಮಿಂಟ್' ಎಂದು ಕರೆಯುತ್ತಾರೆ. ಇದರ ತವರೂರು ಭಾರತ ಮತ್ತು ಯೂರೋಪ್ ದೇಶಗಳು.

ನೆಲದ ಮೇಲೆ ಹರಡಿಕೊಂಡು ಬೆಳೆಯುವ ಪುದೀನದ ಎಲೆಗಳು ಗುಂಡಾ ಗಿರುತ್ತವೆ. ಇದರಲ್ಲಿ ಬಿಡುವ ಹೂವು ಕೆನ್ನೀಲಿ ಬಣ್ಣದ್ದಾಗಿರುತ್ತವೆ. ಪುದೀನ ಹೂವು ಬಿಡುವ ಸಮಯದಲ್ಲಿ ಅದರ ಎಲೆಗಳಲ್ಲಿ ಬಹು ಹೆಚ್ಚಿನ ತೈಲವಿರುತ್ತದೆ. ಅನಂತರ ಅದರ ಪ್ರಮಾಣವು ಕಡಿಮೆಯಾಗ ತೊಡಗುತ್ತದೆ.

ಉಪಯೋಗಗಳು: ಬಹುಪಯೋಗಿ ಸೊಪ್ಪಾದ ಪುದೀನ ಸೊಪ್ಪಿನಲ್ಲಿ ಮೆಂಥಾಲ್ ಮತ್ತು ಟ್ಯಾನಿನ್ ಪದಾರ್ಥಗಳಿವೆ . ಭಾರತದಲ್ಲಿ ಬೆಳೆಯುವ ಪುದೀನದಲ್ಲಿ ಅಪೇಕ್ಷಿತ ಪೆಪ್ಪರ್‌ಮೆಂಟ್ ತೈಲವಿದೆ. ಪುದೀನ ಎಲೆಗಳನ್ನು ಹಬೆಗೊಡ್ಡಿ ಭಟ್ಟಿ ಇಳಿಸಿದಾಗ ದೊರಕುವ ಈ ತೈಲವು ಹೊಂಬಣ್ಣದ ಹಳದಿಯಾಗಿರುತ್ತದೆ. ಈ ತೈಲವನ್ನು ತಂಪಾಗಿಸಿ ಶೇಕಡ ೫೦ ರಷ್ಟು ಮೆಂಥಾಲ್ ಅನ್ನು ಸ್ಫಟಿಕ ರೂಪದಲ್ಲಿ ಬೇರ್ಪಡಿಸ ಬಹುದು. ಮೆಂಥಾಲ್ ತೆಗೆದ ತೈಲವನ್ನು ಪೆಪ್ಪರ್‌ಮೆಂಟ್ ತೈಲವಾಗಿ ಉಪಯೋಗಿಸ ಬಹುದು. ಈ ತೈಲವನ್ನು ಕ್ಯಾಂಡಿ, ಚ್ಯೂಯಿಂಗ್‌ಗಮ್, ಪಾನೀಯ ಹಾಗೂ ಸುಗಂಧ ವಸ್ತುಗಳ ತಯಾರಿಕೆಯಲ್ಲಿ ಮತ್ತು ಟೂತ್‌ಪೇಸ್ಟ್‌ಗಳಲ್ಲಿ ಬಳಸುತ್ತಾರೆ.

ಔಷಧೀಯ ಗುಣಗಳು ಮತ್ತು ಉಪಯೋಗ ಗಳು: ಪುದೀನ ಎಲೆಗಳನ್ನು ಉಪ ಯೋಗಿಸುವುದರಿಂದ ನೆಗಡಿ, ಗಂಟಲು ನೋವು, ಬಾಯಿಯಲ್ಲಿನ ದುರ್ಗಂಧವನ್ನು ಹೋಗಲಾಡಿಸಬಹುದು. ದಂತಕ್ಷಯ ನಿವಾರಣೆಯಾಗುತ್ತೆ. ಜೀರ್ಣಶಕ್ತಿ ಹೆಚ್ಚಾಗಿ ಹಸಿವು ಹೆಚ್ಚುತ್ತದೆ. ತಲೆನೋವು, ನರಶೂಲೆ, ದೇಹದಲ್ಲಿನ ನೋವುಗಳಿಗೆ ಶಮನ ವುಂಟಾಗುತ್ತದೆ. ಮೂರ್ಛೆರೋಗವಿರುವ ವರಿಗೆ ಪುದೀನ ಎಲೆಗಳನ್ನು ನಿತ್ಯವೂ ಸೇವಿಸುವುದರಿಂದ ಗುಣಮುಖವಾಗುವ ಸಾಧ್ಯತೆಯುಂಟು . ಪುದೀನಾ ಎಲೆಗಳನ್ನು ಅರಿಶಿನ ಸೇರಿಸಿ ನೀರಿನಲ್ಲಿ ಚೆನ್ನಾಗಿ ಅರೆದು ಅದನ್ನು ಮುಖಕ್ಕೆ ಹಚ್ಚಿಕೊಂಡರೆ ಮೊಡವೆ, ಚರ್ಮದ ಕಲೆಗಳು ಮಾಯವಾಗುತ್ತವೆ. ಊಟಕ್ಕೆ ಮುಂಚೆ ಎರಡು ಚಮಚ ಪುದೀನ ರಸಕ್ಕೆ ಒಂದು ಚಮಚ ಜೇನುತುಪ್ಪ ಸೇವಿಸಿದರೆ ಅಜೀರ್ಣವು ಮಾಯವಾಗುತ್ತದೆ. ಹೊಟ್ಟೆ ಉಬ್ಬರ ಶಮನವಾಗುತ್ತದೆ. ಭೇದಿ,

ವಾಂತಿ ಮತ್ತು ಅಜೀರ್ಣ ನಿವಾರಣೆಗೆ ಪುದೀನ ಎಲೆಗಳನ್ನು ಶುಂಠಿಯೊಂದಿಗೆ ಸೇರಿಸಿ ಕುಟ್ಟಿ ಒಂದು ಲೋಟ ನೀರಿಗೆ ಹಾಕಿ ಕಷಾಯ ತಯಾರಿಸಿ ಸ್ವಲ್ಪ ಉಪ್ಪು ಬೆಲ್ಲ ಸೇರಿಸಿ ಕುಡಿದರೆ ಸಾಕು. ಇದನ್ನು ಪುದೀನ್‌ಹರ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ.

೫. ಕರಿಬೇವು : ಕರೀಬೇವಿನ ಗಿಡವು ಸುವಾಸನೆಯುಳ್ಳ ಗಿಡ. ಇದರ ಸಸ್ಯಶಾಸ್ತ್ರೀಯ ಹೆಸರು 'ಮುರ್ರಾಯ ಕನೇಗಿ'. ಈ ಗಿಡ ಭಾರತ ಮತ್ತು ಅಂಡಮಾನ್ ದ್ವೀಪಗಳಲ್ಲಿ ಎಲ್ಲಾ ಪ್ರದೇಶಗಳಲ್ಲೂ ಬೆಳೆಯುತ್ತದೆ. ಕರೀಬೇವಿನ ಎಲೆಯು ಸ್ವಲ್ಪ ಮಟ್ಟಿಗೆ ಕಹಿಯೂ ವಾಸನೆಯುಳ್ಳದ್ದೂ ಆಗಿರುತ್ತದೆ.

ಕರೀಬೇವಿನ ಗಿಡವನ್ನು ೬ ಮೀಟರ್‌ವರೆಗೆ ಎತ್ತರವಾಗಿ ಬೆಳೆಯಬಹುದು. ಇದರ ತೊಗಟೆಗೆ ಬೂದು ಬಣ್ಣವಿದೆ. ಎಲೆಗಳು ಚೂರಿಯಾಕೃತಿಯಲ್ಲಿದ್ದು ಒಂದು ಕಡ್ಡಿಯಲ್ಲಿ ೬ ರಿಂದ ೧೦ ರವರೆಗೆ ಜೋಡಿಪತ್ರಗಳಿರುತ್ತವೆ. ಇದರಲ್ಲಿ ಹೂವುಗಳು ಗೊಂಚಲಾಗಿ ಬಿಟ್ಟಿರುತ್ತವೆ. ಅವುಗಳು ಹಸಿರು ಮಿಶ್ರಿತ ಬಿಳಿಬಣ್ಣಕ್ಕಿರುತ್ತೆ. ಕಾಯಿಗಳು ಚಿಕ್ಕದಾಗಿಯೂ ಗುಂಡಾಗಿಯೂ ಹಸಿರಾಗಿಯೂ ಇರುತ್ತವೆ. ಹೊಚ್ಚ ಹೊಸ ಕರೀಬೇವು ಎಲೆಗಳಿಂದ ಹಬೆ ಭಟ್ಟಿಗೆ ಹಾಕಿದಾಗ ೨.೬ % ತೈಲವನ್ನು ಕೊಡುತ್ತದೆ. ಎಲೆಗಳು ಬಲಿತಂತೆಲ್ಲ ಅದರಿಂದ ದೊರಕುವ ತೈಲದ ಪ್ರಮಾಣವು ಕಡಿಮೆಯಾಗುತ್ತಾ ಹೋಗುತ್ತದೆ. ಈ ತೈಲವನ್ನು ಶುದ್ಧಗೊಳಿಸಿದಾಗ ಕಡು ಹಳದಿ ಬಣ್ಣದ ತೀಕ್ಷ್ಣ ಸಾಂಬಾರ ವಾಸನೆಯುಳ್ಳ ಮತ್ತು ಲವಂಗದಂತಹ ಖಾರದ ರುಚಿಯ ತೈಲ ಸಿಗುತ್ತದೆ.

ಉಪಯೋಗಗಳು: ಆಹಾರವನ್ನು ರುಚಿಕಾರಕವನ್ನಾಗಿ ಮಾಡಲು ಭಾರತದಲ್ಲಿ-ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ಕರೀಬೇವಿನ ಎಲೆಯನ್ನು ಅಡುಗೆಯಲ್ಲಿ ಉಪಯೋಗಿಸುತ್ತಿದ್ದಾರೆ. ಇದರ ಎಲೆಗಳು ತೀಕ್ಷ್ಣವಾದ ಪರಿಮಳವನ್ನು ಹೊಂದಿದ್ದು ಮಸಾಲೆ ಪುಡಿ, ಚಟ್ನಿ, ಪಲ್ಯ ಮುಂತಾದ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಇದನ್ನು ಉಪಯೋಗಿಸಲಾಗುತ್ತದೆ.

ಔಷಧೀಯ ಗುಣಗಳು ಮತ್ತು ಉಪಯೋಗಗಳು: ಗಿಡದ ಎಲೆ, ತೊಗಟೆ ಮತ್ತು ಬೇರುಗಳನ್ನು ವೈದ್ಯದಲ್ಲಿ ಶಕ್ತಿದಾಯಕ ಜಠರೋತ್ತೇಜಕ, ಉತ್ತೇಜಕ ಮತ್ತು ವಾತಹರ ಗುಣಗಳಿಗಾಗಿ ಬಳಸುತ್ತಾರೆ.

ಹುರಿದ ಎಲೆಗಳ ಕಷಾಯವನ್ನು ವಾಂತಿ ಓಕರಿಕೆ ನಿಲ್ಲಿಸಲು ಬಳಸುತ್ತಾರೆ. ಇದನ್ನು ಚರ್ಮದ ಮೇಲೆ ಬಳಿಯುವುದರಿಂದ ಗುಳ್ಳೆಗಳನ್ನು ವಾಸಿ ಮಾಡಲು ಸಾಧ್ಯ. ವಿಷಜಂತುಗಳ ಕಡಿತಕ್ಕೂ ಇದನ್ನು ಅರೆದು ಹಚ್ಚಬಹುದು. ಹಸಿರು ಚಿಗುರೆಲೆಗಳನ್ನು ಬರಿ ಹೊಟ್ಟೆಯಲ್ಲಿ ಕೆಲವು ದಿನಗಳು ಸೇವಿಸಿದರೆ ರಕ್ತಭೇದಿಯನ್ನು ನಿಲ್ಲಿಸಬಹುದು. ಕರೀಬೇವಿನ ಎಲೆಗಳನ್ನು ಪುದೀನ ಜೊತೆಗೆ ಅರೆದು ಚಟ್ನಿಮಾಡಿ ಉಪಯೋಗಿಸಿ ವಾಂತಿಯನ್ನು ತಡೆಗಟ್ಟಬಹುದು. ಕರೀಬೇವಿನ ಎಲೆಗಳ ತಾಜಾರಸವನ್ನು ನಿಂಬೆ ರಸ ಮತ್ತು ಸಕ್ಕರೆಯೊಂದಿಗೆ ಸೇವಿಸಿದರೆ, ಅಜೀರ್ಣದಿಂದ

ಉಂಟಾಗುವ ವಾಂತಿ ಮತ್ತು ಓಕರಿಕೆಗಳನ್ನು ನಿವಾರಿಸಬಹುದು. ಎಲೆಗಳನ್ನು ಚೆನ್ನಾಗಿ ಪೇಸ್ಟ್ ಆಗಿ ಅರೆದು ಮಜ್ಜಿಗೆಯೊಂದಿಗೆ ಬರಿಯ ಹೊಟ್ಟೆಯಲ್ಲಿ ತೆಗೆದುಕೊಳ್ಳುವುದ ರಿಂದ ಹೊಟ್ಟೆಯಲ್ಲಿನ ನಾನಾ ತೊಂದರೆಗಳನ್ನು ಶಮನಗೊಳಿಸಬಹುದು. ಎಲೆಯನ್ನು ಹಾಲಲ್ಲಿ ಹಾಕಿ ಬೇಯಿಸಿ ಅರೆದು ವಿಷಜಂತು ಕಡಿದ ಜಾಗದಲ್ಲಿ ಹಚ್ಚುವುದರಿಂದ ವಿಷ ದಿಂದುಂಟಾದ ಊತ ಮತ್ತು ನೋವು ಕಡಿಮೆಯಾಗುತ್ತೆ. ಚೆನ್ನಾಗಿ ಬಲಿತ ಹತ್ತು ಎಲೆಗಳನ್ನು ಪ್ರತಿದಿನ ಬೆಳಗ್ಗೆ ತೆಗೆದುಕೊಂಡರೆ (ಮೂರು ತಿಂಗಳ ಕಾಲ) ವಂಶಪಾರಂಪರ್ಯವಾಗಿ ಬಂದಿರುವ ಸಿಹಿ ಮೂತ್ರ ರೋಗಕ್ಕೆ ಒಳ್ಳೆಯ ದೆಂದು ಹೇಳುವುದುಂಟು. ಬೊಜ್ಜಿನಿಂದ ಉಂಟಾದ ಸಿಹಿ ಮೂತ್ರ ರೋಗಕ್ಕೂ ಇದು ಒಳ್ಳೆಯದು.

ಮರದ ತೊಗಟೆಯ ಪುಡಿಯನ್ನು ಅಥವಾ ಅದರ ಕಷಾಯವನ್ನು ಒಂದು ಟೀ ಸ್ಪೂನ್‌ನಷ್ಟು ತಣ್ಣನೆಯ ನೀರಿನಲ್ಲಿ ತೆಗೆದು ಕೊಂಡರೆ ಪಿತ್ತ ಸಂಬಂಧವಾದ ವಾಂತಿಗೆ ಒಳ್ಳೆಯದು.

ಬೇರಿನಿಂದ ಮಾಡಿದ ಕಷಾಯವು ಮೂತ್ರಪಿಂಡಗಳಿಗೆ ಸಂಬಂಧಿಸಿದ ನೋವಿಗೆ ಒಳ್ಳೆಯದು.

ಒಂದು ಕುಲವನ್ನು ರಕ್ಷಿಸುವುದಕ್ಕಾಗಿ ಒಬ್ಬ ಮನುಷ್ಯನನ್ನು
ತೊರೆಯಬೇಕು. ಒಂದು ಗ್ರಾಮವನ್ನು ರಕ್ಷಿಸಲು ಒಂದು ಕುಲವನ್ನೇ
ಬಿಡಬೇಕು. ಒಂದು ದೇಶವನ್ನು ರಕ್ಷಿಸಲು ಒಂದು ಗ್ರಾಮವನ್ನೇ
ತ್ಯಜಿಸಬೇಕು. ಆತ್ಮ ರಕ್ಷಣೆಗಾಗಿ ದೇಶವನ್ನೇ ಬಿಡಬೇಕು.

-ಮಹಾಭಾರತ

ಇತರರನ್ನು ಅನುಸರಿಸುವುದಕ್ಕಿಂತ ನಿಮ್ಮ ಸದಸದ್ವಿವೇಕ ಬುದ್ಧಿಯಂತೆ
ನಡೆದುಕೊಳ್ಳಿರಿ. ಇತರರಿಂದ ಎರವು ತಂದ ಶಕ್ತಿ ಸಾಮರ್ಥ್ಯಗಳಿಗಿಂತ
ನಿಮ್ಮ ಸ್ವಂತ ಪ್ರಭಾವದ ಮೇಲೆಯೇ ಜೀವಿಸಲು ಕಲಿಯಿರಿ.

-ಎಮರ್ಸನ್

ಜನಗಣತಿ : ಕ್ರಿ.ಶ-೨೦೦೧

ಎ. ಡಿ. ನಂಜುಂಡಸ್ವಾಮಿ
ಮನೆ ನಂ.೧೧/ಸಿ, ೧ನೇ ತಿರುವು,
ಕೆ.ಎನ್. ಪುರ, ಉದಯಗಿರಿ,
ಮೈಸೂರು.

ಭಾರತ ದೇಶ ಹೆಮ್ಮೆ ಪಡಬಹುದಾದ ಸಾಧನೆಗಳಲ್ಲಿ ರಾಷ್ಟ್ರದ ಸಮಗ್ರವೂ, ಅಧಿಕೃತವೂ ಆದ ಜನಗಣತಿಯು ಯಶಸ್ವಿ ಸಾಧನೆಯೂ ಒಂದು. ಕ್ರಿ.ಶ. ೧೮೭೧ ರಿಂದ ಭಾರತ ಜನಗಣತಿ ನಡೆಸಿರುವ ಬಗ್ಗೆ ದಾಖಲೆಯಿದ್ದು, ಅದು ವಿಶ್ವಮಾನ್ಯತೆ ಪಡೆದುಕೊಂಡಿದೆ.

ವಿಶಾಲವೂ, ವೈವಿಧ್ಯಮಯವೂ ಆದ ನಮ್ಮ ದೇಶದ ಆಡಳಿತದಲ್ಲಿ ಜನಗಣತಿಯ ಪಾತ್ರ ಹಿರಿದಾದುದು. ದೇಶ ಎದುರಿಸಬೇಕಾದ ಆರ್ಥಿಕ, ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಶ್ರಮಿಸುತ್ತಿರುವ ಯೋಜಕರು, ನೀತಿ ನಿರೂಪಕರು, ಅರ್ಥಶಾಸ್ತ್ರಜ್ಞರು , ಸಂಶೋಧಕರು, ಆಡಳಿತಗಾರರಿಗೆ ಜನಸಂಖ್ಯಾ ಪ್ರಮಾಣದ ಸ್ಪಷ್ಟ ಕಲ್ಪನೆಯು ಅಗತ್ಯವಿರುತ್ತದೆ. ಹೀಗಾಗಿ ವ್ಯಕ್ತಿಯನ್ನು ಮೊದಲ್ಗೊಂಡು, ದೇಶದ ಮೂಲೆ ಮುಡುಕುಗಳಲ್ಲಿನ ಸಾಧನೆ, ಸಿದ್ಧಿಗಳನ್ನು ಮಾಹಿತಿ ಜಾಲದಲ್ಲಿ ಸೇರಿಸಿಕೊಂಡು, ಯಾವುದೂ ಕೈ ತಪ್ಪದಂತೆ ಜನಗಣತಿ ಕಾರ್ಯ ನಡೆಸಬೇಕಾಗಿದೆ.

ಜನಗಣತಿ ಎಂದರೇನು ?

ಆಧುನಿಕ ಪರಿಕಲ್ಪನೆಯಲ್ಲಿ, ಜನಗಣತಿಯ ಬಗ್ಗೆ ವಿಶ್ವಸಂಸ್ಥೆ ಸರಿಯಾದ ಮಾರ್ಗದರ್ಶನ ಹಾಕಿಕೊಟ್ಟಿದೆ. ಅದರ ಪ್ರಕಾರ ಜನಗಣತಿ ಎಂದರೆ'' ನಿಗದಿತ ಕಾಲದಲ್ಲಿ ಸಮಗ್ರವಾಗಿ ಅಥವಾ ಯಾವುದಾದರೊಂದು ಭಾಗದಲ್ಲಿ ವಾಸಿಸುವ ಎಲ್ಲ ಜನರ ಜನಸಂಖೀಯ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ಅಂಕಿಅಂಶ, ಮಾಹಿತಿಗಳನ್ನು ಸಂಗ್ರಹಿಸುವ, ಕ್ರೋಢೀಕರಿಸುವ, ಪರಿಶೀಲಿಸುವ, ವಿಶ್ಲೇಷಿಸುವ ಮತ್ತು ಪ್ರಕಟಿಸುವ ಕಾರ್ಯ''. ಈ ಆಶಯವನ್ನು ಭಾರತ ಅಳವಡಿಸಿಕೊಂಡು ಗಣತಿ ಕಾರ್ಯಾಚರಣೆ ನಡೆಸಲಾಗುತ್ತಿದೆ.

ಗಣತಿಯ ಅಗತ್ಯತೆ ಎಷ್ಟು ?

ಜನಸಂಖ್ಯಾ ಹೆಚ್ಚಳದಲ್ಲಿ ಭಾರತ, ಜಗತ್ತಿನ ಎರಡನೇ ದೇಶ. ಕ್ರಿ.ಶ. ೨೦೦೦ನೇ ಇಸ್ವಿಗೆ ಈ ದೇಶದ ಜನಸಂಖ್ಯೆ ೧೦೦ ಕೋಟಿ ಮೀರುವ ನಿರೀಕ್ಷೆಯಿದೆ. ಆ ಹೊತ್ತಿಗೆ ಅದು ಸಹಿಸಲು ಸಾಧ್ಯವಾದ ಪ್ರಮಾಣದಲ್ಲಿ ತುಂಬಿ

ಕೃಪೆ : ಮಾರ್ಚ್ ಆಫ್ ಕರ್ನಾಟಕ

ತುಳುಕುತ್ತದೆ. ಲಭ್ಯ ಸಂಪನ್ಮೂಲಕ್ಕೂ, ಏರುತ್ತಿರುವ ಜನಸಂಖ್ಯೆಗೂ ತಾಳಮೇಳಗಳಿಲ್ಲದೆ ತಳಮಳ ಗೊಳ್ಳುವ ಸ್ಥಿತಿ ಬರುತ್ತದೆ. ಅನಿಯಂತ್ರಿತ ಜನಸಂಖ್ಯೆಯ ಹೆಚ್ಚಳದಿಂದ ನಮ್ಮ ಜೀವನಮಟ್ಟ ಕುಸಿದು, ಪ್ರಜಾಕ್ಷೇಮದ ಮಾತು ಕನಸಿನ ಗಂಟಾಗುತ್ತದೆ. ಪ್ರತಿಶತ ೨ರಿಂದ ೩ರಷ್ಟಿನ ಹೆಚ್ಚಿನ ಜನರಿಗೆ ಮೂಲ ಸೌಲಭ್ಯಗಳ ಕೊರತೆ ಉಂಟಾ ಗುತ್ತದೆ. ಬೃಹತ್ ಪ್ರಮಾಣದ ಈ ಸಮಸ್ಯೆ ಬಗ್ಗೆ ದೇಶದ ಜನತೆ ಚಿಂತಿಸಲು ಗಣತಿಯ ವರದಿ ಅಮೂಲ್ಯವಾದುದು. ಈ ಮುನ್ನೆಲೆಯಲ್ಲಿ ಭಾರತ ತನ್ನ ಜನತೆಯ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳ ವಿವರಗಳನ್ನು ವಿಶ್ವದ ಯಾವುದೇ ದೇಶಕ್ಕೂ ಕಡಿಮೆ ಇಲ್ಲದಂತೆ ಕಲೆ ಹಾಕಿ ನೆರೆ ಹೊರೆ ದೇಶಗಳಿಗೆ ಮೇಲ್ಪಂಕ್ತಿಯಾಗಿದೆ.

ಭಾರತದ ಮಟ್ಟಿಗೆ ಜನಗಣತಿ ಎನ್ನುವುದು ಕೇವಲ ತಲೆ ಎಣಿಕೆ ಕಾರ್ಯವಾಗಿರದೆ, ರಾಷ್ಟ್ರೀಯ ಉದ್ದೇಶಗಳಾದ ಆರ್ಥಿಕ, ಸಾಮಾಜಿಕ ಯೋಜನೆಗಳು, ನೀತಿ ನಿರೂಪಣೆ, ಕೆಳಸ್ತರದಿಂದ ಬಡತನ ನಿವಾರಣೆ, ಆಹಾರ, ವಸತಿ, ಶಿಕ್ಷಣ, ಆರೋಗ್ಯ, ಉದ್ಯೋಗ ಇವುಗಳ ಬೇಡಿಕೆ ಕುರಿತಂತೆ ಜನಗಣತಿ ಮಾರ್ಗದರ್ಶಿ ಯಾಗಿದೆ. ಬೆಳೆಯುತ್ತಿರುವ ಜನಸಂಖ್ಯೆಗನುಗುಣವಾಗಿ ಆಡಳಿತ ಕ್ರಮ, ಚುನಾವಣಾ ಕ್ಷೇತ್ರಗಳ ಹಂಚಿಕೆ, ಪಟ್ಟಣ, ನಗರಗಳ ಆಡಳಿತಾತ್ಮಕ ಸ್ಥಾನ ನಿರ್ಣಯ ಇತ್ಯಾದಿಗಳ ಬಗ್ಗೆ ಜನಗಣತಿ ವೈಜ್ಞಾನಿಕವಾಗಿ ವಿಶ್ಲೇಷಿಸಿ ಉತ್ತಮಮಾರ್ಗ ಕಲ್ಪಿಸಿ ಕೊಡುತ್ತದೆ.

ವ್ಯಕ್ತಿಗತ ಹಾಗೂ ಖಾಸಗಿ ಸಂಸ್ಥೆಗಳ ಕೈಗಾರಿಕೆ, ವಾಣಿಜ್ಯ ಯೋಜನೆಗಳನ್ನು ರೂಪಿಸುವಲ್ಲಿ. ಈ ಎರಡು ಕ್ಷೇತ್ರಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ವೈಜ್ಞಾನಿಕವಾಗ ಪೃಥಕ್ಕರಿಸಿ, ಜನಸಂಖ್ಯಾಧಾರಿತ ನಗರ-ಹಳ್ಳಿಗಳ ರೂಪರೇಷೆಯನ್ನು ಅಭಿವೃದ್ಧಿ ಪರಿಕಲ್ಪನೆಯಲ್ಲಿ ಬದಲಾಯಿಸಲು ಜನಗಣತಿ ಮಹತ್ವದ ಪಾತ್ರ ವಹಿಸುತ್ತದೆ.

ಭಾರತದ ಜನಗಣತಿಯು ವಿವಿಧ ದೃಷ್ಟಿಕೋನಗಳಿಂದ ಕೂಡಿದೆ. ಇದಕ್ಕೆ ಆರ್ಥಿಕ, ಸಾಮಾಜಿಕ , ಸಾಂಸ್ಕೃತಿಕ ಹಿನ್ನೆಲೆಯಿದೆ. ಗರ್ಭತ್ವ, ಮರಣ, ಪರಿಶಿಷ್ಟಜಾತಿ, ಪರಿಶಿಷ್ಟವರ್ಗ, ಭಾಷೆ , ಧರ್ಮ, ವಲಸೆ, ಶಿಕ್ಷಣ, ಆರೋಗ್ಯ, ಸಂಪರ್ಕ, ಎಳೆಯರ ದುಡಿಮೆ, ಉದ್ಯೋಗ, ವಯಸ್ಸು, ವಸತಿ, ಗೃಹೋಪಯೋಗಿ ವಸ್ತುಗಳು, ನಾಗರೀಕ ಸೌಲಭ್ಯಗಳು ಇತ್ಯಾದಿ ವಿಷಯಗಳು ಗಣತಿಯಲ್ಲಿ ಸೇರಿರುತ್ತವೆ. ಈ ಎಲ್ಲಾ ಮಾಹಿತಿಗಳನ್ನು ಒದಗಿಸುವ ಆಕರವಾಗಿ ಕಾರ್ಯನಿರ್ವಹಿಸುತ್ತದೆ.

ಗಣತಿ ನಿಯಂತ್ರಣ

ನಮ್ಮ ದೇಶದ ಜನಗಣತಿ, ಕೇಂದ್ರ ಸರ್ಕಾರದ ಗೃಹಖಾತೆಯ ವ್ಯಾಪ್ತಿಗೆ ಒಳಪಟ್ಟಿದೆ. ರಾಷ್ಟ್ರಮಟ್ಟದಲ್ಲಿ ಕೇಂದ್ರದ ಜನಗಣತಿ ಆಯುಕ್ತರಿರುತ್ತಾರೆ. ಪ್ರತಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿನ ಗಣತಿ ಕಾರ್ಯಾಚರಣೆಯನ್ನು ನಿಯಂತ್ರಿಸಲು ನಿರ್ದೇಶನಾಲಯಗಳಿರುತ್ತವೆ. ಅಂತೆಯೇ ಕರ್ನಾಟಕದಲ್ಲಿ ಜನಗಣತಿ ಕಾರ್ಯಾಚರಣೆಗೆ ನಿರ್ದೇಶನಾಲಯವಿದೆ. ರಾಜ್ಯ ಸರ್ಕಾರದ ಬೆಂಬಲ ಒತ್ತಾಸೆಗಳಿಂದ ಕ್ರಿ.ಶ. ೨೦೦೧ರ ಗಣತಿಯ ಕಾರ್ಯಾಚರಣೆಗೆ ಎಲ್ಲ

ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತದೆ.

ಗಣತಿಕಾರ್ಯವನ್ನು ಜವಾಬ್ದಾರಿ ಮತ್ತು ನಮ್ರತೆಯಿಂದ ಯಶಸ್ವೀಗೊಳಿಸಲು ಅನುಕೂಲವಾಗುವಂತೆ, ಕಾರ್ಯನಿರ್ವಹಿಸುವ ಗಣತಿದಾರರು ೧೯೪೮ ರ ಜನಗಣತಿ ಕಾಯ್ದೆ ಅನ್ವಯ ಶಿಸ್ತಿನ ಕ್ರಮಕ್ಕೆ ಬದ್ಧರಾಗಿರುತ್ತಾರೆ. ಅಂತೆಯೇ ಸಾರ್ವಜನಿಕರು ಯಾವೊಂದು ಮುಜಗರ, ತಿರಸ್ಕಾರಕ್ಕೆ ಅವಕಾಶ ಕೊಡದಂತೆ ಗಣತಿ ಕಾರ್ಯದಲ್ಲಿ ಸಹಕರಿಸಲು ಕಾಯ್ದೆ ಅನ್ವಯ ಬದ್ಧರಾಗಿರುತ್ತಾರೆ.

ಕ್ರಿ.ಶ. ೨೦೦೧ರ ಜನಗಣತಿಯ ಮಹತ್ವ:

ಭಾರತದಲ್ಲಿ ೧೮೭೧ ರಿಂದ ೧೪ ಬಾರಿ ಗಣತಿ ಕಾರ್ಯಾಚರಣೆ ನಡೆದಿದೆ. ಸ್ವಾತಂತ್ರ್ಯನಂತರ ನಡೆಯುವ ೬ ನೇ ಕಾರ್ಯಾಚರಣೆಗೆ ಒಂದು ಚಾರಿತ್ರಿಕ ಮಹತ್ವವಿದೆ. ಕ್ರಿ.ಶಿ. ೨೦೦೧ರ ಗಣತಿ ಕಾರ್ಯ ಹೊಸ ಶತಮಾನದ ಪ್ರಥಮ ಕಾರ್ಯಾಚರಣೆಯಲ್ಲದೆ, ಮುಂದಿನ ಸಹಸ್ರಮಾನದತ್ತ ಸಂಕ್ರಮಿಸುವ ಜನಸಂಖ್ಯಾ ಶಾಸ್ತ್ರ ಹಾಗೂ ಆರ್ಥಿಕ ನೀತಿಯ ಮೇಲೆ ಬೆಳಕು ಚೆಲ್ಲಲ್ಲಿದೆ. ಕ್ರಿ.ಶ. ೨೦೦೧ರ ಫೆಬ್ರವರಿ ಮಾಹೆಯಲ್ಲಿ ಜನಗಣತಿ ಕಾರ್ಯಾಚರಣೆ ನಡೆಯಲಿದೆ.

೨೧ನೇ ಶತಮಾನದಲ್ಲಿ ಆರಂಭವಾಗುವ ಗಣತಿಗೆ ಸಂಬಂಧಿಸಿದಂತೆ ತಯಾರಿಸಲಾಗುವ ಪ್ರಶ್ನಾವಳಿಯಲ್ಲಿ ಕೆಲವೊಂದು ಅಂಶಗಳು ಸೇರ್ಪಡೆ [illegible] ಹೊಂದಿರುವ ಗೃಹ ಮಾಲೀಕತ್ವ, ರೇಡಿಯೋ, ಟ್ರಾನ್ಸಿಸ್ಟರ್, ಟಿ.ವಿ. ದೂರವಾಣಿ ಸಂಪರ್ಕ, ಬೈಸಿಕಲ್, ಸ್ಕೂಟರ, ಮೋಟಾರಸೈಕಲ್, ಮೊಪೆಡ್, ಕಾರು, ಜೀಪು, ವ್ಯಾನು, ಆದಾಯ ಇತ್ಯಾದಿ ವಿವರಗಳನ್ನು ಕಲೆಹಾಕಲು ಅವಕಾಶವಿದೆ. ಈ ಮಾಹಿತಿಗಳಿಂದ ಸಮುದಾಯದ ಆರ್ಥಿಕ ಸ್ಥಿತಿಯನ್ನು ಅರ್ಥೈಸಬಹುದಾಗಿದೆ. ಆಹಾರ ಬಳಕೆ ಕುರಿತಂತೆ ಸಸ್ಯ ಹಾಗೂ ಮಾಂಸ ಆಹಾರದ ಕ್ರಮಗಳ ವಿವರವನ್ನು ಸೇರಿಸಲಾಗುತ್ತದೆ. ವಯಸ್ಸಿನ ಮಾಹಿತಿ ಕುರಿತು ೬೦ರ ಗಡಿದಾಟದ ವೃದ್ಧರ ವಿವರಗಳನ್ನು ಪ್ರಶ್ನಾವಳಿಯಲ್ಲಿ ಸೇರಿಸಲಾಗುತ್ತದೆ.

ಜನಗಣತಿ ಆರಂಭಿಸುವ ಪೂರ್ವದಲ್ಲಿ, ವಿಶೇಷ ಸಿದ್ಧತೆಯ ಸಂಘಟನೆಯ ಜಾಲ ನಿರ್ಮಾಣವಾಗಲಿದೆ, ಗ್ರಾಮ ಉಪಗ್ರಾಮ, ತಾಲ್ಲೂಕು, ಜಿಲ್ಲೆ, ಆಡಳಿತದ ಗಡಿ ಗುರ್ತಿಸುವ ನಕ್ಷೆ, ಪ್ರಶ್ನಾವಳಿಗಳನ್ನು ಗಣತಿಯ ಕಾರ್ಯಾಚರಣೆಗೆ ತೊಡಕಾಗದಂತೆ, ಯಾವೊಂದು ವಿವರ ಬಿಟ್ಟು ಹೋಗದಂತೆ, ೧೯೯೧ರ ಜನಗಣತಿಯ ಅನುಭವದ ಆಧಾರದ ಮೇಲೆ ತಯಾರಿಸಲಾಗುತ್ತದೆ. ನಿಗಧಿತ ವೇಳೆಯಲ್ಲಿ ಗಣತಿ ಮುಗಿಸಿ ವರದಿ ತಯಾರಿಸಲು ಸಮರೋಪಾದಿಯಲ್ಲಿ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ.

ಕರ್ನಾಟಕದಲ್ಲಿ ಜನಗಣತಿ

ಮುಂದಿನ ಶತಮಾನದ ಜನಗಣತಿಗೆ ಸಂಬಂಧಿಸಿದಂತೆ ಕಾರ್ಯಾಚರಣೆ ಬಗ್ಗೆ

ಕರ್ನಾಟಕ ರಾಜ್ಯ ಸಿದ್ಧತೆಯ ಹಾದಿಯಲ್ಲಿದೆ. ಬೃಹತ್ ಪ್ರಮಾಣದ ಈ ಗಣತಿ ಕಾರ್ಯಕ್ಕೆ ಲಕ್ಷಕ್ಕೂ ಮೀರಿ ಕಾರ್ಯಕರ್ತರು ಸಿದ್ಧರಿರುತ್ತಾರೆ. ೬ ಮಹಾನಗರಪಾಲಿಕೆ, ೩.೦೦ ಸ್ಥಳೀಯ ಆಡಳಿತ ಮಂಡಲಿಗಳು, ೨೯,೨೦೦ ಗ್ರಾಮಗಳು, ೨೮,೩೦೦ ಉಪಗ್ರಾಮಗಳು ಕರ್ನಾಟಕದ ಉದ್ದಗಲಗಳು ಜನಗಣತಿ ಜಾಲದಲ್ಲಿ ಸೇರಿಕೊಳ್ಳುತ್ತವೆ. ನಮ್ಮ ರಾಜ್ಯದಲ್ಲಿ ಪ್ರಸ್ತುತ ಜನಗಣತಿಗೆ ಸಂಬಂಧಿಸಿದಂತೆ ಪ್ರಾಯೋಗಿಕವಾಗಿ ೧೦ ನಗರ ಪ್ರದೇಶ ೧೦ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಲಾಗುತ್ತದೆ.

ಕರ್ನಾಟಕ, ಈ ಹಿಂದೆ ಗಣತಿ ಕಾರ್ಯಕ್ರಮವನ್ನು ಯಶಸ್ವೀಯಾಗಿ ನಡೆಸಿರುವ ಬಗ್ಗೆ ಮಹತ್ವದ ದಾಖಲೆ ನಿರ್ಮಿಸಿದೆ. ಮುಂದಿನ ಶತಮಾನದಲ್ಲಿ ನಡೆಯುವ ಈ ರಾಷ್ಟ್ರೀಯ ಕಾರ್ಯಕ್ರಮಕ್ಕೆ ರಾಜ್ಯದ ಜನತೆ ಉತ್ಸಾಹದ ಸಹಕಾರ ನೀಡಲಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳು , ಜನತೆ, ಮಾಧ್ಯಮಗಳ ಪಾತ್ರ ಹಿರಿದಾದುದು. ಈ ಪವಿತ್ರ ಕಾರ್ಯಕ್ಕೆ ಪ್ರತಿಯೊಬ್ಬ ಪ್ರಜೆಯೂ ಸಹಕಾರ, ಒತ್ತಾಸೆಗಳನ್ನು ನೀಡಿ ಬೃಹತ್ ರಾಷ್ಟ್ರದ ಆಡಳಿತಕ್ಕೆ ನೆರವಾಗುವರೆಂದು ಆಶಿಸಬಹುದಾಗಿದೆ.

ಯಾವ ಹೆಸರಿಂದ ಕರೆದು, ಯಾವ ಯಾವ ದಾರಿಯಿಂದ ಜನ ನನ್ನ ಬಳಿ ಬರುತ್ತಾರೋ, ಆಯಾ ಹೆಸರಿನಲ್ಲಿ, ಆ ದಾರಿಯಲ್ಲಿ ನಾನು ಕಾಣಿಸುತ್ತೇನೆ.

-ಶ್ರೀ ಕೃಷ್ಣ

ಭೂಲೋಕದಲ್ಲಿ ಏನನ್ನು ಸಾಧಿಸಬೇಕಾದರೂ ಮೊದಲು ಅದನ್ನು ಭಾವಲೋಕದಲ್ಲಿ ಬಿತ್ತಬೇಕು. ಮೈಯಲ್ಲಿ ಯಾವ ಪರಿವರ್ತನೆಯಾಗಬೇಕಾಗಿದ್ದರೂ ಅದು ಮೊದಲು ಮನದಲ್ಲಿ ಮೊಳೆತು ಬೇರೂರಬೇಕು.

ರಾಷ್ಟ್ರಕವಿ ಕುವೆಂಪು

ನಿರಾಸೆಗೊಂಡ ನಿಮ್ಮ ಮಗುವಿನಲ್ಲಿ ಮತ್ತೆ ಹೊಮ್ಮಿಸಿರಿ ಪುಟಿದೇಳುವ ಮನೋಭಾವ

ಜಿ. ರಾಮನಾಥ ಭಟ್
ಬಿ-೧೮, ಸರ್ವಜ್ಞ ರಸ್ತೆ
ಕುವೆಂಪುನಗರ, ಜೆ-ಬ್ಲಾಕ್
ಮೈಸೂರು-೫೭೦ ೦೨೩

ನಮ್ಮ ಮಕ್ಕಳು ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದ ದಿನ ಬಹುಮಾನ ವಿತರಣೆ ಮುಗಿಯುತ್ತಿದ್ದಂತೆ ವಿಳುವರ್ಷದ ನನ್ನ ಮಗ ಗಸ್ ನಿರಾಸೆಯಿಂದ ಅಳುವುದೊಂದೇ ಬಾಕಿ. ಅವನ ತಮ್ಮನ ಗುಂಪು ''ಶಿಬಿರದ ಸರ್ವೋತ್ತಮ ತಂಡ'' ಪ್ರಶಸ್ತಿ ಪಡೆದಿತ್ತು. ಗಸ್‌ನ ತಂಡ ಯಾವ ಮಹತ್ವವೂ ಇಲ್ಲದ ಒಂದು ಚಿಕ್ಕ ಬಹುಮಾನವನ್ನು ಪಡೆದಿತ್ತು. ಈ ತಂಡಕ್ಕೆ ತಮ್ಮ ಟವಲ್‌ಗಳನ್ನು ಹಾಗೂ ಈಜು ಉಡುಪುಗಳನ್ನು ಲಾಕರ್‌ನಲ್ಲಿ ಮರೆಯುವ ಅಭ್ಯಾಸವಿಲ್ಲವೆಂದು ಒಂದು ಚಿಕ್ಕ ಸಮಾಧಾನಕರ ಬಹುಮಾನ ನೀಡಿದ್ದರು.

ಒಂದೆಡೆ ಉಳಿದೆಲ್ಲ ವಿಜೇತರು ವಿಜಯೋತ್ಸವದಲ್ಲಿ ನಲಿಯುತ್ತಿದ್ದರೆ ಇನ್ನೊಂದೆಡೆ ಗಸ್ ಒಂದು ಮೂಲೆಯಲ್ಲಿ ಕುಳಿತು ಮ್ಲಾನವದನನಾಗಿ ನೆಲವನ್ನೇ ದಿಟ್ಟಿಸಿ ನೋಡುತ್ತಿದ್ದ. ಯಾವುದೇ ತಾಯಿ ನಿರಾಸೆಗೊಂಡ ತನ್ನ ಮಗುವನ್ನು ಸಂತೈಸುವಂತೆ ನಾನು ಅವನ ಬಳಿ ತೆರಳಿ ಅವನನ್ನಪ್ಪಿ ಸಮಾಧಾನಪಡಿಸುತ್ತ ಹೇಳಿದೆ. ''ಈ ಬಹುಮಾನಗಳಿಗೆ ಯಾವ ಅರ್ಥವೂ ಇಲ್ಲ''.

ಹೀಗೆ ಹೇಳುವ ನನ್ನ ಉದ್ದೇಶವೇನೋ ಸರಿಯಾಗಿತ್ತು. ಆದರೆ ನಾನು ಅದನ್ನು ಹೇಳಿದ ರೀತಿ ಸರಿ ಯಾಗಿರಲಿಲ್ಲ. ಈ ಬಗ್ಗೆ ಮನೋ ವಿಜ್ಞಾನದ ಪ್ರಾಧ್ಯಾಪಕ ಲೂಯಿಸ್. ಪಿ. ಲಿಪ್ಸಿಟ್ ಹೀಗೆ ಹೇಳುತ್ತಾರೆ. ''ಪರವಾಗಿಲ್ಲ ಮಗೂ' ಎಂದು ಹೇಳಿ ನಿರಾಸೆಗೊಂಡ ಮಗುವನ್ನು ಸಂತೈಸುವುದರಿಂದ ಮಗುವಿಗೆ ಸಹಾಯವಾಗುವುದಿಲ್ಲ. ಆಗ ಮಗು ತಾನು ಬಯಸಿದ್ದು ಸಿಗಲಿಲ್ಲವೆಂದು ಇನ್ನೂ ಬೇಸರಿಸಬಹುದು. ಅಂಥ ಸಂದರ್ಭಗಳನ್ನೆದುರಿಸುವುದು ಹೇಗೆಂದು ಮಗುವು ಇದರಿಂದ ತಿಳಿದುಕೊಳ್ಳಲಾರದು.''

ಶಿಶು ಮನೋವಿಜ್ಞಾನಿಗಳ ಅಭಿಪ್ರಾಯದಂತೆ ನಾವು ಮಕ್ಕಳಿಗೆ ಕಲಿಸಬೇಕಾದ ಕೌಶಲ್ಯಗಳಲ್ಲಿ ನಿರಾಸೆಯ ಸಂದರ್ಭಗಳನ್ನೆದುರಿಸುವ ಕೌಶಲ್ಯವೇ

ಸೆಪ್ಟೆಂಬರ್ ೧೯೯೯ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಆನ್. ಇ. ರಾಫೋರ್ಡ್ ರವರ 'ಟೀಚ್ ಯುವರ್ ಚೈಲ್ಡ್ ಟು ಬೌನ್ಸ್ ಬ್ಯಾಕ್'' ಎಂಬ ಲೇಖನದ ಅನುವಾದ

ಅತ್ಯಂತ ಮುಖ್ಯವಾದುದು. ಈ ಬಗ್ಗೆ ನಡೆದ ಹಲವಾರು ಅಧ್ಯಯನಗಳು ಒಂದು ವಿಚಾರ ವನ್ನು ಎತ್ತಿ ತೋರಿಸುತ್ತವೆ. ಕೆಳಕ್ಕೆ ಬಿದ್ದ ಚೆಂಡು ಮೇಲಕ್ಕೆ ಪುಟಿಯುವಂತೆ ನಿರಾಸೆ ಯಿಂದ ಕೆಳಗೆ ಬಿದ್ದ ಯಾವ ಮಗು ಮತ್ತೆ ಉತ್ಸಾಹದಿಂದ ಪುಟಿದು ಮೇಲೇರುವ ಸಾಧನೆ ತೋರಬಲ್ಲುದೋ ಅಂಥ ಮಗು ಮತ್ತೆ ಎಂದೂ ಹಿಂದಿರುಗಿ ನೋಡಲಾರದು. ಇಂಥ ಮಕ್ಕಳು ಉಳಿದೆಲ್ಲ ಮಕ್ಕಳಿಗಿಂತ ಮುಂದೆ ಸಾಗುತ್ತಾರೆ. ಸಾಧನೆಯ ಶಿಖರ ಗಳನ್ನೇರುತ್ತಾರೆ. ಮಕ್ಕಳು ಹೀಗೆ ಚೆಂಡಿನಂತೆ ಪುಟಿದೇಳುವ ಮನೋಭಾವವನ್ನು ಬೆಳೆಸಿ ಕೊಳ್ಳುವುದರಲ್ಲಿ ತಂದೆ ತಾಯಂದಿರ ಪಾತ್ರ ತುಂಬ ಹಿರಿದೆಂದು ಶಿಶು ಮನಃಶಾಸ್ತ್ರಜ್ಞರು ಹೇಳುತ್ತಾರೆ. ಅವರ ಕೆಲವು ಸಲಹೆಗಳು ಹೀಗಿವೆ.

೧. ನಿರಾಸೆ ಬಹಳ ಸಮಯ ವಿರುವುದಿಲ್ಲವೆಂದೂ ಅದು ಕೇವಲ ತಾತ್ಕಾಲಿಕವೆಂದು ಮಕ್ಕಳಿಗೆ ತಿಳಿಯ ಹೇಳಿ:

ಈ ಸಲಹೆ ಓದುವಾಗ ತುಂಬ ಸರಳವಾಗಿ ಕಂಡರೂ ಆಚರಣೆಯಲ್ಲಿ ಅಷ್ಟು ಸರಳವಲ್ಲ. ಅಮೇರಿಕದ ಮಿನಿಯಾ ಪೊಲಿಸ್ ನಗರದ ಮನೋವಿಜ್ಞಾನ ಸಂಸ್ಥೆಯೊಂದರಲ್ಲಿ ಸಂಶೋಧಕರಾಗಿರುವ ಮನೋವಿಜ್ಞಾನಿ ನಾನ್ಸಿ ಲೆಫರ್ಟ್‌ರವರು ಹೀಗೆ ಅಭಿಪ್ರಾಯ ಪಡುತ್ತಾರೆ. ಮಕ್ಕಳಲ್ಲಿಯ ಅನುಭವದ ಕೊರತೆಯಿಂದಾಗಿ ಅವರಿಗೆ ನಿರಾಸೆ ಯುಂಟಾದಾಗ, ಯಾವುದಾದರೂ ಮಹತ್ವದ ಪಂದ್ಯದಲ್ಲಿ ಸೋಲುಂಟಾದಾಗ ಅಥವಾ ತನ್ನ ಆಪ್ತ ಗೆಳೆಯನೊಬ್ಬ ಹೀಗಳೆದಾಗ 'ಇದೇ ಜಗತ್ತಿನ ಕೊನೆಯಲ್ಲ' ಎಂದು ಭಾವಿಸುವುದು ಅಷ್ಟೊಂದು ಸುಲಭವಲ್ಲ. ಈ ಸೋಲಿನಿಂದ ನಾನು ಮೇಲೇರಲಾರೆ ಎಂಬ ನಿಷೇಧಾತ್ಮಕ ಮನೋಭಾವ ಅವರ ನ್ನಾವರಿಸಿ ಬಿಡುತ್ತದೆ. ಹೀಗಾದಾಗ ಒಂದೇ ಒಂದು ಸೋಲು ಅವರ ಭವಿಷ್ಯವನ್ನೇ ಹಾಳುಮಾಡಿಬಿಡುತ್ತದೆ. ಇಂಥ ಮನೋಸ್ಥಿತಿ ಅವರ ಪ್ರೇರಣಾ ಶಕ್ತಿಯನ್ನು ಕುಂಠಿತ ಗೊಳಿಸುತ್ತದೆ.

ಯಾವುದೇ ಮಗು ನಾನು ಎಷ್ಟು ಪ್ರಯತ್ನಿಸಿದರೂ ಅಷ್ಟೇ. ಇನ್ನು ನಾನು ಮೇಲೇರುವುದು ಸಾಧ್ಯವಿಲ್ಲ ಎಂದು ಭಾವಿಸುತ್ತದೋ ಆಗ ಆ ಮಗುವಿನ ಮರಳಿ-ಯತ್ನ-ಮಾಡುವ-ಮತ್ತೆ-ಮತ್ತೆ-ಸಾಧನೆಗೆ- ಪ್ರಯತ್ನಿಸುವ ಸಾಮರ್ಥ್ಯ ಕುಗ್ಗುತ್ತದೆ. ಆದುದರಿಂದ ಇಂಥ ಸಂದರ್ಭ ಗಳಲ್ಲಿ ನೀವು ನಿಮ್ಮ ಮಗುವಿಗೆ ಸಹಾಯ ಮಾಡಬೇಕೆಂದು ಬಯಸುವಿರಾದರೆ ಈ ಸೋಲು ಅಥವಾ ಹಿನ್ನಡೆ ಕೇವಲ ತಾತ್ಕಾಲಿಕ ವಾದುದೆಂದು ಅವರಿಗೆ ಮನದಟ್ಟು ಮಾಡಬೇಕು. 'ಇವತ್ತು ನೀನು ಸೋತಿರ ಬಹುದು; ಆದರೆ ನಾಳೆ ನೀನು ಮತ್ತೆ ಪ್ರಯತ್ನಿಸಿ ಗೆಲ್ಲಬಹುದು' ಎಂದು ಪ್ರೇರಣೆ ನೀಡಬಹುದು. ಕೆಲವೊಮ್ಮೆ ಅಧ್ಯಾಪಕರು ಸಿಟ್ಟಿನಿಂದ ಬಯ್ದಾಗ ಅಳುತ್ತ ಮನೆಗೆ ಬಂದ ಮಗುವನ್ನು "ಅಧ್ಯಾಪಕರಲ್ಲಿ ನೀನು ಕ್ಷಮೆ ಕೇಳಿದರೆ ಅವರ ಸಿಟ್ಟೆಲ್ಲ ಕರಗಿ ಅವರು ನಿನಗೆ ಉತ್ತಮ ಮಾರ್ಗದರ್ಶನ ನೀಡಬಲ್ಲರು" ಎಂದು ಸಂತೈಸಬಹುದು. ತರಗತಿಯಲ್ಲಿ ಬೇರೆ ವಿದ್ಯಾರ್ಥಿಗಳೊಡನೆ ಹೋಲಿಸಿ ಮಗುವನ್ನು ತೆಗಳಿದಾಗ "ಅದು ನಿನ್ನ ಅಧ್ಯಾಪಕರ ಅಭಿಪ್ರಾಯವಿರಬಹುದು. ಆದರೆ ನನ್ನ ದೃಷ್ಟಿಯಲ್ಲಿ ನೀನು ಅದಕ್ಕೆಲ್ಲ

ಕಿವಿಗೊಡದೆ ಇನ್ನೂ ಶ್ರದ್ಧೆಯಿಂದ ಅಭ್ಯಾಸ ಮಾಡಿದರೆ ಆ ವಿದ್ಯಾರ್ಥಿಗಳನ್ನೆಲ್ಲ ಮೀರಿಸ ಬಲ್ಲೆ'' ಎಂದು ಹುರಿದುಂಬಿಸಬಹುದು.

ಈಗ ಬೆಥ್ ಎಂಬ ಮಹಿಳೆಯ ಒಂದು ಅನುಭವವನ್ನು ಗಮನಿಸೋಣ. ಬೆಥ್ ಎರಡು ಹೆಣ್ಣು ಮಕ್ಕಳ ತಾಯಿ. ಆಕೆಯ ಎರಡನೆಯ ಮಗಳು ಕೇಥಿಗೆ ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ ಬೆಳೆಯಿತು. ಆಗ ಕೇಥಿಗೆ ಕೇವಲ ೮ ವರ್ಷ. ಕೇಥಿಗೆ ಶಾಲೆಯಲ್ಲಿ ಓರ್ವ ಒಳ್ಳೆಯ ಚಿತ್ರಕಲೆಯ ಅಧ್ಯಾಪಕರು ಸಿಕ್ಕಿ ಅವಳು ಬಲು ಶ್ರದ್ಧೆಯಿಂದ ಚಿತ್ರಕಲೆಯ ಅಭ್ಯಾಸದಲ್ಲಿ ತೊಡಗಿದಳು. ಆದರೆ ಆ ಅಧ್ಯಾಪಕರು ಕ್ರಮೇಣ ಒಬ್ಬ ವಿದ್ಯಾರ್ಥಿಯಲ್ಲಿ ಮಾತ್ರ ವಿಶೇಷ ಆಸಕ್ತಿ ತೋರಿಸ ತೊಡಗಿ ಅವನನ್ನು ಸದಾ ಹೊಗಳುತ್ತ ಇತರರನ್ನು ಉಪೇಕ್ಷಿಸ ತೊಡಗಿದರು. ತಾನು ಎಷ್ಟು ಶ್ರಮವಹಿಸಿ ಶ್ರದ್ಧೆಯಿಂದ ಅಭ್ಯಾಸ ಮಾಡಿದರೂ ಅಧ್ಯಾಪಕರು ತನ್ನ ಕೆಲಸವನ್ನು ಗಮನಿಸದಿದ್ದಾಗ ಕೇಥಿಗೆ ನಿರಾಸೆಯಾಗ ತೊಡಗಿತು. ಕೊನೆಗೆ ಚಿತ್ರಕಲೆಯನ್ನು ಬಿಟ್ಟು ಬೇರಾವುದರಲ್ಲಾದರೂ ಆಸಕ್ತಿ ಬೆಳೆಸಬೇಕೆಂದು ತಾಯಿಯೊಡನೆ ತನ್ನ ಅಳಲನ್ನು ತೋಡಿಕೊಂಡಳು. ಆಗ ಕೇಥಿಯ ತಾಯಿ ಬೆಥ್ ಅವಳನ್ನು ಸಮಾಧಾನಪಡಿಸುತ್ತ ''ಕೇವಲ ಒಬ್ಬರು ನಿನ್ನ ಸಾಧನೆಯನ್ನು ಗುರುತಿಸಲಿಲ್ಲವೆಂದ ಮಾತ್ರಕ್ಕೆ ನಿನಗೆ ಅತ್ಯಂತ ಆಸಕ್ತಿಯುಳ್ಳ ಈ ಚಿತ್ರಕಲೆಯಲ್ಲಿ ನಿನ್ನ ಆಸಕ್ತಿಯನ್ನು ಕಡಿಮೆ ಮಾಡಬೇಡ''. ಚಿತ್ರಕಲೆಯಲ್ಲಿ ತನ್ನ ಮಗಳಿಗಿರುವ ಆಸಕ್ತಿಯನ್ನು ಮೆಚ್ಚಿಕೊಂಡಿದ್ದ ಬೆಥ್ ಅಂದಿನಿಂದ ಪ್ರತಿದಿನವೂ ತನ್ನ ಮಗಳು ಬಿಡಿಸಿದ ಚಿತ್ರಗಳನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತ ಕೇಥಿ ತನ್ನ ಸಾಧನೆಯಲ್ಲಿ ಮುಂದುವರೆಯಲು ಪ್ರೇರಣೆ ನೀಡಿದಳು. ಮುಂದಿನ ನಾಲ್ಕು ವರ್ಷಗಳಲ್ಲಿ ಚಿತ್ರಕಲೆಯು ಕೇಥಿಯ ಒಂದು ಪ್ರಮುಖ ವಿಷಯವಾಯಿತು.

೨. ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳಲು ಪ್ರೋತ್ಸಾಹಿಸಿರಿ :

ಕೆಳಗೆ ಬಿದ್ದರೂ ಮತ್ತೆ ಪುಟಿದೇಳುವ ಮನೋಭಾವ ಬೆಳೆಯಬೇಕಾದರೆ ಸಮಸ್ಯೆಗಳು ಬಂದಂತೆ ಅವನ್ನು ಪರಿಹರಿಸಿ ಕೊಳ್ಳುವ ಕೌಶಲ್ಯ ಹೆಚ್ಚಬೇಕು. ಅಸಹಾಯಕತೆಯ ಸುಳಿಯಲ್ಲಿ ಮನಸ್ಸು ಸಿಲುಕಿಕೊಂಡಾಗ ಕೆಲಸದಲ್ಲಿ ಮಗ್ನನಾಗುವುದಕ್ಕಿಂತ ಉತ್ತಮ ಔಷಧ ಅಥವಾ ಚಿಕಿತ್ಸೆ ಬೇರೊಂದಿಲ್ಲ. ಹೀಗೆ ಕೆಲಸದಲ್ಲಿ ಅಥವಾ ಪ್ರಯತ್ನದಲ್ಲಿ ಮಗ್ನನಾದರೆ ತನ್ನಲ್ಲಿರುವ ಕೌಶಲ್ಯಕ್ಕೆ ಸಾಣೆ ಹಿಡಿದಂತಾಗುತ್ತದೆ. ನಿರಂತರ ಅಭ್ಯಾಸ, ಪ್ರಯತ್ನ ಹಾಗೂ ಸಾಧನೆಗಳಿಂದ ಮಾತ್ರ 'ನಾನಿದನ್ನು ಮಾಡಬಲ್ಲೆ' ಎಂಬ ಮನೋಭಾವ ಮಕ್ಕಳಲ್ಲಿ ಬೆಳೆಯುತ್ತದೆ. ಹೆಚ್ಚಿನ ತಂದೆ ತಾಯಂದಿರು ತಮ್ಮ ಮಕ್ಕಳು ವಿಫಲರಾದಾಗ ಅವರಿಗೆ ರಕ್ಷಣೆ ನೀಡಿ ಅವರೆ ಮುಂದಿನ ಸಾಧನೆಯ ಮಾರ್ಗವನ್ನು ಹುಡುಕುವಲ್ಲಿ ತಾವೇ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಮಕ್ಕಳಿಗೆ ತಮ್ಮಲ್ಲೇ ಆ ಶಕ್ತಿಯಿದೆ ಎಂದು ಕಂಡುಕೊಳ್ಳುವ ಅವಕಾಶವನ್ನೇ ನೀಡುವುದಿಲ್ಲ.

೩. ಮಕ್ಕಳ ಸಮಸ್ಯೆಗಳನ್ನು ಬಗೆಹರಿಸಲು ಯಾವಾಗ ಪಾಲಕರು ಮಧ್ಯಪ್ರವೇಶಿಸ ಬೇಕೆಂದು ಅರ್ಥಮಾಡಿಕೊಳ್ಳಿರಿ:

ಎಲ್ಲ ಸಮಸ್ಯೆಗಳಿಗೂ ಸುಲಭವಾದ ಪರಿಹಾರ ಮಾರ್ಗಗಳಿವೆ ಎಂದೇನೂ ಇದರ ಅರ್ಥವಲ್ಲ. ಕೆಲವು ಸಮಸ್ಯೆಗಳು ಮಕ್ಕಳ ಸಾಮರ್ಥ್ಯಕ್ಕೆ ಎಟುಕಲಾರದಂಥವೂ ಇರಬಹುದು. ಇಂಥ ಸಮಯದಲ್ಲಿ ಪಾಲಕರಾಗಲಿ ಶಿಕ್ಷಕರಾಗಲಿ ಮಧ್ಯಪ್ರವೇಶಿಸಬೇಕಾಗಬಹುದು. ಇಲ್ಲಿ ಬೆಥ್ ಎಂಬ ಮೇಲೆ ಉಲ್ಲೇಖಿಸಿದ ಮಹಿಳೆಯು ಇನ್ನೊಂದು ಅನುಭವವನ್ನು ಗಮನಿಸೋಣ.

ಈಕೆಯ ಹಿರಿಯ ಮಗಳು ಸಾರಾ ಹನ್ನೊಂದು ವರ್ಷದವಳಾಗಿದ್ದಾಗ ಸಾರಾಳ ಗೆಳತಿಯರೆಲ್ಲ ಹುಡುಗರಲ್ಲಿ ಆಸಕ್ತಿವಹಿಸಲಾರಂಭಿಸಿದರು. ಸಾರಾ ಬುದ್ಧಿವಂತೆ. ಅವಳಿಗೆ ಓದಿನಲ್ಲಿ ತುಂಬ ಆಸಕ್ತಿ. ಕ್ಲಾಸಿನಲ್ಲೂ ಅವಳು ಮುಂದೆ. ಆದರೆ ಅವಳ ಗೆಳತಿಯರೆಲ್ಲ ಸಾರಾಳನ್ನು 'ಪುಸ್ತಕದ ಹುಳು' ಎಂದು ಗೇಲಿ ಮಾಡಲು ಪ್ರಾರಂಭಿಸಿದಾಗ ಉಳಿದೆಲ್ಲರಿಗಿಂತ ತಾನು ಭಿನ್ನವಾಗಿರುವುದು ಸರಿಯೇ ಎಂಬ ಸಮಸ್ಯೆ ಅವಳನ್ನು ಕಾಡತೊಡಗಿತು. ಆದರೆ ಅವಳು ತನ್ನ ದುಃಖವನ್ನು ತನ್ನಲ್ಲೇ ಬಚ್ಚಿಡದೆ ಪ್ರತಿದಿನವೂ ತನ್ನ ತಾಯಿಯೊಡನೆ ಅಂದು ತನ್ನ ಗೆಳತಿಯರು ಹೇಗೆ ತನ್ನನ್ನು ಗೇಲಿ ಮಾಡಿದರೆಂದು ಹೇಳುತ್ತಿದ್ದಳು.

ಮೊದಮೊದಲು ಬೆಥ್ ತನ್ನ ಮಗಳು ಹೇಳುತ್ತಿದ್ದ ಶಾಲೆಯ ಗೆಳತಿಯರ ಕತೆಗಳನ್ನು ಸುಮ್ಮನೆ ಕೇಳುತ್ತಿದ್ದಳು. ಆದರೆ ಕ್ರಮೇಣ ಸಾರಾಳನ್ನು ಅವಳ ಗೆಳತಿಯರ ಗುಂಪಿನಿಂದ ಬೇರ್ಪಡಿಸುವುದು ಉಚಿತವೆಂದು ಬೆಥ್‌ಗೆ ಖಚಿತವಾಗ ತೊಡಗಿತು. ಒಂದು ದಿನ ಬೆಥ್ ಸಾರಾಳನ್ನು ಬಳಿಗೆ ಕರೆದು ಹೇಳಿದಳು "ಮಗೂ, ನಿನ್ನ ತರಗತಿಯಲ್ಲಿ ನಿನ್ನಂತೆ ಪಾಠ ಪ್ರವಚನ ಗಳಲ್ಲಿ ಆಸಕ್ತಿಯುಳ್ಳ ಬೇರೆ ಹುಡುಗಿ ಯರು ಇಲ್ಲವೆ ? ಇದ್ದರೆ ನೀನೇಕೆ ಅವರೊಡನೆ ಸಖ್ಯವನ್ನು ಬೆಳೆಸಿಕೊಳ್ಳಬಾರದು ?" ಅನಂತರ ಕೆಲವೇ ದಿನಗಳಲ್ಲಿ ಸಾರಾಗೆ ಹೊಸಗೆಳತಿಯರು ದೊರಕಿದರು. ಸಾರಾಳ ಸಮಸ್ಯೆ ಬಗೆಹರಿಯಿತು.

ಮಕ್ಕಳು ತಮಗೆ ತಿಳಿಯದ ವಿಷಯಗಳ ಬಗ್ಗೆ ಹಲವಾರು ಪ್ರಶ್ನೆ ಗಳನ್ನು ಕೇಳುತ್ತಿರುತ್ತಾರೆ. ಅಂತ ಸಂದರ್ಭಗಳಲ್ಲಿ ಪಾಲಕರು ತಾಳ್ಮೆಯಿಂದ ಆ ಪ್ರಶ್ನೆಗಳಿಗೆ ಉತ್ತರ ನೀಡಲು ಪ್ರಯತ್ನಿಸಬೇಕು. ತಮಗೆ ತಿಳಿಯದಿದ್ದರೆ ಉತ್ತರಗಳನ್ನು ಹುಡುಕಲು ಮಕ್ಕಳಿಗೆ ಸಹಾಯ ಮಾಡಬೇಕು. ಹೀಗಲ್ಲದೆ ಮಕ್ಕಳನ್ನು ಗದರಿಸಿ ಪ್ರಶ್ನೆ ಕೇಳುವ ಅವರ ಕುತೂಹಲವನ್ನು ಚಿವುಟಿ ಹಾಕಿದರೆ ಅವರ ಬೌದ್ಧಿಕ ಬೆಳವಣಿಗೆಗೆ ತಡೆಯೊಡ್ಡಿದಂತಾಗುತ್ತದೆ. ಮುಂದೆ ಯಾವುದಾದರೂ ಸಮಸ್ಯೆಗಳು ಎದುರಾದರೆ ಅವನ್ನು ಯಾರಲ್ಲಿಯೂ ಹೇಳದೆ ಅಂಥ ಮಕ್ಕಳು ಕೊರಗಬಹುದು.

೪. ನಿಮ್ಮ ಮಕ್ಕಳಿಗೆ ಶಿಸ್ತಿನ ಲಕ್ಷ್ಮಣ ರೇಖೆಗಳನ್ನು ಗುರುತಿಸಿರಿ.

ನೀವು ನಿಮ್ಮ ಮಕ್ಕಳನ್ನು ಯಾವ ರೀತಿಯ ಶಿಸ್ತಿಗೆ ಒಳಪಡಿಸುತ್ತೀರಿ ಎಂಬುದೂ

ಮಕ್ಕಳ ಮನಸ್ಸಿನ ಮೇಲೆ ಪರಿಣಾಮವನ್ನು ಬೀರಬಲ್ಲುದು. ತಂದೆ-ತಾಯಂದಿರು ತಮ್ಮ ಮಕ್ಕಳನ್ನು ಉತ್ತಮ ಶಿಸ್ತಿನಿಂದ ಬೆಳೆಸುವುದು ಮಾತ್ರವಲ್ಲ; ಆಶಿಸ್ತಿನ ಮಹತ್ವವನ್ನೂ ಮಕ್ಕಳಿಗೆ ತಿಳಿಯ ಹೇಳಬೇಕು. ಇಂಥ ವಾತಾವರಣದಲ್ಲಿ ಬೆಳೆದ ಮಕ್ಕಳು ಅಶಿಸ್ತಿನ ಅಥವಾ ಭಯದ ವಾತಾವರಣದಲ್ಲಿ ಬೆಳೆಯುವ ಮಕ್ಕಳಿಗಿಂತ ಹೆಚ್ಚು ಪ್ರೇರಣಾ ಶಕ್ತಿ, ಉತ್ತಮ ಸಾಮಾಜಿಕ ನಡವಳಿಕೆ ಹಾಗೂ ಆತ್ಮ ವಿಶ್ವಾಸವುಳ್ಳವ ರಾಗುತ್ತಾರೆ.

ಮನಃಶಾಸ್ತ್ರದ ಪ್ರಾಧ್ಯಾಪಕ ಲಾರೆನ್ಸ್ ಸ್ಟೀನ್‌ಬರ್ಗ್ ಅವರು ಹೀಗೆ ಹೇಳುತ್ತಾರೆ. ಮಕ್ಕಳಿಗೆ ಹಿರಿಯರ ಮಾರ್ಗದರ್ಶನದ ಅಗತ್ಯವಿದೆ. ಹಾಗೆಂದು ಮಕ್ಕಳಿಗೆ ಸ್ವತಂತ್ರವಾಗಿ ಯೋಚಿಸಲು ಅವಕಾಶವನ್ನೇ ನೀಡದೆ ಎಲ್ಲವನ್ನೂ ತಾವೇ ಹೇಳಿಕೊಡಲು ತೊಡಗಿದರೆ ಅವರ ಬುದ್ಧಿಗೆ ವಿವೇಚನಾಶಕ್ತಿಗೆ ಕಡಿವಾಣ ಹಾಕಿದಂತಾಗುತ್ತವೆ. ಒತ್ತಡದ ಸಂದರ್ಭಗಳಲ್ಲಿ ಅವರಿಗೆ ದಿಕ್ಕು ತೋಚದಂತಾಗುತ್ತದೆ. ಚಿಕ್ಕಪುಟ್ಟ ಮನೆಗೆಲಸಗಳಲ್ಲಿ ಮಕ್ಕಳನ್ನು ತೊಡಗಿಸಿ ಕೊಂಡು ಆ ಕೆಲಸಗಳನ್ನು ಅವರು ಸ್ವತಂತ್ರವಾಗಿ ಹಾಗೂ ಅಚ್ಚುಕಟ್ಟಾಗಿ ನಿರ್ವಹಿಸು ವಂತೆ ಮಾಡಿದರೆ ದೊಡ್ಡವರು ಮಾಡುವ ಕೆಲಸಗಳನ್ನೆಲ್ಲ ತಾನೂ ಒಂದೊಂದಾಗಿ ಕಲಿತು ಮಾಡಬಲ್ಲೆ ಎಂಬ ಧೈರ್ಯ ಬರುತ್ತದೆ.

ಹೀಗೆ ಚಿಕ್ಕಂದಿನಲ್ಲೇ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆದರೆ ಮುಂದೆ ಶಾಲೆಯಲ್ಲಿ ಗಣಿತದಲ್ಲೋ ವಿಜ್ಞಾನದಲ್ಲೋ ಕಡಿಮೆ ಅಂಕಗಳು ಬಂದಾಗ ಇದರಲ್ಲಿ ಈ ಬಾರಿ ಕಡಿಮೆ ಅಂಕ ಬಂದರೇನಂತೆ? ನಾನು ಚಿತ್ರಕಲೆಯಲ್ಲೋ ಸಂಗೀತದಲ್ಲೋ ಅಥವಾ ಕ್ರೀಡೆಗಳಲ್ಲೋ ಇತರರಿಗಿಂತ ಮುಂದೆ ಇದ್ದೇನೆಂದು ಸಮಾಧಾನ ಪಟ್ಟುಕೊಂಡು ಮುಂದಿನಬಾರಿ ಪ್ರಯತ್ನಿಸಿದರಾಯಿತು ಎಂದು ನಿರ್ಧರಿಸುತ್ತಾರೆ ಅಂಥವರೆಂದೂ ಖಿನ್ನರಾಗುವುದಿಲ್ಲ.

ಶಾಲೆಯ ಎಲ್ಲ ಚಟುವಟಿಕೆಗಳಲ್ಲಿಯೂ ಪಾಲ್ಗೊಳ್ಳಲು ಮಕ್ಕಳಿಗೆ ಉತ್ತೇಜನ ನೀಡಿದರೆ ಅವರು ಬೇಗನೆ ತಮ್ಮ ಅತ್ಯಂತ ಆಸಕ್ತಿಯ ವಿಷಯವನ್ನು ಗುರುತಿಸಿಕೊಂಡು ಮುಂದುವರಿಯಬಹುದು. ಈ ರೀತಿ ಮಕ್ಕಳಿಗೆ ಪ್ರೋತ್ಸಾಹ ನೀಡುವುದರ ಹಿಂದೆ ಇನ್ನೊಂದು ಕಾರಣವೂ ಇದೆ. ಅದೇಂದರೆ ಗೆಲುವಿಗೂ ನಿರಂತರ ಪರಿಶ್ರಮಕ್ಕೂ ಇರುವ ಸಂಬಂಧವನ್ನು ಅವರು ತಿಳಿದುಕೊಳ್ಳುವಂತೆ ಮಾಡುವುದು. ಗೆಲುವಿಗೆ ಅಡ್ಡ ದಾರಿಗಳಿಲ್ಲ; ನಿರಂತರ ಪರಿಶ್ರಮವೊಂದೇ ಸರಿಯಾದ ದಾರಿ ಎಂದು ಮಕ್ಕಳಿಗೆ ಮನದಟ್ಟಾದರೆ ಅವರು ವಿದ್ಯಾಭ್ಯಾಸದಲ್ಲೂ ಮುಂದಿನ ಜೀವನ ದಲ್ಲೂ ಯಶಸ್ಸನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

ಏರಿರದ ಬಂಡೆಗಳು ಧರೆಯೊಳಗೆ ನೂರಾರು
ಏರಲಾಗದ ಬಂಡೆಗಳು ಸೃಷ್ಟಿಯಲಿಲ್ಲ

ದಾರಿಕಡಿಯುತ ಹೆಜ್ಜೆ ಇಡುವಾತ ದಿಟ್ಟಹಾಗ್
ಧಾರಿಣಿಯೊಳವನೆ ಜನ ನಾಯಕನು ಅತ್ರಿಸೂನು

ಎಂದೂ ಎದೆಗುಂದದಿರು

ಜಿ. ವೈದೇಹಿ
೩.೫೮ ಪುನರ್ವಸು,
ನವಿಲು ಮುಖ್ಯ ರಸ್ತೆ
ಕುವೆಂಪುನಗರ,
ಮೈಸೂರು-೫೭೦೦೨೩.

(ಅತ್ಯಂತ ನಿರಾಶೆಯಿಂದ ಒಮ್ಮೊಮ್ಮೆ ಪರ್ವತವನ್ನೇ ಅಲುಗಾಡಿಸುವ ಶಕ್ತಿ ಉದ್ಭವವಾಗುತ್ತದೆ)

ಫಿಲಿಪ್ಪೈನ್ ಆಸ್ಪತ್ರೆಯ ಕೊಠಡಿಯೊಂದರಲ್ಲಿ ಒಂದು ಫ್ಲೋರಸೆಂಟ್ ದೀಪವು ಸೀಸರ್ ಮಾಟಾನ ಮುಖದ ಮೇಲೆ ಭಯಾನಕ ನೆರಳು ಬೆಳಕನ್ನು ಹೊಮ್ಮಿಸುತ್ತಾ ಮಿನುಗುತ್ತಿತ್ತು.

''ಮಮ್ಮ ನಾನು ಸಾಯುವೆ'' ಹುಡುಗನು ಪಿಸುಗುಟ್ಟಿದ. ''ಇಲ್ಲ ಮಗು ನೀನು ಖಂಡಿತ ಗುಣಮುಖನಾಗುವೆ'' ಎಂದು ಅವನ ಮುಂದಲೆಯನ್ನು ನೇವರಿಸುತ್ತಾ ತಾಯಿ ನುಡಿದಳು. ತಮ್ಮ ಮಗನ ದೇಹವನ್ನು ನಾಶಮಾಡುತ್ತಿರುವ ವಾಸಿಮಾಡಲಾಗದ ರಕ್ತ ಕಾಯಿಲೆಗಾಗಿ ಎರ್ಮ ಮಾಟ ಮತ್ತು ಅವಳ ಪತಿ ತಮ್ಮಲ್ಲಿದ್ದ ಹಣವನ್ನಲ್ಲದೆ, ಸಾಲಮಾಡಿಯೂ ಖರ್ಚು ಮಾಡಿದ್ದರು.

ಸುಮಾರು ೯ ವರ್ಷದ ಸೀಸರನ ತೂಕ ಕೇವಲ ೧೪ ಕಿಲೋಗಳಾದರೆ ಎತ್ತರ ಮೂರು ಅಡಿ ಎರಡು ಇಂಚು. ಅವನು ಇನ್ನು ಕೆಲವೇ ವರ್ಷಗಳು ಮಾತ್ರ ಜೀವಿಸುವನೆಂದು ವೈದ್ಯರು ಹೇಳಿದ್ದರು. ಆದರೆ ಅಮೆರಿಕದಲ್ಲಿ ಮಾತ್ರ ಉತ್ತಮ ಚಿಕಿತ್ಸೆ ಸಿಗುವ ಸಾಧ್ಯತೆ ಇದೆ ಎಂದು ಹೇಳಿದ್ದರು. ಆದರೆ ಅಮೆರಿಕೆಗೆ ಹೋಗುವುದಾದರೂ ಹೇಗೆ?

ಮನಿಲದಲ್ಲಿ ೧೯೮೩ ರ ಜೂನ್ ತಿಂಗಳ ಒಂದು ರಾತ್ರಿ ತನ್ನ ಮಗನು ನಿದ್ದೆ ಹೋಗುತ್ತಿದ್ದಂತೆ ಒಂದು ಯೋಚನೆ ಅವಳ ಮನಸ್ಸಿಗೆ ಬಂತು. ರೊನಾಲ್ಡ್ ರೇಗನ್‌ಗೆ ಏಕೆ ಒಂದು ಪತ್ರ ಬರೆಯಬಾರದು? ಆತ ಒಬ್ಬ ಮಾನವೀಯ ಗುಣವುಳ್ಳವನೆಂದು ಕೇಳಿದ್ದಳು. ಖಂಡಿತವಾಗಿಯೂ ಅಮೆರಿಕದ ಅಧ್ಯಕ್ಷ ಸಹಾಯ ಮಾಡುವನೆಂದು ಎರ್ಮ ಯೋಚಿಸಿದಳು.

ಅವನ ಅಣ್ಣ ಡಾನ್ ನಂತಿರದೆ ಸೀಸರ್ ಮಾಟಾಗೆ ವಯಸ್ಸಿಗೆ ತಕ್ಕ ನಿಲುವಿರಲಿಲ್ಲ. ಉಬ್ಬಿದ ಹೊಟ್ಟೆ ಮತ್ತು ಸಣ್ಣ ಕೈಕಾಲುಗಳು. ಆಗಾಗ ಮೂತ್ರ ವಿಸರ್ಜನೆಯ

ನವೆಂಬರ್ ೧೯೮೮ರ ರೀಡರ್ಸ್ ಡೈಜೆಸ್ಟ್ ನಲ್ಲಿ ಪ್ರಕಟವಾದ ಜೋಸೆಫ್ ಎ ರೀವ್ಸ್ ರವರ 'ಎ ಲೈಫ್ ಫಾರ ಸೀಸರ್' ಲೇಖನದ ಕನ್ನಡ ಅನುವಾದ.

ತೊಂದರೆಯೂ ಇತ್ತು. ಆದರೆ ಅವನು ಅದನ್ನು ತೋರ್ಪಡಿಸಿಕೊಳ್ಳುತ್ತಿರಲಿಲ್ಲ. ತಾಯಿಯಂತೆ ಸೀಸರ್ ಮೌನಿ ಮತ್ತು ದೃಢ ಸಂಕಲ್ಪವುಳ್ಳವನು.

೧೯೭೮ರಲ್ಲಿ ಅವನ ನಾಲ್ಕನೆಯ ಹುಟ್ಟು ಹಬ್ಬದ ಅನಂತರ ಹುಡುಗನು ರೋಗ ಪೀಡಿತನಾಗಿ ಕ್ಷೀಣಿಸುತ್ತಾ ಬಂದನು. ತತ್‌ಕ್ಷಣವೇ ಅವನನ್ನು ಮನಿಲದ ಆಸ್ಪತ್ರೆಗೆ ಕೊಂಡೊಯ್ಯಬೇಕೆಂದು ಸ್ಥಳೀಯ ವೈದ್ಯರೊಬ್ಬರು ಎಚ್ಚರಿಕೆ ನೀಡಿದರು. ಈ ಸಮಾಚಾರವನ್ನು ಹೇಳುತ್ತಿದ್ದಂತೆಯೇ ಎರ್ಮ ರೋದಿಸ ತೊಡಗಿದಳು. ಅವರ ಬಳಿ ಕೇವಲ ಎಂಟು ಪಿಸೊಗಳು ಅಂದರೆ ಒಂದು ಡಾಲರ್ ಮಾತ್ರ ಹಣವಿದ್ದು ಅವರ ಮನೆಯು ಮನಿಲದಿಂದ ೩೪೦ ಕಿ.ಮೀ. ನೈರುತ್ಯದಲ್ಲಿತ್ತು.

ಮೇಯೊನ್ ಜ್ವಾಲಾಮುಖಿಯ ನೆರಳಿನಲ್ಲಿದ್ದ ಊರಿನಲ್ಲಿ ಸೀಸರ್ ಸೀನಿಯರ್ ಒಂದು ಜೀಪನ್ನು ನಡೆಸುತ್ತಿದ್ದನು. ಎರಡನೇ ಮಹಾಯುದ್ಧದಿಂದ ಆರಂಭವಾದ ಜೀಪ್‌ಗಳು ಇಂದಿಗೂ ಫಿಲಿಪಿಯನ್ನರನ್ನು ಎಲ್ಲೆಡೆಯುಲ್ಲೂ ಕೊಂಡೊಯ್ಯಲು ಉಪಯೋಗವಾಗುತ್ತಿವೆ.

ಮಾಟಾ ಕುಟುಂಬಕ್ಕೆ ಸೇರಿದವರೆಲ್ಲರೂ ದಟ್ಟದರಿದ್ರರೇ ಆಗಿದ್ದರು. ಆದರೂ ಆಕೆಯ ಅಜ್ಜ ಒಂದು ಹಂದಿಮರಿಯನ್ನು ಮಾರಾಟ ಮಾಡಿಕೊಳ್ಳಲು ಕೊಟ್ಟಳು. ಅವಳ ಚಿಕ್ಕಮ್ಮನು ಕೆಲವು ನಾಣ್ಯಗಳನ್ನು ಕೊಟ್ಟಳು. ಸೀಸರ್ ಮತ್ತು ಅವನ ತಾಯಿತಂದೆಯರು ಚಿಕ್ಕಪ್ಪನ ಜೊತೆ ಬಾಡಿಗೆ ಟ್ರಕ್‌ನಲ್ಲಿ ಮನಿಲಗೆ ಪಯಣಿಸಿದರು.

ಫಿಲಿಪ್ಪೈನ್ ಜನರಲ್ ಆಸ್ಪತ್ರೆಯ ವೈದ್ಯರು ಸೀಸರ್‌ನ ಕಾಯಿಲೆಯನ್ನು ತ್ಯಾಲಸ್ಸೇಮಿಯ ಎಂದು ಗುರುತಿಸಿದರು. ಹಿಮೊಗ್ಲೋಬಿನ್ ಉತ್ಪಾದನೆಗೆ ತಡೆಯೊಡ್ಡಿ ತೀವ್ರ ರಕ್ತಹೀನತೆಯನ್ನುಂಟುಮಾಡುವ ಆನುವಂಶಿಕ ವೈಪರೀತ್ಯವೇ ತ್ಯಾಲಸ್ಸೇಮಿಯ. ಉದ್ಬುದ್ಧವಾದ ಯಾವ ಪದಗಳನ್ನೂ ಅರ್ಥಮಾಡಿಕೊಳ್ಳದ ಎರ್ಮಳಿಗೆ ವೈದ್ಯರು ಮುಂದೆ ಹೇಳಿದ ''ಗುಣಪಡಿಸಲಾಗದ ಕಾಯಿಲೆ'' ಎಂಬುದು ಮಾತ್ರ ಅರ್ಥವಾಗಿತ್ತು.

''ನಿಮ್ಮ ಹುಡುಗನ ಹಿಮೊ-ಗ್ಲೋಬಿನ್ ಎಣಿಕೆ ಅಪಾಯಮಟ್ಟವನ್ನು ತಲಪಿದಾಗ ಬದಲೀ ರಕ್ತ ಕೊಡುವುದಷ್ಟೇ ಹೊರತು ಬೇರೆ ಏನನ್ನೂ ಮಾಡಲಾರೆವು'' ಎಂದು ವೈದ್ಯರು ತಿಳಿಸಿದರು. ಆದರೆ ಕ್ರಮೇಣ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಆಗಾಗ ಕೊಡುವ ಬದಲೀ ರಕ್ತದಿಂದಾಗಿ ಹಿಮೊಗ್ಲೋಬಿನ್ ಉತ್ಪಾದನೆಗೆ ಬೇಕಾಗುವ ಕಬ್ಬಿಣವು ಅಧಿಕ ಪ್ರಮಾಣದಲ್ಲಿ ಸೀಸರನ ದೇಹದಲ್ಲಿ ಸಂಗ್ರಹವಾಗುತ್ತದೆ. ಇದರ ಪರಿಣಾಮವಾಗಿ ಹುಡುಗನ ಬೆಳವಣಿಗೆ ಸ್ಥಗಿತಗೊಳ್ಳುತ್ತದೆ. ಕ್ರಮೇಣವಾಗಿ ಹೃದಯ ಯಕೃತ್ ಮತ್ತು ನಿರ್ನಾಳ ಗ್ರಂಥಿಗಳ ವ್ಯವಸ್ಥೆ ಘಾಸಿಗೊಳ್ಳುತ್ತವೆ. ತೀವ್ರತಮ ತ್ಯಾಲ-ಸ್ಸೇಮಿಯ ಇರುವ ರೋಗಿಗಳು ಹದಿವಯಸ್ಸನ್ನು ದಾಟುವುದೇ ದುರ್ಲಭ.

ದೀರ್ಘ ಪ್ರಯಾಣದ ತಮ್ಮ ಊರನ್ನು ಸೇರಲು ಕಿಕ್ಕಿರಿದು ತುಂಬಿದ್ದ ಒಂದು ಬಸ್ಸನ್ನು ಹತ್ತುತ್ತಾ, ''ಇದರ ಬಗ್ಗೆ ಯೋಚಿಸಬೇಡ. ದೇವರು ನಮ್ಮನ್ನು ರಕ್ಷಿಸುತ್ತಾನೆ'' ಎಂದು ಮಾಟಾಳು ಸೀಸರನಿಗೆ

ಧೈರ್ಯ ತುಂಬಿದಳು. ಆದರೆ ಅವಳ ಮನಸ್ಸಿನಾಳದಲ್ಲಿ ಯಾವ ಭರವಸೆಯೂ ಇರಲಿಲ್ಲ. ಎಲ್ಲಕ್ಕೂ ಬಡತನವು ಒಂದು ಕಾರಣವೆಂದು ಮಾಟ ಖಂಡಿತ ನಂಬಿದವಳಲ್ಲ. ಜೀವನವನ್ನು ಉತ್ತಮಪಡಿಸಲು ಕಠೋರ ಹೋರಾಟ ನಡೆಸುವ ಛಲವನ್ನು ಚಿಕ್ಕಂದಿನಿಂದಲೇ ಬೆಳೆಸಿಕೊಂಡಿದ್ದಳು.

ಅವಳ ಆ ಗುಣದ ಹಿಂದೆಂದು ನಡೆಯದ ಪರೀಕ್ಷೆ ಈಗ ಆಗಬೇಕಾಗಿತ್ತು. ಮುಂದಿನ ಕೆಲವು ವರ್ಷಗಳು ಪ್ರತಿ ೬ ರಿಂದ ೧೨ ವಾರಗಳಿಗೊಮ್ಮೆ ಮಾಟ ಮತ್ತು ಸೀಸರ್ ಜೀವರಕ್ಷಕ ಬದಲೀ ರಕ್ತಕ್ಕಾಗಿ ಮನಿಲಗೆ ಹೋಗಿಬರಲು ೬೮೦ ಕಿ.ಮೀ. ಪಯಣಿಸುತ್ತಿದ್ದರು. ಸ್ವಾಭಿಮಾನವನ್ನು ಬದಿಗೊತ್ತಿ ಮಾಟಳು ರಾಷ್ಟ್ರೀಯ ರೈಲ್ವೆ ಮತ್ತು ಬಸ್ ಕಂಪೆನಿಗಳಿಗೆ 'ಪಾಸ್' ಗಾಗಿ ಬೇಡಿಕೊಂಡಳು. ಫರ್ಡಿನಾಂಡ್ ಮಾರ್ಕೋಸ್ ಮತ್ತು ಆತನ ಹೆಂಡತಿ ಇಮೆಲ್ಡರವರು ವಾಸವಾಗಿದ್ದ ಪ್ರೆಸಿಡೆಂಟರ ಅರಮನೆ ತಲುಪಲು ಮಾಲಕಾನಂಗ್ ಊರಿಗೆ ಮಾಟ ಗಂಟೆಗಟ್ಟಲೆ ನಡೆದಿದ್ದಳು . ಅಂಥ ವೈಭವೋಪೇತ ದಂಪತಿಗಳ ಮುಂದೆ ಕೊಳಕಾದ ಬಟ್ಟೆಗಳನ್ನು ಹಾಕಿಕೊಂಡ ಮಾಟಳಿಗೆ ನಾಚಿಕೆಯಾಯಿತು. ಆದರೆ ತನ್ನ ಮಗನಿಗೆ ಕಾಯಿಲೆಯಾಗಿದೆ ಎಂಬುದೊಂದೇ ಅವಳನ್ನು ಕಾಡುತ್ತಿದ್ದ ಸಮಸ್ಯೆ.

ಅರಮನೆಯ ಕಾರ್ಯದರ್ಶಿಗೆ ಅವಳು ಸಲ್ಲಿಸಿದ ಬೇಡಿಕೆಗಳಿಂದಾಗಿ ಸರ್ಕಾರಿ ಆಸ್ಪತ್ರೆಯಲ್ಲಿ ಸೀಸರ್‌ನಿಗೆ ಉಚಿತ ಪ್ರಯೋಗ ಪರೀಕ್ಷೆ ಮಾಡಿಸಿಕೊಳ್ಳಲು ಅನುಮತಿ ದೊರಕಿತು.

ಮನಿಲದ ಉದ್ದಗಲಕ್ಕೂ ಸುತ್ತಾಡಿ ಮಾಟ ಪ್ರತಿಮನೆಯ ಬಾಗಿಲನ್ನೂ ತಟ್ಟಿದಳು. ಇವಳ ಈ ಶೋಚನೀಯ ಸ್ಥಿತಿಯು 'ಮನಿಲ ಬುಲೆಟಿನ್' ಪತ್ರಿಕೆಯ ಸಂಪಾದಕನ ಹೃದಯವನ್ನು ಕಲಕಿತು. ೧೯೭೮ ರ ಜೂನ್ ೧೫ರಂದು ಸೀಸರ್‌ನ ವ್ಯಥೆಯ ಕಥೆ ಪತ್ರಿಕೆಯಲ್ಲಿ ಪ್ರಕಟವಾಯಿತು. ''ಸಾವು ಅವನ ಸಮೀಪಕ್ಕೆ ಬಂದಿರುವುದೂ ಸೀಸರನಿಗೆ ಗೊತ್ತಿಲ್ಲ. ಅವನು ಅದನ್ನು ಮುಂದೂಡಲೂ ಸಾಧ್ಯವಿಲ್ಲ'' ಎಂದು ತಿಳಿಸಿತು. ಸೀಸರನ ದಯನೀಯ ಭಾವಚಿತ್ರವನ್ನೂ, ''ನನ್ನ ಮಗನನ್ನು ಬದುಕುಳಿಸಲು ದಾನಿಗಳು ಸಹಾಯ ಮಾಡಬೇಕು'' ಎಂಬ ಮಾಟಾಳ ಮನವಿಯನ್ನೂ ಮುದ್ರಿಸಿತು.

ಬಿಲ್ಲಿನಂತಿದ್ದ ಕಾಲುಗಳ ಸೀಸರನನ್ನು ದಿಟ್ಟಿಸುತ್ತಾ 'ಇವನು ತನ್ನದೇ ಮಗನಾಗಿದ್ದರೆ?' ಎಂದು ಚೆಚೆಲಸಾರೊ ಯೋಚಿಸಿದಳು. ದೂರದರ್ಶನದ ಪ್ರಖ್ಯಾತ ಚೆಚೆಲಸಾರೊ ಸೀಸರ್‌ನನ್ನು ನೋಡಲು ಆಸ್ಪತ್ರೆಗೆ ಬರಲಾರಂಭಿಸಿದಳು. ಅವನಿಗ ಉಡುಗೊರೆಗಳನ್ನೂ ಅವನ ತಾಯಿಗೆ ಖರ್ಚಿಗಾಗಿ ಹಣವನ್ನೂ ಕೊಡುತ್ತಿದ್ದಳು.

ಫಿಲಿಪೈನಿನ ರೆವಿನ್ಯೂ ಕಮಿಷನರ್‌ಗೆ ಕಾರ್ಯದರ್ಶಿಯಾಗಿದ್ದ ಸ್ಯಾಲಿಆಲಿವೆರೋಸ್ ಕೂಡ ಸೀಸರ್‌ನ ಸ್ಥಿತಿಯನ್ನು ಕಂಡು ಮರುಗಿದನು. ಮಾಟಳನ್ನು ಪರಿಚಯ ಮಾಡಿಕೊಂಡು ಅವಳ ಮನೆಯ ಹತ್ತಿರವೇ ಇದ್ದ ತೆರಿಗೆ ಇಲಾಖೆಯಲ್ಲಿ ಅವಳಿಗೆ ಒಂದು ಕೆಲಸವನ್ನು ಕೊಡಿಸಿದನು.

ಒಂದು ಸರಿಯಾದ ಕೆಲಸವಿಲ್ಲದ

ಸೀಸರ್ ಸೀನಿಯರ್‌ಗೆ ಸೌದಿಅರೇಬಿಯದ ಒಂದು ಕಂಪೆನಿಯವರು ಮೆಕ್ಯಾನಿಕ್‌ಗಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವರೆಂಬ ವಿಷಯ ತಿಳಿಯಿತು. ಆ ಕೆಲಸಕ್ಕೆ ಹೋಗುವಂತೆ ಮಾಟ ಅವನನ್ನು ಬೇಡಿಕೊಂಡಳು. ಅದನ್ನು ಮೊದಲು ನಿರಾಕರಿಸಿದನು. ದಂಪತಿಗಳಿಗೆ ಕೆಲವಾರು ದಿನ ಜಗಳವೇ ಆಯಿತು. ಮಾಟ ಹಟವಾದಿ. ತಾನು ಪ್ರೀತಿಸುತ್ತಿದ್ದ ಕುಟುಂಬಕ್ಕೆ ಸಹಾಯ ಮಾಡಲು ಅವಳ ಪತಿಗೆ ಅದೊಂದೇ ಮಾರ್ಗವಾಗಿತ್ತು.

ಎರಡು ವರ್ಷಗಳನಂತರ ಸೀಸರ್‌ನ ಸ್ಥಿತಿ ಇನ್ನೂ ಹದಗೆಟ್ಟಿತು. ಅವನ ಗುಲ್ಮದ ಅತಿ ಚಟುವಟಿಕೆಯಿಂದಾಗಿ ಕೆಂಪು ರಕ್ತಕಣಗಳು ನಾಶವಾಗತೊಡಗಿದವು. ಫಿಲಿಪ್ಪೈನ್ ಜನರಲ್ ಆಸ್ಪತ್ರೆಯ ವೈದ್ಯರು ಗುಲ್ಮವನ್ನು ತೆಗೆದು ಹಾಕುವ ಅಭಿಪ್ರಾಯಪಟ್ಟರೂ ಸೀಸರ್ ಬಹಳ ಚಿಕ್ಕವನಾಗಿಯೂ ನಿಶ್ಶಕ್ತನಾಗಿಯೂ ಇದ್ದುದರಿಂದ ಆ ರೀತಿ ಮಾಡಲಾಗಲಿಲ್ಲ.

ಆಸ್ಪತ್ರೆಯ ಹಾಸಿಗೆ ಮೇಲೆ ನರಳುತ್ತಾ ಮಲಗಿದ್ದ ಮಗನನ್ನು ಗಮನಿಸುತ್ತಿದ್ದಂತೆ ಎರ್ಮ ಮಾಟ ಅಮೆರಿಕೆಗೆ ಪತ್ರ ಬರೆದಳು. ಜಾಗರೂಕತೆಯಿಂದ ಬರೆದ ದುಂಡಾದ ಅಕ್ಷರಗಳಿಂದ ಸೀಸರನ ಹಿಂದಿನ ಚರಿತ್ರೆಯನ್ನೂ ಇಂದಿನ ಶೋಚನೀಯ ಸ್ಥಿತಿಯನ್ನೂ ಅವನ ಅಸ್ಪಷ್ಟ ಭವಿಷ್ಯವನ್ನೂ ಮತ್ತು ತನ್ನ ಕುಟುಂಬದ ಅಸಹಾಯ ಕತೆಯನ್ನೂ ವಿವರಿಸಿ ಬರೆದಳು. ಸೀಸರನ ಒಂದು ಭಾವಚಿತ್ರವನ್ನೂ ಮತ್ತು ವೈದ್ಯಕೀಯ ತಪಾಸಣೆಯ ದಾಖಲೆಗಳನ್ನೂ ಇಟ್ಟು ತನ್ನ ಮಗನು ಬದುಕಲು ಸಹಾಯ ಮಾಡುವಂತೆ ಕೋರಿ ಮಾಟ ಪತ್ರವನ್ನು ನ್ಯಾನ್ಸಿ ರೇಗನ್ ಹೆಸರಿಗೆ ಬರೆದು ಅದರಲ್ಲಿ ರೇಗನ್‌ಗೆ ಶುಭಾಶಯ ಕೋರಿದ್ದಳು.

ವೈಟ್ ಹೌಸಿನ ಪತ್ರವ್ಯವಹಾರದ ಜಾಡು ಮಾಟಳ ಪತ್ರವನ್ನು ರಾಷ್ಟ್ರೀಯ ಆರೋಗ್ಯ ಸಂಸ್ಥೆಗೆ ರವಾನಿಸಿ ನೇರ ಉತ್ತರ ಬರೆಯುವಂತೆ ಆದೇಶಿಸಿತು.

ಒಬ್ಬ ಒಳ್ಳೆಯ ವಿದ್ಯಾರ್ಥಿ: ಆರು ವಾರಗಳನಂತರ ಮಾಟಳಿಗೆ ಸಂಯುಕ್ತ ಸಂಸ್ಥಾನದ ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ಕ್ಲಾಡ್ ಲೆನ್‌ಫ್ಯಾಂಟ್‌ರಿಂದ ಒಂದು ಉತ್ತೇಜಕ ಪತ್ರ ಬಂತು ಥ್ಯಾಲಸ್ಸೀಮಿಯಾ ಬಗ್ಗೆ ಅಲ್ಲಿಯ ವೈದ್ಯರು ಸಂಶೋಧನೆ ನಡೆಸುತ್ತಿದ್ದಾರೆಂದು ಅವರು ಬರೆಯುತ್ತಾ ಡೆಸ್ಫೆರಾಲ್ ಎಂಬ ಔಷಧದ ಚಿಕಿತ್ಸೆಯಿಂದ ಕಾಯಿಲೆಯನ್ನು ಗುಣಪಡಿಸಲಾಗುವುದಿಲ್ಲ. ಬದಲೀ ರಕ್ತ ಕೊಡುವುದನ್ನು ತಪ್ಪಿಸಲೂ ಆಗುವುದಿಲ್ಲ. ಆದರೆ ರಕ್ತದಲ್ಲಿ ಸಂಗ್ರಹವಾದ ಕಬ್ಬಿಣವನ್ನು ತೆಗೆದು ಹಾಕುತ್ತದೆ. ಸಾಮಾನ್ಯವಾಗಿ ಸಾವಿನಲ್ಲಿ ಕೊನೆಗೊಳ್ಳುವ ಮುಖ್ಯ ಅಂಗಗಳಿಗಾಗುವ ದೀರ್ಘಕಾಲದ ಹಾನಿಯನ್ನು ತಡೆಗಟ್ಟಿ ಸಾವನ್ನು ಮುಂದೂಡುತ್ತದೆ ಎಂದೂ ಪತ್ರದಲ್ಲಿ ಬರೆದಿದ್ದರು.

ಡಾ॥ ಲೆನ್‌ಫ್ಯಾಂಟನ ಪತ್ರವು ಮಾಟಳಿಗೆ ಒಂದು ಕಡು ಸತ್ಯದ ಬಗ್ಗೆಯೂ ಎಚ್ಚರಿಸಿತ್ತು. ಚಿಕಿತ್ಸೆಗೆ ಒಂದು ವರ್ಷಕ್ಕೆ ನಾಲ್ಕು ಸಾವಿರ ಡಾಲರ್ ವೆಚ್ಚ ತಗಲುತ್ತದೆ. ಅಲ್ಲದೆ ರೋಗಿಯು ಪರೀಕ್ಷೆಗಾಗಿ ಪ್ರತಿವರ್ಷವೂ ಆರೋಗ್ಯಸಂಸ್ಥೆಗೆ ಹೋಗಬೇಕು.

ತನ್ನ ಮಗನನ್ನು ಅಮೆರಿಕಗೆ ಕರೆದುಕೊಂಡು ಹೋಗಲೇಬೇಕೆಂದು ಮಾಟ

ಪ್ರತಿಜ್ಞೆ ಮಾಡಿಕೊಂಡಳು. ಅಲ್ಲಿಯವರೆಗೆ ಅವನನ್ನು ಚೆನ್ನಾಗಿ ಉಪಚರಿಸಬೇಕು. ಸೀಸರನು ತಾಯಿಯಂತೆ ಧೈರ್ಯಶಾಲಿ ಮತ್ತು ಹಠವಾದಿ. ಅವನ ಗುಲ್ಮದಲ್ಲಿದ್ದ ತೊಂದರೆಯನ್ನು ಸಹಿಸಿಕೊಂಡನು. ಶಾಲೆಯಲ್ಲಿ ಒಳ್ಳೆಯ ವಿದ್ಯಾರ್ಥಿ ಎನಿಸಿದನು. ಪ್ರೌಢಶಾಲೆಯಿಂದಲೂ ಪದವೀಧರನಾದನು.

೧೯೯೩ರಲ್ಲಿ ರೇಗನ್‌ಗೆ ಪತ್ರ ಬರೆದ ಹತ್ತು ವರ್ಷಗಳ ಅನಂತರ ಪ್ರಪಂಚದಲ್ಲೇ ಥ್ಯಾಲಸ್ಸೇಮಿಯದ ಅತ್ಯಂತ ಪ್ರಮುಖ ತಜ್ಞ ಡಾ|| ಆರ್ಥರ್ ನೀನ್‌ಹೂಯಿಸ್‌ನಿಂದ ಮಾಟಳಿಗೆ ಒಂದು ಪತ್ರ ಬಂತು. ಆರೋಗ್ಯ ಸಂಸ್ಥೆಯಲ್ಲಿದ್ದಾಗಲೇ ಆತನು ಮಾಟಳಿಗೆ ಆಧುನಿಕ ಸಂಶೋಧನೆಯ ಬಗ್ಗೆ ತಿಳುವಳಿಕೆ ನೀಡುವ ಪತ್ರವನ್ನು ಬರೆದಿದ್ದ. ಈಗ ಆತ ಟೆನ್ನಿಸಿಯಲ್ಲಿರುವ ಮೆಮ್‌ಫಿಸ್‌ನ ಸೇಂಟ್ ಜ್ಯೂಡ್ ಮಕ್ಕಳ ಸಂಶೋಧನಾ ಆಸ್ಪತ್ರೆಯ ನಿರ್ದೇಶಕನಾಗಿದ್ದ. ಸೀಸರನಿಗೆ ಉಚಿತ ಚಿಕಿತ್ಸೆಯನ್ನೂ, ಅಮೆರಿಕದಲ್ಲಿ ಓಡಾಡಲು ವಿಮಾನ ಟಿಕೆಟ್‌ಗಳನ್ನು ಮತ್ತು ಮೆಮ್‌ಫಿಸ್‌ನಲ್ಲಿ ತಂಗಲು ವ್ಯವಸ್ಥೆಯನ್ನೂ ಮಾಡಿಕೊಡಲು ಆಸ್ಪತ್ರೆ ಇಚ್ಛಿಸಿತು. ಸಂಯುಕ್ತ ಸಂಸ್ಥಾನದ ಯಾವುದಾದರೊಂದು ನಗರಕ್ಕೆ ಹುಡುಗನನ್ನು ಕರೆದುಕೊಂಡು ಬಂದರೆ ಅಲ್ಲಿಂದ ಸೇಂಟ್ ಜ್ಯೂಡ್‌ನವರು ಆಸ್ಪತ್ರೆಗೆ ಕರೆದುಕೊಂಡು ಬರುವರು.

ಅಂದಿನಿಂದಲೂ ಎರ್ಮ ಮಾಟ ಇದನ್ನೇ ಕೇಳಬಯಸಿದ್ದಳು. ಚಿಚಿ ಲಸಾರೊರವರನ್ನು ಸಹಾಯಕ್ಕಾಗಿ ಯಾಚಿಸಿದಾಗ ತಾಯಿ ಮತ್ತು ಮಗನಿಗೆ ಫಿಲಿಪೈನ್ ಏರ್‌ಲೈನ್ಸ್ ಮೂಲಕ ಎರಡು ಟಿಕೆಟ್‌ಗಳನ್ನು ಉಚಿತವಾಗಿ ತೆಗೆಸಿಕೊಟ್ಟರು. ಕೆಲವು ತಿಂಗಳುಗಳ ಅನಂತರ ೧೯೯೪ರ ಬೇಸಿಗೆಯ ಒಂದು ದಿನ ಅವರ ವಿಮಾನ ಸಂಯುಕ್ತ ಸಂಸ್ಥಾನವನ್ನು ಮುಟ್ಟಿತು.

ಇಪ್ಪತ್ತು ವರ್ಷದ ಸೀಸರ್ ಕೇವಲ ನಾಲ್ಕು ಅಡಿ ಎತ್ತರವಿದ್ದ. ಆದರೆ ಅವನ ಉತ್ಸಾಹ ಮಾತ್ರ ಗಗನಕ್ಕೇರಿತ್ತು. ತಾಯಿ ಮತ್ತು ಮಗ ಸೇಂಟ್ ಜ್ಯೂಡ್ ಆಸ್ಪತ್ರೆಗೆ ಕಾಲಿಟ್ಟರು.

ತೀವ್ರ ತಪಾಸಣೆಯ ಬಳಿಕ ಪ್ರಾಥಮಿಕ ಹಂತದ ಚಿಕಿತ್ಸೆಗಾಗಿ ಸೀಸರನು ಲಾಸ್ ಆಂಜಲೀಸ್‌ಗೆ ಹಿಂತಿರುಗಿದನು. ಅವನ ಗುಲ್ಮ ಮತ್ತು ಪಿತ್ತಕೋಶಗಳನ್ನು ತೆಗೆದು ಹಾಕಲಾಯಿತು. ಇದರಿಂದ ಕೆಂಪುರಕ್ತಕಣಗಳು ನಾಶವಾಗುವುದನ್ನು ತಡೆಗಟ್ಟಿದಂತಾಯಿತು. ದಕ್ಷಿಣ ಕ್ಯಾಲಿಫೋರ್ನಿಯದ ಫಿಲಿಪೈನ್ ಮೆಡಿಕಲ್ ಸೊಸೈಟಿ ಅಧ್ಯಕ್ಷ ಡಾ|| ರಾಬಿನ್‌ಸನ್ ವಿ ಬ್ಯಾರನ್ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ಮಾಡಿದರು. ಸೀಸರನು ಚೇತರಿಸಿಕೊಳ್ಳುವತನಕ ಡಾ|| ಬ್ಯಾರನ್ ಮತ್ತು ಆತನ ಹೆಂಡತಿಯು ಮಾಟಳನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಂಡಿರು.

ಎತ್ತರದ ನಿಲುವು: ಹುಡುಗನ ಧೈರ್ಯ ಮತ್ತು ತಾಯಿಯ ಮಮತೆಯನ್ನು ನೋಡಿ ಫಿಲಿಪಿಯನ್ನರ ಮನ ಕರಗಿತು. ತಮ್ಮ ಸಹಾಯ ಹಸ್ತ ನೀಡಲು ಮುಂದಾದರು. ಹುಡುಗನ ಆರೋಗ್ಯ ಅಭಿವೃದ್ಧಿ ಬಗ್ಗೆ ರೇಗನ್‌ರವರ ಸಹಾಯ ಅಧಿಕಾರಿಗಳಿಗೆ ತಿಳಿಸಿದರು.”

ಅಧ್ಯಕ್ಷ ರೇಗನ್ ಮತ್ತು ಆತನ ಹೆಂಡತಿಯು ಸೀಸರ್, ಮಾಟ ಮತ್ತು

ಡಾ॥ಬ್ಯಾರಸ್ ರವರನ್ನು ನೋಡಲು ಇಚ್ಛಿಸಿರುವುದಾಗಿ ಮಾಟಳಿಗೆ ಒಂದು ದಿನ ದೂರವಾಣಿ ಕರೆ ಬಂತು." ನಾವು ಅಧ್ಯಕ್ಷ ರೇಗನ್ ರವರನ್ನು ಭೇಟಿಮಾಡಲಿದ್ದೇವೆ. ಇದನ್ನು ನೀನು ನಂಬುವೆಯಾ ?" ಎಂದು ಸಂತೋಷದಿಂದ ಮಾಟ ಕೂಗಿಕೊಂಡಳು.

ಮಾಜಿ ಅಧ್ಯಕ್ಷರ ಕ್ಯಾಲಿಫೋರ್ನಿಯಾದ ಕಚೇರಿಯಲ್ಲಿ ಭೇಟಿಯಾಯಿತು. ರೋನಾಲ್ಡ್ ರೇಗನ್ ಬಾಗಿಲಿನಲ್ಲಿಯೇ ನಿಂತು ಅವರನ್ನು ಸ್ವಾಗತಿಸಿ ಆತ್ಮೀಯತೆಯಿಂದ ಶುಭ ಕೋರಿದರು. ಕೈ ಕುಲುಕುವಾಗ ರೇಗನ್ ರವರ ಕೈ ಸೀಸರನ ಪುಟ್ಟ ಕೈಯನ್ನು ಪೂರ್ತಿಯಾಗಿ ಆವರಿಸಿದ್ದರಿಂದ ಸೀಸರನಿಗೆ ಅನಿಸಿದ್ದು, "ರೇಗನ್ ಅತಿ ದೊಡ್ಡ ವ್ಯಕ್ತಿ". ಮಾಟ ದಿಗ್ಭ್ರಾಂತಳಾಗಿ ಬಹಳ ವರ್ಷಗಳ ಹಿಂದಿನ ಒಂದು ಸಂಜೆ ಅಧ್ಯಕ್ಷರ ಸಹಾಯವನ್ನು ಯಾಚಿಸಲೇಬೇಕೆಂದು ಪಣ ತೊಟ್ಟದ್ದನ್ನು ನೆನಪಿಸಿಕೊಂಡಳು.

ಬದಲೀ ರಕ್ತವನ್ನು ಅನೇಕ ವರ್ಷಗಳವರೆಗೆ ಪಡೆದಿದ್ದರಿಂದ ಅವನ ದೇಹದಲ್ಲಿ ಅತಿಯಾಗಿ ಸಂಗ್ರಹವಾಗಿದ್ದ ವಿಷಕಾರಿ ಕಬ್ಬಿಣವನ್ನು ತೆಗೆದು ಹಾಕಲು ಸುದೀರ್ಘವಾದ ಚಿಕಿತ್ಸೆಯನ್ನು ಮಾಡಬೇಕಾಗಿದ್ದರಿಂದ ಸೀಸರನನ್ನು ಅಧ್ಯಕ್ಷರ ಭೇಟಿಯನಂತರ ಸೇಂಟ್ ಜ್ಯೂಡ್ ಆಸ್ಪತ್ರೆಗೆ ಕರೆದುಕೊಂಡುಹೋದರು. ಅಂತರಾಸ್ರಾವ ತಜ್ಞರ ಒಂದು ತಂಡವು ಅವನ ದೇಹದ ಮೇಲೆ ಪ್ರಭಾವ ಬೀರುತ್ತಿದ್ದ ಹಾರ್ಮೋನ್‌ಗಳ ವೈಪರೀತ್ಯದ ಬದಲೀ ಪರಿಹಾರಕ್ಕೆ ಒಂದು ಪರಿಸ್ಥಿತಿಯನ್ನು ಸೃಷ್ಟಿಸಿದರು.

ಇಂದು ಸೀಸರನು ೫ ಅಡಿ ೧ ಇಂಚು ಎತ್ತರ ಬೆಳೆದಿದ್ದಾನೆ. ಅಂದರೆ ಚಿಕಿತ್ಸೆಗೆ ಮೊದಲು ಇದ್ದುದಕ್ಕಿಂತ ಪೂರಾ ಹನ್ನೆರಡು ಇಂಚು ಬೆಳವಣಿಗೆ ! ಫಿಲಿಪೈನಿನ ತನ್ನ ಮನೆಯಲ್ಲಿ ಸೀಸರ್ ತನ್ನ ಔಷಧ ಚಿಕಿತ್ಸೆಯನ್ನು ಸ್ವತಃ ಮಾಡಿಕೊಳ್ಳುತ್ತಾನೆ.೧೯೯೪ರಲ್ಲಿ ಅವನ ಗುಲ್ಮವನ್ನು ತೆಗೆದು ಹಾಕಿದ ದಿನದಿಂದ ಬದಲೀ ರಕ್ತದ ಆವಶ್ಯಕತೆಯೇ ಕಂಡು ಬಂದಿಲ್ಲ.

ತನ್ನ ಮನೆಯಿಂದ ಕೆಲವೇ ಕಿ.ಮೀ. ದೂರದಲ್ಲಿರುವ ಪ್ರಾಂತೀಯ ರಾಜಧಾನಿಯಾದ ಲೆಗಾಸ್ಪಿ ನಗರದ ಕಾಲೇಜಿಗೆ ಹೋಗುತ್ತಿದ್ದಾನೆ. ತನ್ನ ಕಾಯಿಲೆಯ ಬಗ್ಗೆ ಓದಿ ತಿಳಿದುಕೊಂಡು ವಿಜ್ಞಾನ ಸಂಶೋಧಕನಾಗುವ ಬಯಕೆಯನ್ನಿಟ್ಟು ಕೊಂಡಿದ್ದಾನೆ. "ನನಗೆ ಸಹಾಯ ಮಾಡಿದವರಿಗೆ ಕೃತಜ್ಞತೆಯನ್ನು ನಾನು ಈರೀತಿ ಸಲ್ಲಿಸುತ್ತೇನೆ" ಎಂದು ವಿನಮ್ರದಿಂದ ಸೀಸರ್ ಹೇಳುತ್ತಾನೆ.

"ಅನುವಂಶೀಯ ವಸ್ತುಗಳ ಚಿಕಿತ್ಸೆ ಲಭ್ಯವಾದಾಗ ಚಿಕಿತ್ಸೆ ಪಡೆಯುವ ತ್ಯಾಲಸ್ಸೇಮಿಯ ರೋಗಿಗಳಲ್ಲಿ ಮೊದಲಿಗನೇ ಸೀಸರ್" ಎಂದು ಡಾ॥ ನೀನ್ ಹೂಯಿಸ್ ಭರವಸೆಯನ್ನು ಹೊತ್ತಿದ್ದಾರೆ. ಅಲ್ಲಿಯವರೆಗೆ ಅವನು ಆತಂಕರಹಿತ ಜೀವನವನ್ನು ನಡೆಸಬೇಕೆಂದು ಶುಭಾಶಯವನ್ನು ಕೋರಬೇಕಾಗಿದೆ.

ಸೇಂಟ್ ಜ್ಯೂಡ್ ಆಸ್ಪತ್ರೆಗೆ ಕೊಟ್ಟ ಮೊದಲ ಭೇಟಿಯಲ್ಲಿ "ಖಂಡಿತ ಎದೆಗುಂದಬೇಡ" ಎಂಬ ಆಸ್ಪತ್ರೆಯ ಆದರ್ಶ ವಾಕ್ಯ ಮುದ್ರಿತವಾದ ಅಂಗಿಗಳನ್ನು ನರ್ಸ್‌ಗಳು ಮಾಟ ಮತ್ತು ಸೀಸರ್‌ಗೆ ಕೊಟ್ಟರು. ಆದರೆ ಎರ್ಮ ಮಾಟಳ ಜೀವನವೂ ಕೂಡ ಇದೇ ಆದರ್ಶವನ್ನೇ ಮೊದಲಿನಿಂದಲೂ ರೂಪಿಸಿಕೊಂಡಿತ್ತು.

ಪುಸ್ತಕ ಪರಿಚಯ

ಮಹಾಶ್ವೇತೆ : ಲೇಖಕರು : ಸುಧಾಮೂರ್ತಿ, ಬೆಂಗಳೂರು. ಪ್ರಕಾಶಕರು ; ಭಾರತ ಸಂಸ್ಕೃತಿ ಪ್ರಕಾಶನ, ೧೬೩೨, ೬ನೇ ಮುಖ್ಯರಸ್ತೆ, ಇ.ಬ್ಲಾಕ್ ೨ನೇ ಹಂತ, ರಾಜಾಜಿನಗರ, ಬೆಂಗಳುರು-೫೬೦೦೧೦.

ಪುಟಗಳು-೧೯೬ + IV ಬೆಲೆ : ೬೦-೦೦ರೂ ಪ್ರಥಮ ಮುದ್ರಣ - ೧೯೯೯

ಗಂಧರ್ವ ರಾಜಕುಮಾರಿ ಮಹಾಶ್ವೇತೆ ತನ್ನ ಸಖಿಯರೊಡನೆ ಅರಣ್ಯ ದಲ್ಲಿ ವಿಹರಿಸುತ್ತಿದ್ದಾಗ ಸುಂದರಾಂಗನಾದ ಮುನಿಕುಮಾರ ಪುಂಡರೀಕನನ್ನು ನೋಡುತ್ತಾಳೆ. ಅವನಲ್ಲಿ ಮೋಹಗೊಳ್ಳುತ್ತಾಳೆ. ಪ್ರಥಮನೋಟದಲ್ಲಿಯೇ ಅವರಿಬ್ಬರಲ್ಲಿ ಪ್ರಣಯ ಅಂಕುರವಾಗಿ ಅದು ಗಾಢ ಪ್ರೇಮಕ್ಕೆ ತಿರುಗುತ್ತದೆ. ಇದು 'ಕಾದಂಬರಿ' ಕಾವ್ಯದ ಮಹಾಶ್ವೇತೆಯ ಕಥೆ. ಈ ಕಥೆಯ ನಾಟಕದ ಪಾತ್ರಧಾರಿಣಿ 'ಅನುಪಮಾ' ಸುಧಾಮೂರ್ತಿ ಅವರ 'ಮಹಾಶ್ವೇತೆ' ಸಾಮಾಜಿಕ ಕಾದಂಬರಿಯ ನಾಯಕಿ. ನಾಟಕದಲ್ಲಿ ಮಹಾಶ್ವೇತೆ ಪಾತ್ರ ವಹಿಸಿ ನಿಜಜೀವನದಲ್ಲಿಯೂ 'ಮಹಾಶ್ವೇತೆ' ಯಾಗಬೇಕಾದ ದುರಂತ ಅನುಪಮಾಳದು.

ಡಾ.ದೇಸಾಯಿ ಅವರ ಮನೆಯಲ್ಲಿ ಅನುಪಮ-ಆನಂದರ ಪ್ರಥಮ ಭೇಟಿ. 'ಮಹಾಶ್ವೇತೆ' ನಾಟಕಕ್ಕೆ ಚಂದಾ ವಸೂಲಿಗಾಗಿ. ಆನಂದ ಪ್ರಥಮ ನೋಟದಲ್ಲಿ ಅನುಪಮಾಳಲ್ಲಿ ಅನುರಕ್ತ. ಅನುಪಮ ನಾಟಕದಲ್ಲಿ ಮಗ್ನ. ಆನಂದ ದಿನಗಳೆದಂತೆ ಅನುವಿನ ಸಾನಿಧ್ಯಕ್ಕಾಗಿ ತವಕ. ಆನಂದ ಸಿರಿವಂತರ ಮಗ. ಮಿಗಿಲಾಗಿ ವೈದ್ಯ. ಅನುಪಮಾ ಬಡ ಮೇಷ್ಟ್ರು ಶಾಮಣ್ಣರ ಮಗಳು. ರೂಪವೇ ಬಂಗಾರ. ವಿನಯವೇ ಭೂಷಣ. ಆನಂದನ ತಾಯಿ ರಾಧಕ್ಕನಿಗೆ ಸುಂದರಿ ಸೊಸೆ ಜೊತೆ ಬಂಗಾರವೂ ಬೇಕು. ಮಗನ ಬಲವಂತಕ್ಕೆ ಮದುವೆಗೆ ಒಪ್ಪಿಗೆ. ಮದುವೆ ನಂತರ ಆನಂದ ಇಂಗ್ಲೇಂಡಿಗೆ ಸವಾರಿ. ಅನಿರೀಕ್ಷಿತವಾಗಿ ಅನುಪಮಾಳ ಕಾಲಮೇಲೆ ಬೆಂಕಿ ಕೆಂಡ ಬೀಳುತ್ತದೆ. ಅದೇ ಬಿಳಿಮಚ್ಚೆಯಾಗಿ ಕಾಡುತ್ತದೆ. ಮನೆಮಂದಿಯೆಲ್ಲ ಅನುವನ್ನು ತಾತ್ಸಾರದಿಂದ ಕಾಣುತ್ತಾರೆ. ಕೊನೆಗೆ ತಂದೆಮನೆಗೆ ಸಾಗಹಾಕುತ್ತಾರೆ. ತವರು ಮನೆಯಲ್ಲಿ ತಂದೆ ನಿಸ್ಸಾಹಯಕ. ಎರಡನೆ ಹೆಂಡತಿಯ ಕಾರುಭಾರು. ಅನುಪಮಾ ನಲುಗಿ ಹೋಗುತ್ತಾಳೆ. ಹಳೆಯ ಗೆಳತಿ ಸುಮನಳ ನೆನಪಾಗುತ್ತದೆ. ಮುಂಬೈಗೆ ಪಯಣ. ಗೆಳತಿಯ ಭೇಟಿ. ಆನಂದನಿಗೆ ಪತ್ರ ಹಾಕಿದರೂ ಉತ್ತರವಿಲ್ಲ. ಸುಮನಳ ಗಂಡ 'ಹರಿ' ಯ ಕಣ್ಣು ಅನುಪಮಳ ಮೇಲೆ. ಅನುಪಮಾ ಹೊಸ ಕ್ರಿಶ್ಚಿಯನ್ ಗೆಳತಿ

ಡಾಲಿಯ ನೆರವಿನಿಂದ ಹಾಸ್ಟೆಲ್ ಸೇರುತ್ತಾಳೆ. ರಸ್ತೆ ಅಪಘಾತದಲ್ಲಿ ಡಾ.ವಸಂತ ಹಾಗೂ ಸತ್ಯರ ಪರಿಚಯ.ತಂದೆ ಶಾಮಣ್ಣ ತೀರಿಕೊಳ್ಳುತ್ತಾರೆ. ಎಷ್ಟೋ ವರ್ಷಗಳ ನಂತರ ಆನಂದ ಅನುಪಮಾಳನ್ನು ಹುಡುಕಿ ಹಳ್ಳಿಗೆ ಹೋಗುತ್ತಾನೆ. ಕೊನೆಗೆ ಮುಂಬೈಯಲ್ಲಿ ಅನುಪಮಾಳನ್ನು ಭೇಟಿಯಾಗುತ್ತಾನೆ. ಕ್ಷಮೆ ಕೋರುತ್ತಾನೆ. ಮನೆಗೆ ಆಹ್ವಾನಿಸುತ್ತಾನೆ. ಈ ಮಧ್ಯೆ ವಸಂತನು ಅನುಪಿಗೆ ಬಾಳುಕೊಡಲು ನಿರ್ಧರಿಸುತ್ತಾನೆ. ಅನುಪಮಾ ಒಪ್ಪುವುದಿಲ್ಲ. ನನಗಿರುವ ರೋಗ ಗಂಡಸರಿಗಿದ್ದರೆ ಹೆಂಡತಿ ಹೀಗೆ ಮಾಡುತ್ತಿದ್ದಳೆ ಎಂದು ಪ್ರಶ್ನಿಸುತ್ತಾಳೆ. ತನ್ನ ಜೀವನವನ್ನು ರಂಗಭೂಮಿಗಾಗಿ ಮೀಸಲಿಡಲು ನಿರ್ಧರಿಸುತ್ತಾಳೆ. ತಾನೂ ಸ್ವತಂತ್ರಳಾಗಿ ಬದುಕಬಲ್ಲೆ. ಗಂಡಿನ ಆಶ್ರಯವೊಂದೇ ಹೆಣ್ಣಿಗೆ ಮುಖ್ಯವಲ್ಲ ಎಂದು ಸಾರುತ್ತಾಳೆ - ಇವಿಷ್ಟು ಮಹಾಶ್ವೇತೆ ಕಾದಂಬರಿಯ ಕಥಾ ಹಂದರ.

ಕಾದಂಬರಿಗಾರ್ತಿ ಸುಧಾಮೂರ್ತಿ ಅವರು ಕಾದಂಬರಿಯ ಪ್ರಾರಂಭದಲ್ಲೆ "ಪ್ರೇಮ ಎನ್ನುವುದು ಬದುಕಿನಲ್ಲಿ ಪರೀಕ್ಷಿಸಿ, ಅನೇಕ ವೇಳೆ ಅನೇಕರನ್ನು ವಿಚಾರಿಸಿ ಕೊಂಡು ಕೊಳ್ಳುವ ವಸ್ತುವಲ್ಲ. ಅಂಗಡಿಯಲ್ಲಿಟ್ಟು ಮಾರಾಟ ಮಾಡುವಂತಹವುದೂ ಅಲ್ಲ. ಒಬ್ಬ ವ್ಯಕ್ತಿಯನ್ನು ನೋಡಿದ ಕೂಡಲೇ ಅವನಿಗೆ ಅವನ ಸುಖ- ದುಃಖಗಳೊಂದಿಗೆ ಒಂದಾಗಿ ಬಾಳ ಬೇಕೆನ್ನುವ ಉತ್ಕಟ ಆಸೆ. ಈ ಅದಮ್ಯ ಆಸೆ ಜೀವನದ, ಸಮಾಜದ ಎಲ್ಲ ಬಂಧನಗಳನ್ನು ತುಳಿಯುವ ಶಕ್ತಿಯನ್ನು ಹೊಂದಿರುತ್ತದೆ. ಇವನು ಯಾರೇ ಇರಲಿ, ಎಲ್ಲಿಯೇ ಇರಲಿ, ಹೇಗೆ ಇರಲಿ, ಇವನ ಮೇಲೆ ನನ್ನ ಪ್ರೇಮ ಅಚಲವಾಗಿದೆ. ಹಿಮಾಲಯ ಪರ್ವತದಂತೆ ಸ್ಥಿರವಾಗಿದೆ. ಸಾಗರದಂತೆ ಆಳವಾಗಿದೆ. ಮಾನಸ ಸರೋವರದಂತೆ ಸ್ವಚ್ಛವಾಗಿದೆ- ಎಂಬ ಪ್ರೇಮದ ವ್ಯಾಖ್ಯಾನ ವನ್ನೇ ನೀಡುತ್ತಾರೆ. ಈ ವ್ಯಾಖ್ಯಾನದ ಪರೀಕ್ಷೆಯೆ ಈ ಕಾದಂಬರಿ ಎನ್ನಬಹುದು. ಹೆಣ್ಣು ಗಂಡಿನ ದಾಸಳಲ್ಲ. ಗಂಡು- ಹೆಣ್ಣಿನ ನಡುವೆ ಪ್ರೇಮ ಸಾಕ್ಷಾತ್ಕಾರವಾಗಬೇಕು ಎನ್ನುವುದೆ ಈ ಕಾದಂಬರಿಯ ಸಂದೇಶ.

ಹೃದಯ ರೋಗಿ ಅನಾಥ ಗರ್ಭಿಣಿ ಹೆಣ್ಣು ಮಗಳೊಬ್ಬಳಿಗೆ ಶಸ್ತ್ರಚಿಕಿತ್ಸೆ ಮಾಡಿ ಹೆರಿಗೆ ಮಾಡಿಸುತ್ತಾರೆ ಡಾ.ದೇಸಾಯಿ ಮತ್ತು ಡಾ. ಆನಂದ. ಆಕೆಗೆ ಹೆಣ್ಣುಮಗುವಾಗುತ್ತದೆ. "ಆನಂದ ಹೆಣ್ಣುಮಗುವಲ್ಲವೆ? ಖಂಡಿತ ಬದುಕುತ್ತದೆ. ಅಲ್ಲದೇ ಮುಂದೆಯೂ ಅಳುತ್ತದೆ" ಎನ್ನುತ್ತಾರೆ ಒಬ್ಬರು. ಇದು ಕಾದಂಬರಿಯ ಪ್ರಾರಂಭ. ಇಲ್ಲಿ ಲೇಖಕಿ ಹೆಣ್ಣು ಮಕ್ಕಳ ತೊಳಲಾಟವನ್ನು ಮಾರ್ಮಿಕವಾಗಿ ಚಿತ್ರಿಸುತ್ತಾರೆ. "ಮುಂದೆಯೂ ಅಳುತ್ತದೆ" ಎಂಬ ಒಂದೇ ಮಾತಿನಲ್ಲಿ ಕಾದಂಬರಿಯ ನಾಯಕಿ ಅನುಪಮಾಳ ಬದುಕನ್ನೆಲ್ಲ ಹಿಡಿದಿಟ್ಟಿದ್ದಾರೆ.

ಅನುಪಮಾ - ಆನಂದರ ಪ್ರಾರಂಭದ ಭೇಟಿ 'ಮಹಾಶ್ವೇತೆ' ನಾಟಕದ ನಿಮಿತ್ತ. ಕಾದಂಬರಿಯ ಅಂತ್ಯ 'ವಾಸವದತ್ತಾ' ನಾಟಕದ ಮೂಲಕ. ಇದು ಕಾದಂಬರಿಗೆ ಒಂದು ಅರ್ಥಪೂರ್ಣ ನೆಲೆಗಟ್ಟನ್ನು ಕಂಡುಕೊಟ್ಟಿದೆ.

ಕಾದಂಬರಿಯ ನಾಯಕ ಆನಂದ

ಸಿರಿವಂತನಾದರೂ ಎಲ್ಲಿಯೂ ಅತಿರೇಕವಾಗಿ ವರ್ತಿಸುವುದಿಲ್ಲ. ಕಾದಂಬರಿ ಯಲ್ಲಿ ಮೊದಲು ಪರಿಚಯವಾಗುವವನೆ ಆನಂದ. ಅನಾಥ ಹೆಣ್ಣೊಬ್ಬಳಿಗೆ ಶಸ್ತ್ರಚಿಕಿತ್ಸೆ ಮಾಡಿ ಮಗುವನ್ನು ಬದುಕಿಸುತ್ತಾನೆ. ಮಗುವನ್ನು ಪ್ರೀತಿಯಿಂದ ಕಾಣುತ್ತಾನೆ. ಅನುಪಮಾಳ ಜೊತೆ ಕೂಡ ಸೌಜನ್ಯದಿಂದಲೇ ವರ್ತಿಸುತ್ತಾನೆ. ತಾಯಿಯ ಮೇಲಿನ ಮಮತೆಯಿಂದ, ತಪ್ಪು ತಿಳಿವಳಿಕೆಯಿಂದ ಸ್ವಲ್ಪಕಾಲ ಅನುಪಮಾಳನ್ನು ಮರೆತರೂ ಮತ್ತೆ ಅವಳಿಗಾಗಿ ಪರಿತಪಿಸುತ್ತಾನೆ. ತಾಯಿ ಎರಡನೆ ಮದುವೆಗ ಒತ್ತಾಯಿಸಿದರೂ ಮದುವೆ ಮಾಡಿಕೊಳ್ಳುವುದಿಲ್ಲ. ಕೊನೆಗೆ ಅನುಪಮಾಳಲ್ಲಿ ಕ್ಷಮೆಯನ್ನು ಕೋರುತ್ತಾನೆ.

ಅನುಪಮಾಳ ಸ್ನೇಹಿತೆ ಸುಮನ ಕಷ್ಟಕಾಲದಲ್ಲಿ ಗೆಳತಿಗೆ ಆಶ್ರಯ ನೀಡುತ್ತಾಳೆ. ಈಕೆಯ ಗಂಡ 'ಹರಿ' ಅನುಪಮಾಳ ರೂಪಕ್ಕೆ ಮರುಳಾಗುತ್ತಾನೆ. ಅವಳನ್ನು ಬಲತ್ಕರಿಸುತ್ತಾನೆ - ಕಾದಂಬರಿಕಾರ್ತಿ ಇದು ಪುರುಷನ ಒಂದು ದೌರ್ಬಲ್ಯ ಎನ್ನುವಂತೆ ಈ ಸಂದರ್ಭವನ್ನು ಚಿತ್ರಿಸಲು ಪ್ರಯತ್ನಿಸಿರುವಂತೆ ತೋರುತ್ತದೆ. ಕಾದಂಬರಿಯಲ್ಲಿ 'ಹರಿ' ಪಾತ್ರ ಬಿಟ್ಟರೆ ಇನ್ನಾವುದೇ ಪುರುಷ ಪಾತ್ರಗಳು ಈ ರೀತಿ ವರ್ತಿಸುವುದಿಲ್ಲ. ಹೆಣ್ಣಿನ ಬಗ್ಗೆ ಕರುಣೆ ತುಂಬಿದ ಪುರುಷ ಪಾತ್ರಗಳೇ ಎಲ್ಲ. ಅಂದಾಗ ಕಾದಂಬರಿಯಲ್ಲಿ ಈ ಸಂದರ್ಭ ಅಗತ್ಯವಿತ್ತೆ ಎಂಬ ಪ್ರಶ್ನೆ ಬರುತ್ತದೆ.

ಕಾದಂಬರಿಕಾರ್ತಿ ಸ್ತ್ರೀಪರಧೋರಣೆ ಇರುವವರಾದರೂ ಪುರುಷ ಪಾತ್ರಗಳನ್ನು ಸಹಜವಾಗಿ ಚಿತ್ರಿಸಿದ್ದಾರೆ. ಪೂರ್ವಾಗ್ರಹವಿಲ್ಲದೆ ಆಯಾಯ ಪಾತ್ರಗಳಿಗೆ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ.

ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳು ಅನುಪಮಾ, ಅತ್ತೆ ರಾಧಕ್ಕ, ಗೆಳತಿ ಸುಮನ, ರಾಧಕ್ಕಳ ಮಗಳು ಗಿರಿಜ, ಮುಂಬೈ ಗೆಳತಿ ಡಾಲಿ, ಆನಂದನ ತಾಯಿ ವಸುಮತಿ-ಮುಂತಾದವುಗಳು. ಈ ಎಲ್ಲ ಪಾತ್ರಗಳು ಅನುಪಮಾಳ ಸುತ್ತವೇ ಸುತ್ತಿದರೂ ಅವುಗಳಿಗೆ ತಮ್ಮದೇ ಆದ ಒಂದು ಬದುಕೂ ಇದೆ ಎನ್ನುವುದನ್ನು ಕಾದಂಬರಿಕಾರ್ತಿ ನಿರೂಪಿಸಿದ್ದಾರೆ. ಈಗಾಗಿ ಪಾತ್ರಗಳು ಪೇಲವವಾಗದೆ ಮೈ ತುಂಬಿಕೊಳ್ಳುತ್ತವೆ. ಕಾದಂಬರಿಯ ಬದುಕೂ ವಿಸ್ತಾರವಾಗುತ್ತದೆ. ಕಾದಂಬರಿ ಮಹತ್ವವೆನಿಸಿಕೊಳ್ಳುತ್ತದೆ.

ಕಾದಂಬರಿಯಲ್ಲಿ ಬರುವ ವರ್ಣನೆಗಳು ಕಾದಂಬರಿಯ ಸೊಬಗನ್ನು ಹೆಚ್ಚಿಸಿವೆ. ''ಸಾಧಾರಣ ಎತ್ತರದ ಗುಲಾಬಿ ವರ್ಣದ ದುಂಡುಮುಖದ ಗಿಣಿ ಹಸಿರು ವರ್ಣದ ಗದ್ವಾಲ ಸೀರೆ, ಅದಕ್ಕೆ ನೀಲಿಯ ಅಂಚು, ಅಂಚಿನಂತಹ ಬಣ್ಣದ್ದೇ ಬ್ಲೌಜು''- ಈರೀತಿಯ ವರ್ಣನೆಗಳು ಕಾದಂಬರಿಯಲ್ಲಿ ಅಲ್ಲಲ್ಲಿ ಕಾಣಸಿಗುತ್ತವೆ.

ಕಾದಂಬರಿಕಾರ್ತಿ ಉದ್ದಕ್ಕೂ ಉಪಮಾನದಲ್ಲೆ ಮಾತಾಡುತ್ತಿದ್ದಾರೆಯೋ ಅನ್ನಿಸುವಷ್ಟು ಉಪಮೆಗಳಿವೆ. ಅನುಪಮಾಳ ನಗು ''ಮಲ್ಲಿಗೆ ಹಂದರದಲ್ಲಿ ಹೂ ಅರಳಿದಂತೆ''. ಆನಂದ ಅನುಪಮಾಳನ್ನು ನೋಡಿದ್ದು''ಚಂದ್ರನನ್ನು ಶೀತಲವಾದ ಹುಣ್ಣಿಮೆಯ ರಾತ್ರಿಯಲ್ಲಿ ನೋಡಿದಂತೆ''. ಆನಂದನ ಮುಂದೆ ಅನುಪಮ. ''ಪರಿಮಳದ ಮೋಡವೊಂದು ಹಾಯ್ದು ಹೋದಂತೆ''

ಹೋದಳಂತೆ. "ಮಿಂಚಿನ ಬಳ್ಳಿಯೊಂದು ಹೊಳೆದಂತೆ" ಹೊಳೆದಳಂತೆ. ಮೇಷ್ಟ್ರು ಶಾಮಣ್ಣರಿಂದ ಮನೆಪಾಠಮುಗಿಸಿ ಹೊರಟ ವಿದ್ಯಾರ್ಥಿಗಳು "ಬೋನಿನಿಂದ ಪಾರಾದ ಇಲಿಗಳಂತೆ "ಓಡಿದರಂತೆ." ದಾಹದಿಂದ ಬಳಲುವ ಪಯಣಿಗ ತಂಪಾದ ನೀರನ್ನು ಅತ್ಯಾಸೆಯಿಂದ ಕುಡಿಯುವಂತೆ" ಆನಂದ ಅನುಪಮಾಳ ಸೌಂದರ್ಯವನ್ನು ಸವಿಯುತ್ತಾನೆ. ಕಾದಂಬರಿಯ ಉದ್ದಕ್ಕೂ ಇಂಥ ನೂರಾರು ಉಪಮೆಗಳಿವೆ. ಇವು ಅರ್ಥಪೋಷಣೆಗಾಗಿ ಬಳಕೆಯಾಗಿವೆಯೇ ಹೊರತು ಅಲಂಕಾರಕ್ಕಾಗಿ ಅಲ್ಲ.

ಮಹಾಶ್ವೇತೆ ಒಂದು ಸಾಮಾಜಿಕ ಕಾದಂಬರಿ. ಇಂದು ಸಮಾಜದಲ್ಲಿ ಎಷ್ಟೋ ಜನ ಮಹಾಶ್ವೇತೆಯರು ದುಃಖ ದುಮ್ಮಾನಗಳಲ್ಲಿ ಮುಳುಗಿರುವುದನ್ನು ಕಾಣುತ್ತೇವೆ. ಇವರೆಲ್ಲ ಅಳುವಂಜಿಗಳಾಗದೆ ನನ್ನ ಕಾದಂಬರಿಯ 'ಮಹಾಶ್ವೇತೆ' ಯಂತಾಗಬೇಕು ಎನ್ನುವುದು ಕಾದಂಬರಿಕಾರ್ತಿಯ ಉದ್ದೇಶವಿರುವಂತೆ ತೋರುತ್ತದೆ. ಇಂದು ಇದು ಅನಿವಾರ್ಯಕೂಡ.

ಸುಧಾಮೂರ್ತಿಯವರು ಕಂಪ್ಯೂಟರ್ ಕ್ಷೇತ್ರದಲ್ಲಿ ಅಂತರ ರಾಷ್ಟ್ರೀಯ ಕೀರ್ತಿ ಸಂಪಾದಿಸಿದ್ದಾರೆ. ನೊಂದವರ ಕಣ್ಣೀರೊರಸಲು ಕಂಕಣ ತೊಟ್ಟಿದ್ದಾರೆ. ಅವರ ಸಮಾಜ ಸೇವೆ ಅಪಾರ. ಕೊಡುಗೈದಾನಿಗಳೆಂದು ಪ್ರಸಿದ್ಧರಾಗಿದ್ದಾರೆ. ಬಿಡುವಿನ ವೇಳೆಯಲ್ಲಿ ಗಂಭೀರ ಸಾಹಿತ್ಯ ಕೃಷಿ ಪತಿಯ ಪ್ರೋತ್ಸಾಹ. ಆರು ಕಾದಂಬರಿಗಳು ಎರಡು ತಂತ್ರಜ್ಞಾನದ ಪುಸ್ತಕಗಳು ಈಗಾಗಲೇ ಪ್ರಕಟವಾಗಿವೆ.

ಮಹಾಶ್ವೇತೆ ಕಾದಂಬರಿ ಸರಳವಾಗಿ ಓದಿಸಿಕೊಳ್ಳುತ್ತದೆ. ಸಮಾಜ ಸುಧಾರಣೆಯು ಈ ಕಾದಂಬರಿ ಸಾರುವ ಸಂದೇಶ. ಅಲ್ಲೊಂದು ಇಲ್ಲೊಂದು ಕಾಣುವ ಮುದ್ರಣ ದೋಷಗಳನ್ನು ಹೊರತುಪಡಿಸಿದರೆ ಇದೊಂದು ಒಳ್ಳೆಯ ಕಾದಂಬರಿ ಎಂದು ಹೇಳಬಹುದು.

ಎಂ.ಎನ್.ಲಿಂಗಪ್ಪ
ಶ್ರೀ ಕುವೆಂಪು ಟ್ರಸ್ಟ್
ಮೈಸೂರು

ಪುಸ್ತಕ ವಿಮರ್ಶೆ

ಗೋಪಾಲಗೌಡ ಶಾಂತವೇರಿ : ಅಂತರಂಗ-ಬಹಿರಂಗ :-ಸಂ. ಡಾ॥ವಿಷ್ಣುಮೂರ್ತಿ . ಆಚಾರ್ಯ ಪ್ರಕಾಶನ: 'ಹೂಮನೆ' ಶ್ರೀನಿವಾಸನಗರ, ವಿದ್ಯಾಗಿರಿ ಧಾರವಾಡ-೫೮೦೦೦೪ ಪುಟಗಳು -XXIV+೧೬ + ೫೭೪ ; ನಿರ್ದೇಶ- ೩೫೦/ ರೂ

ಕರ್ನಾಟಕದ ಇತಿಹಾಸದಲಿ ಗೋಪಾಲಗೌಡರದು ದೊಡ್ಡ ಹೆಸರು. ಅವರು ಗೇಣಿದಾರರ ಮನೆಯಲ್ಲಿ ಹುಟ್ಟಿದ್ದರಿಂದಲೋ ಏನೋ. ಚಿಕ್ಕಂದಿನಲ್ಲಿಯೇ ಒಡೆಯರ ಸಮಸ್ಯೆಗಳನ್ನು ಕುರಿತು ಆಲೋಚಿಸುತ್ತಾರೆ. ಸಿರಿವಂತರಿಂದ ಗೇಣಿದಾರರಿಗೆ ಆಗುತ್ತಿದ್ದ ಕಿರುಕುಳವನ್ನು ಕಂಡು ಸ್ಪಂದಿಸುತ್ತಾರೆ. ಇಂಟರ್‌ಮೀಡಿಯೆಟ್ ತರಗತಿಯಲ್ಲಿ

ಓದುತ್ತಿದ್ದಾಗ ತಮ್ಮ ಸುತ್ತಮುತ್ತಲಿನ ರಾಜಕೀಯ ಪರಿಸರವನ್ನು ನೋಡಿ, ಬಡವರ ಸಹಾಯಕ್ಕೆ ಒದಗದ ಓದು ನಿಷ್ಪ್ರಯೋಜನ ವೆಂದು ತಿಳಿದು ಕಾಲೇಜು ವ್ಯಾಸಂಗಕ್ಕೆ ನಮಸ್ಕಾರ ಹಾಕುತ್ತಾರೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಾರೆ. ಕಾಂಗ್ರೆಸ್ ಪಕ್ಷದ ಧ್ಯೇಯಧೋರಣೆಗಳು ಅವರಿಗೆ ಹಿಡಿಸುವುದಿಲ್ಲ. ಅದು ಬಂಡವಾಳಶಾಹಿ ಪಕ್ಷಪಾತಿಯೆಂಬುದು ಅವರ ನಂಬಿಕೆ.

ಕಾಗೋಡು ತೀರ್ಥಹಳ್ಳಿ ತಾಲ್ಲೋಕಿನ ಒಂದು ಊರು ಅಲ್ಲಿಯ ಒಂದೆರಡು ಕುಳಗಳನ್ನು ಬಿಟ್ಟರೆ ಉಳಿದವ ರೆಲ್ಲರೂ ಗೇಣಿದಾರರು. ಆ ಗೇಣಿದಾರರ ಸಂಕಟವನ್ನು ಮನಗಂಡ ಕೆಲವು ನಾಯಕರು ಅವರ ಪರವಾಗಿ ಸತ್ಯಾಗ್ರಹ ಹೂಡುತ್ತಾರೆ. ಆ ಸತ್ಯಾಗ್ರಹದ ಪ್ರಭಾವ ಉತ್ತರ ಇಂಡಿಯಾಕ್ಕೂ ಹಬ್ಬುತ್ತದೆ. ಆಗ ಸಮಾಜವಾದಿ ಲೋಹಿಯಾ ಅವರು ಕಾಗೋಡಿಗೆ ಬಂದಿಳಿದು ಸತ್ಯಾಗ್ರಹದಲ್ಲಿ ಭಾಗವಹಿಸುತ್ತಾರೆ. ಅಲ್ಲಿಂದ ಗೋಪಾಲ ಗೌಡರು ರಾಷ್ಟ್ರೀಯ ಸಮಾಜವಾದಿ ನಾಯಕರಾಗುತ್ತಾರೆ.

ಗೋಪಾಲಗೌಡರು ಎರಡು ಸಲ ಶಾಸನಸಭೆಯನ್ನು ಸೇರಿ ತಮ್ಮ ಸಿಂಹ ವಾಣಿಯಿಂದ ಆಡಳಿತ ಪಕ್ಷವನ್ನು ಸರಿಯಾದ ದಾರಿಗೆ ತರಲು ಪ್ರಯತ್ನಿಸುತ್ತಾರೆ. ಶ್ರೀಮಂತರ ಪರವಾದ ಆಡಳಿತ ಪಕ್ಷದ ನೀತಿಯನ್ನು ಖಂಡತುಂಡವಾಗಿ ಟೀಕಿಸುತ್ತಾರೆ. ಅವರು ಶ್ರೇಷ್ಠ ವಾಗ್ಮಿಗಳಾದ್ದರಿಂದ, ಅವರ ಭಾಷಣ ಕಾಲದಲ್ಲಿ ಎಲ್ಲ ಪಕ್ಷದವರೂ ಹಾಜರಿರುತ್ತಾರೆ. ಎಂದೂ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಲಿಲ್ಲ. ಮೂರು ಹೊತ್ತು ಬಡವರದೇ ಯೋಚನೆ.

ಗೋಪಾಲಗೌಡರು ಮೊದಲಿಂದ ಕೊನೆಯ ತನಕ ಬಡವರಾಗಿಯೇ ಉಳಿಯುತ್ತಾರೆ. ಆಗಿನ ಸರ್ಕಾರ ಅವರಿಗೆ ೬ ಎಕರೆ ಗದ್ದೆ ಜಮೀನು ಕೊಡಲು ಮುಂದಾದಾಗ ಅದನ್ನು ಬಡವರಿಗೆ ಹಂಚಿ ಬಿಡಿ ಎಂದು ಹೇಳಿ ಬಿಡುತ್ತಾರೆ. ಅಹರ್ನಿಶಿ ಕಾಲಕ್ಷೇಪ ಮಾಡಲೂ ಸಹ ಅವರಲ್ಲಿ ಕಾಸಿಲ್ಲ. ಆ ಬಗ್ಗೆ ಅವರೆಂದೂ ಯಾಚಿಸಿದವರಲ್ಲ. ಅವರ ಸ್ಥಿತಿಗತಿಗಳನ್ನು ಕಂಡ ಜನ ಆಗಾಗ್ಗೆ ಹಣ ಕೊಡುತ್ತಿದ್ದುದುಂಟು. ಯಾರಾದರೂ ಬಂದು ಯಾಚಿಸಿದ್ದಾದರೆ ಅದನ್ನೂ ಸಹ ಕೊಟ್ಟು ಬಿಡುತ್ತಿದ್ದರು.

ಕರ್ನಾಟಕದಲ್ಲಿ ಸಮಾಜವಾದ ನೆಲೆಯಾಗಿ ಬೇರೂರಲು ಗೋಪಾಲಗೌಡರೇ ಕಾರಣ. ಅವರು ನಾಯಕರ ನಾಯಕರು. ಜೆ.ಹೆಚ್. ಪಟೇಲ್, ಕೋಣಂದೂರು ಲಿಂಗಪ್ಪನವರಂತಹ ಮೊದಲಾದ ನಾಯಕರನ್ನು ಸೃಷ್ಟಿಸಿದ ಮಹಾಶಯರು. ಕನ್ನಡದ ಬಗ್ಗೆ ಕರ್ನಾಟಕದ ಬಗ್ಗೆ ಅವರಿಗೆ ತೀವ್ರವಾದ ಆಸಕ್ತಿ. ತಮ್ಮ ಕಾಲದ ಬೇಂದ್ರೆ, ಕುವೆಂಪು, ಅಡಿಗ ಮೊದಲಾದವರ ಎಲ್ಲಾ ಕಾವ್ಯಗಳನ್ನು ಓದಿಕೊಂಡಿದ್ದರು. ಇವರಿಗೆ ಸಾಹಿತ್ಯದಲ್ಲಿ ಅಪಾರವಾದ ಆಸಕ್ತಿ. ಕರ್ನಾಟಕ ಏಕೀಕರಣದಲ್ಲಿ ಅವರು ವಹಿಸಿದ ಪಾತ್ರ ಮಹತ್ತರವಾದುದು. ಅಂತಹ ಮಹನೀಯರು ಕರ್ನಾಟಕಕ್ಕೆ ಮಾಡಿದ ಸೇವೆ ಮರೆತು ಹೋಗದಂತೆ ರಕ್ಷಿಸಬೇಕಾದದ್ದು ಎಲ್ಲರ ಕರ್ತವ್ಯ. ಈ ದೃಷ್ಟಿಯಿಂದ ಡಾ॥ವಿಷ್ಣುಮೂರ್ತಿ ಯವರು ಕೈಕೊಂಡಿರುವ ಯೋಜನೆ ಬಹಳ ಮೌಲಿಕವಾದುದು. ವಿಷ್ಣುಮೂರ್ತಿ

ಯವರು ವೃತ್ತಿಯಿಂದ ಶಸ್ತ್ರವೈದ್ಯರು. ಪ್ರವೃತ್ತಿಯಿಂದ ಸಾಹಿತಿಗಳು. ಗೋಪಾಲಗೌಡರ ಕೊನೆಗಾಲದಲ್ಲಿ ವಿಷ್ಣುಮೂರ್ತಿಯವರು ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಗೋಪಾಲಗೌಡರ ಗರಡಿಯಲ್ಲಿ ಬೆಳೆದ ಅವರು ಎಂದಿಗೂ ಅವರನ್ನು ಮರೆಯುವುದಿಲ್ಲ. ಅವರು ತೀರಿಕೊಂಡ ನಂತರ ಕಟ್ಟಿದ ಆಸ್ಪತ್ರೆಗೆ ಗೋಪಾಲಗೌಡರ ಹೆಸರನ್ನು ಇಟ್ಟು ಅವರ ಹೆಸರನ್ನು ಚಿರಸ್ಥಾಯಿಗೊಳಿಸಿದ ಕೃತಜ್ಞರವರು. ಅಷ್ಟೇ ಅಲ್ಲ ಪ್ರಸ್ತುತ ಗ್ರಂಥವನ್ನು ಸಂಪಾದಿಸಿ ಮುಂದಿನ ಜನಾಂಗದಲ್ಲಿ ಗೋಪಾಲಗೌಡರ ನೆನಪು ನಿಲ್ಲುವಂತೆ ಮಾಡಿದ್ದಾರೆ.

ಈ ಹೊತ್ತಿಗೆಯಲ್ಲಿ ಡೈರಿಗಳು, ಪತ್ರಗಳು, ಅಭಿವ್ಯಕ್ತಿಗಳು, ಪರಿಪತ್ರಗಳು ಮತ್ತು ಗೋಪಾಲಗೌಡ ಶಾಂತವೇರಿ ನೆನಪುಗಳು ಎಂದು ಐದು ಭಾಗಗಳು ಇವೆ. ಗೋಪಾಲಗೌಡರ ಭಾವ ಭಾವನೆಗಳು ಓದುಗರಿಗೆ ಈ ಡೈರಿಗಳಿಂದ ಗೊತ್ತಾಗುತ್ತದೆ. ೧೯೬೦,೧೯೬೧, ೧೯೬೨,೧೯೬೩,೧೯೬೪ ಮತ್ತು ೧೯೭೧ ಈ ವರ್ಷಗಳಲ್ಲಿ ಬರೆದ ದಿನಚರಿ ೧೫೦ ಪುಟಗಳಷ್ಟಿದೆ. ತಮ್ಮ ಸ್ನೇಹಿತರ, ಬಂಧುಗಳ ಕ್ಷೇಮ, ಅವರ ಬದುಕು, ಸಾಧನೆ ಬಗ್ಗೆ ಎಷ್ಟು ಆಸಕ್ತಿ ಹೊಂದಿದ್ದಾರೆಂಬುದು ಈ ದಿನಚರಿಗಳಿಂದ ತಿಳಿಯುತ್ತದೆ. ಬೆಳಗಿನಿಂದ ರಾತ್ರಿ ಮಲಗುವವರೆಗೂ ಪರರ ಬಗೆಗಿನ ಚಿಂತನೆ. ಹಳ್ಳಿಯ ಮುಗ್ಧ ಜನರ ಬಗ್ಗೆ ಇವರಿಗಿರುವ ಅಪಾರ ಕಾಳಜಿ ಕಂಡು ಬರುತ್ತದೆ. ತಮಗೆ ಸರಿ ಎನಿಸಿದ ವಿಷಯದ ಬಗ್ಗೆ ಸ್ನೇಹಿತರೊಂದಿಗೆ ಚರ್ಚಿಸಿ ನಂತರ ಪತ್ರಿಕೆಗಳಿಗೆ ಅಚ್ಚು ಹಾಕಲು ಹೇಳುತ್ತಿದ್ದರು. ತಾವು ಕೈಗಡದ ಮೂಲಕ ಪಡೆಯುತ್ತಿದ್ದ ಹಣವನ್ನು ಆದಷ್ಟು ಬೇಗ ಹಿಂದಿರುಗಿಸುತ್ತಿದ್ದುದಾಗಿ ತಿಳಿಯುತ್ತದೆ. ತಾವು ದಿನವಹಿ ಮಾಡಬೇಕಾದ ಕೆಲಸಗಳ ಬಗ್ಗೆ ನಡಸುತ್ತಿದ್ದ ಆಲೋಚನೆಯ ಜಾಡು ಸಹ ಇಲ್ಲಿ ಸಿಗುತ್ತದೆ. ಇವರು ಕಟ್ಟಾ ಸಮಾಜವಾದಿ. ರಾಜ್ಯದ ಅನೇಕ ಕಡೆಗಳಲ್ಲಿ ಸಭೆಗಳನ್ನು ನಡೆಸಿ ಅಂದಿನ ಸಮಾಜ ವ್ಯವಸ್ಥೆಯ ಬಗ್ಗೆ, ರೈತರ ಶೋಷಣೆಯ ಬಗ್ಗೆ ಮುಕ್ತವಾಗಿ ಭಾಷಣ ಮಾಡುತ್ತಿದ್ದರು. ತಮ್ಮ ತಾಯಿಯನ್ನು ಕಂಡರೆ ಅವರಿಗೆ ತುಂಬ ಅಕ್ಕರೆ. ಒಟ್ಟಾರೆ ನಾವು ಡೈರಿಯನ್ನು ಓದಿದಾಗ ಸ್ವಂತದವರಿಗಿಂತ ಹೊರಗಿನವರ ಬಗ್ಗೆಯೇ ಅವರಿಗೆ ಹೆಚ್ಚಿನ ಕಾಳಜಿ ಇತ್ತು ಎಂಬುದನ್ನು ಮನಗಾಣಬಹುದು.

ಮುಂದಿನ ಭಾಗದಲ್ಲಿ ಗೋಪಾಲಗೌಡರ ಪತ್ರವ್ಯವಹಾರಗಳ ರಾಶಿಯಲ್ಲಿ ಪತ್ರಗಳು ಎರಡು ರೀತಿಯವು : ಇಂದ, ಗೆ ಎಂಬುವು. ೧೭೫ ಪತ್ರಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಈ ಪತ್ರಗಳಲ್ಲೆಲ್ಲಾ ಜನತೆಗೆ ಸಂಬಂಧಪಟ್ಟ ಕಷ್ಟಸುಖದ ವಿಷಯವೇ ಇರುವುದನ್ನು ಕಾಣಬಹುದು, ಇವರು ವಿಧಾನ ಸಭಾ ಸದಸ್ಯರಾಗಿ ಆಯ್ಕೆಯಾದ ನಂತರ ಸ್ನೇಹಿತರಿಂದ, ಹಿತೈಷಿಗಳಿಂದ ಬಂದ ಪತ್ರಗಳೇ ಹೆಚ್ಚು. ನಿದರ್ಶನಾರ್ಥವಾಗಿ ಮಲೆನಾಡಿನ ಕಷ್ಟಕಾರ್ಪಣ್ಯಗಳ ಬಗ್ಗೆ ಶ್ರೀಮಾನ್ ಸಾರಂಗದ ತಿಮ್ಮಪ್ಪಯ್ಯನವರು ಬರೆದ ಪತ್ರಕ್ಕೆ ಉತ್ತರವಾಗಿ ೨೧.೮.೧೯೬೨ ರಂದು ಬರೆದ ಒಂದು ಪತ್ರದ ಪ್ರತಿಯಲ್ಲಿ ದಾಖಲಿಸಲಾಗಿದೆ.

ನಿಮ್ಮ ದಿನಾಂಕ ೧೬.೮.೬೨ ರ ಪತ್ರ

ತಲ್ಪಿ ಬಹಳ ಸಂತೋಷವಾಯಿತು. ಧನ್ಯವಾದಗಳು ನಾನು ದೆಹಲಿಯಿಂದ ಇಂದೇ ಬೆಳಗ್ಗೆ ಇಲ್ಲಿಗೆ ಬಂದೆ. ನಿಮ್ಮ ಪತ್ರವೂ ಇಂದೇ ಕೈ ಸೇರಿತು. ನಾನು ಚುನಾವಣಾ ನಂತರ ಎರಡು ಮೂರು ಬಾರಿ ಹೊಸನಗರಕ್ಕೆ ಬಂದಿದ್ದೆ. ಆದರೆ ಕ್ಷೇತ್ರದ ಉದ್ದಗಲಕ್ಕೂ ಸಂಚಾರಮಾಡಿ ಎಲ್ಲ ಕಡೆಗೂ ಭೇಟಿ ಕೊಟ್ಟು ಕ್ಷೇತ್ರದ ಮಾನ್ಯ ಮತದಾರರುಗಳನ್ನು ಕ್ರಮವಾಗಿ ಕಂಡು ಮಾತನಾಡಿ ಅವರ ಕುಂದು ಕೊರತೆಗಳನ್ನು ತಿಳಿದುಕೊಳ್ಳಲು ಇದುವರೆಗೂ ಸಾಧ್ಯವಾಗದಿರುವುದಕ್ಕಾಗಿ ನಾನು ತುಂಬಾ ವಿಷಾದಿಸುತ್ತೇನೆ. ನಿಮಗೆಲ್ಲಾ ತಿಳಿದಿರುವಂತೆ, ಚುನಾವಣೆ ಮುಗಿಯುತ್ತಲೇ ಕಾಹಿಲೆ ಬಿದ್ದು ಎರಡು ತಿಂಗಳ ಕಾಲ ಹಾಸಿಗೆ ಹಿಡಿಯಬೇಕಾಯಿತು. ನಂತರ ಪಾರ್ಟಿಯ ಸಮ್ಮೇಳದ ಮತ್ತು ಇತರ ಕೆಲಸಗಳಿಗಾಗಿ ಘೋರಖಪುರ ಇತ್ಯಾದಿ ಸ್ಥಳಗಳಿಗೆ ಹೋಗಿ ಬಂದೆ. ಮಧ್ಯೆ ವಿಧಾನ ಸಭೆಯವರು ನನ್ನನ್ನು ಸಭೆಯಿಂದ ಹೊರಗೆ ಹಾಕಿದ ಕಾರಣ ಅನೇಕ ತೊಂದರೆಗಳಾದವು. ಅಷ್ಟರಲ್ಲಿಯೇ ಮಳೆಗಾಲವೂ ಆರಂಭವಾಯಿತು. ಹೀಗೆ ನಾನಾ ಕಾರಣಗಳಿಂದಾಗಿ ಇನ್ನೂ ಕ್ರಮವಾದ ಪ್ರವಾಸ ಒಂದನ್ನು ಕ್ಷೇತ್ರದಲ್ಲಿ ಕೈಗೊಳ್ಳಲು ಆಗಿರುವುದಿಲ್ಲ. ನೀವೆಲ್ಲರೂ ನನ್ನ ಬಗೆಗೆ ಅಸಮಾಧಾನ ಹೊಂದಿದ್ದರೆ ಅದು ಸಹಜವೇ ಆಗಿದೆ. ಆದರೆ, ನಾನು ಎಲ್ಲೇ ಇರಲಿ ಹೇಗೇ ಇರಲಿ ಕ್ಷೇತ್ರವನ್ನು ಮತ್ತು ಮತದಾರರನ್ನು ಅದರಲ್ಲೂ ಮಲೆನಾಡಿನ ಮುಗ್ಧ ಜನತೆಯನ್ನು ಎಂದೂ ಮರೆಯುವುದಿಲ್ಲ. ಅವರನ್ನು ಮರೆಯುವುದು ನನ್ನ ಹೆತ್ತ ತಾಯಿಯನ್ನು ಮರೆಯುವುದು ಎರಡೂ ಒಂದೇ. ಆದುದರಿಂದ, ನೀವು ಯಾರೂ ನನ್ನ ಬಗೆಗೆ ತಪ್ಪು ಅಭಿಪ್ರಾಯವನ್ನು ಹೊಂದುವುದು ಬೇಡ ಮತ್ತು ನಿಮ್ಮ ಕ್ಷೇತ್ರದವರೇ ಆಗಿದ್ದು, ಮಲೆನಾಡಿನಲ್ಲಿ ಹುಟ್ಟಿ ಬೆಳೆದ ನನಗೆ ಅಲ್ಲಿಯ ಜನಜೀವನದಲ್ಲಿ ಕಂಡು ಬರುವ ಕಷ್ಟ-ಕಾರ್ಪಣ್ಯಗಳು ತೊಂದರೆ ತಾಪತ್ರಯಗಳು, ಮುಳುಗಡೆಯುವರ ಸಮಸ್ಯೆಗಳು ಇತ್ಯಾದಿಗಳೆಲ್ಲವೂ ತಿಳಿದೇ ಇವೆ. ಅಂತಹ ಸಮಸ್ಯೆಗಳ ಪರಿಹಾರಕ್ಕಾಗಿ ಸರಕಾರದಿಂದ ಏನೇನು ಆಗಬೇಕು ಅದನ್ನೆಲ್ಲಾ ಅವರಿಂದ ಮಾಡಿಸಲು ಸದಾ ಒತ್ತಾಯ ಮಾಡುತ್ತಲೇ ಇರುತ್ತೇನೆ. ಎಷ್ಟು ಮಾಡಿದರೂ, ನೀವೆಲ್ಲರೂ ನನ್ನನ್ನೇ ಆರಿಸಿ ಕಳಿಸಿದ ಉಪಕಾರಕ್ಕೆ ಕಡಿಮೆಯೇ ಇದು ಎಂದೂ ತೀರದ ಋಣವೆಂದೇ ನನ್ನ ಭಾವನೆ. ಆದುದರಿಂದ ಕಾಯಾ, ವಾಚಾ ಮತ್ತು ಮನಸಾ ನಾನು ನಿಮ್ಮ ಸೇವೆಯನ್ನು ಮಾಡಿ ಕೃತಾರ್ಥನಾಗಬೇಕೆಂಬುದೇ ನನ್ನ ಅಭಿಲಾಷೆ

ಈಗ ಮಳೆಗಾಲ. ಹಳ್ಳಿಗಳಿಗೆ ಭೇಟಿ ಕೊಡುವುದು, ಸಭೆ ಸೇರಿಸುವುದು ಮಲೆನಾಡಿನಲ್ಲಿ ಕಷ್ಟಸಾಧ್ಯ. ನಾನು ಈ ತಿಂಗಳು ೩೦ ರಿಂದ ಮುಂದಿನ ತಿಂಗಳು ೬ರ ತನಕ ಸಾಗರ, ಹೊಸನಗರ, ತೀರ್ಥಹಳ್ಳಿ ಇತ್ಯಾದಿ ಸ್ಥಳಗಳಲ್ಲಿ ಸಂಚರಿಸಲಿದ್ದೇನೆ. ದಿನಾಂಕ ೩೦ ರಂದು ಸಾಗರದಲ್ಲಿ ನಡೆಯಲಿರುವ ಮುಳುಗಡೆಯವರ ಸಭೆಯೊಂದರರಲ್ಲಿ ಭಾಗವಹಿಸಲಿದ್ದೇನೆ. ಹೊಸನಗರಕ್ಕೆ ಯಾವತ್ತು ಬರುತ್ತೇನೆಂದು ಈಗಲೇ ತಿಳಿಸುವುದು ಕಷ್ಟವಾಗಿದೆ. ಈ ಬಾರಿ ಭೇಟಿಯಲ್ಲೂ ಎಲ್ಲಾ ಹಳ್ಳಿಗಳಿಗೂ ಹೋಗಿ ಬರುವುದು ಅಸಾಧ್ಯವೆಂದು ಕಾಣುತ್ತೆ. ಆದುದರಿಂದ ನೀವು ಇನ್ನೂ ಕೆಲವು ದಿನಗಳ ವರೆಗೆ, ಎಂದರೆ

ಮಲೆ ಸ್ವಲ್ಪ ಹಿಂದಾಗುವ ತನಕ, ದಯವಿಟ್ಟು ಸಾವಧಾನದಿಂದ ಇರಬೇಕೆಂದು ಅತ್ಯಂತ ವಿನಯದಿಂದ ಕೇಳಿಕೊಳ್ಳುತ್ತೇನೆ. ಮತ್ತು ನಿಮ್ಮ ಭಾಗದಲ್ಲಿ ಏನಾದರೂ ತುರ್ತು ಆಗಬೇಕಾಗಿರುವ ಸಾರ್ವಜನಿಕ ಕೆಲಸವೇನಾದರೂ ಇದ್ದಲ್ಲಿ ನನಗೆ ಬರೆದು ತಿಳಿಸಿದಲ್ಲಿ ಅದನ್ನು ಮನ ಮುಟ್ಟಿ ಮಾಡಲು ಪ್ರಯತ್ನಿಸುತ್ತೇನೆ.

ಈ ಪತ್ರದಿಂದ ಮಲೆನಾಡಿನ ಜನರ ಬಗ್ಗೆ ಇದ್ದ ಅಪಾರವಾದ ಗೌರವ, ಕಾಳಜಿ ವ್ಯಕ್ತವಾಗಿರುವುದನ್ನು ಕಾಣಬಹುದು. ಇವರು ವಿಧಾನಸಭಾ ಸದಸ್ಯರಾದ ಮೇಲೆ ಬಂದ ಅನೇಕ ಅಭಿನಂದನಾ ಪತ್ರಗಳನ್ನು ಈ ಭಾಗದಲ್ಲಿ ಕಾಣಬಹುದು. ತಮ್ಮ ಮನೆಯವರ ಯೋಗಕ್ಷೇಮದ ಬಗ್ಗೆ ತಮ್ಮ ಸ್ನೇಹಿತರಿಗೆ ಪತ್ರ ಬರೆದು ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು.

ಸಂಚಾರಿ ಜನಾಂಗದ ವಿದ್ಯಾರ್ಥಿ ವೇತನದ ಬಗ್ಗೆ, ಸೈನ್ಯಕ್ಕೆ ಸೇರಲು ಶಿಫಾರಸ್ಸಿನ ಬಗ್ಗೆ, ವರ್ಗಾವಣೆ ಬಗ್ಗೆ, ಜಮೀನಿಲ್ಲದವರಿಗೆ ಜಮೀನು ಕೊಡಿಸುವ ಬಗ್ಗೆ, ಹೀಗೆ ಒಂದಲ್ಲ ಅನೇಕ ಸಹಾಯಗಳನ್ನು ಕೋರಿ ಬರುತ್ತಿದ್ದ ಪತ್ರಗಳು ಅನೇಕ. ಅವೆಲ್ಲವುಗಳಿಗೆ ತಮ್ಮ ಕೈಲಾದ ಸಹಾಯವನ್ನು ನೀಡುತ್ತಿದ್ದರು. ಅಲ್ಲದೆ ಸರ್ವೀಸ್ ಆಗದವರಿಗೆ ವರ್ಗಾವಣೆ ಮಾಡಿಕೊಡುವ, ಮ್ಯುಚಿಯಲ್ ವರ್ಗದ ಬಗ್ಗೆ ಒಪ್ಪಂದ ಮಾಡಿಕೊಂಡ ಅಧಿಕಾರಿಗಳ ವಿರುದ್ಧ, ಲಂಚಕೋರ ಸರ್ಕಾರದ ವಿರುದ್ಧ ತಿರುಗಿ ಬೀಳುತ್ತಿದ್ದರು. ಎಲ್ಲ ಜನತೆಗೂ ಸತ್ಯವಾಗಿ , ನ್ಯಾಯವಾಗಿ ಆಗಬೇಕಾದ ಕೆಲಸಗಳನ್ನು ಮಾಡಬೇಕು ಎಂಬುದು ಇವರ ನಿಲುವಾಗಿತ್ತು. ಇವೆಲ್ಲವುಗಳ ಮಧ್ಯೆಯೂ ಇವರಿಗೆ ಸಾಹಿತ್ಯದಲ್ಲಿ ಅಪಾರವಾದ ಆಸಕ್ತಿ. ಯಾರಾದರೂ ಪುಸ್ತಕಗಳನ್ನು ಬರೆದಾಗ ಅಥವಾ ಬೇರೆ ಭಾಷೆಯಿಂದ ಅನುವಾದಿಸಿದಾಗ ಅದರ ಪ್ರಕಾಶನದ ಬಗ್ಗೆ ಇವರ ನೆರವು ಪಡೆಯುತ್ತಿದ್ದರು.

ಯು.ಆರ್.ಅನಂತಮೂರ್ತಿಯವರು ಇವರಿಗೆ ಬರೆದ ಪತ್ರದಲ್ಲಿ ತಮಗೆ ಇಂಗ್ಲೆಂಡಿನಲ್ಲಿ ಆದ ಒಂದು ಅನುಭವದ ಬಗ್ಗೆ ಬರೆಯುತ್ತಾರೆ. ಆಗ ಅಲ್ಲಿನ ಜನರು ಅವರಿಗೆ ಕೇಳಿದ ಮಾತುಗಳನ್ನು ಆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ''ಇಂಗ್ಲೀಷ್ ಜನರೆ ನನ್ನನ್ನು ಕಂಡು ಕೇಳುತ್ತಾರೆ ; ನಿಮಗೆ ನಾಚಿಕೆಯಿಲ್ಲವೇ ? ನಿಮ್ಮದೇ ಆದ ಒಂದು ಭಾಷೆಯಲ್ಲಿ ನೀವು ಬದುಕುವುದು ಬೇಡವೆ- ಅಂತ. ನಮ್ಮ ಇಂಗ್ಲೀಷಿಗೆ ವಿಪರೀತ ಪುಸ್ತಕದ ವಾಸನೆ ಡಿಕ್ಷನರಿಯಿಂದ ನೇರವಾಗಿ ಎದ್ದು ಬಂದಂತೆ ಕಾಣುತ್ತದೆ'' ಎಂದು ಇದರಿಂದ ಇಂಗ್ಲೆಂಡಿನ ಪ್ರತಿಯೊಬ್ಬರಿಗೂ ತಮ್ಮದೇ ಆದ ಭಾಷೆಯ ಬಗ್ಗೆ ಎಷ್ಟು ಅಭಿಮಾನವಿರುತ್ತದೆ ಎಂಬುದನ್ನು ತಿಳಿಯಬಹುದು. ಮುಂದುವರಿದು ತಮ್ಮ, ಪತ್ರದಲ್ಲಿ ''ನನ್ನ ಅನುಭವದಲ್ಲಿ ನಿಮಗಿಂತ ದೊಡ್ಡ ರಾಜಕಾರಣಿಯನ್ನು ಸಭ್ಯನಾದ ಸುಸಂಸ್ಕೃತ'ನಾದ ಪ್ರತಿಭಾಶಾಲಿಯನ್ನು ನಾನು ಕಂಡಿಲ್ಲ. ವ್ಯವಸ್ಥಿತವಾದ ಜೀವನದಿಂದ ನೀವು ದೊಡ್ಡದನ್ನು ಸಾಧಿಸುತ್ತೀರೆಂದು ನನ್ನ ನಂಬಿಕೆ'' ಎಂದು ಉಲ್ಲೇಖಿಸಿದ್ದಾರೆ. ನಂತರ ಅಖಿಲ್ ಭಾರತೀಯ್ ಅಂಗ್ರೇಜೀ ಹಟಾಬ ಸಮ್ಮೇಲನ್‌ದ ವಿಷಯದ ಬಗ್ಗೆ ಸ್ವಯದ್ ಭದ್ರಿ ವಿಶಾಲ್ ರವರು ಬರೆದ ಒಂದು ಪತ್ರವನ್ನು ಕಾಣಬಹುದು.

ಜೆ.ಎಚ್.ಪಟೇಲ ಮತ್ತು ನಿಜಲಿಂಗಪ್ಪನವರಿಗೆ ಗೋಪಾಲಗೌಡರಲ್ಲಿ ಅಪಾರವಾದ ವಿಶ್ವಾಸ. ಯಜ್ಞೇಶ್ವರ ಐತಾಳ ಎಂಬುವರಿಗೂ ಇವರನ್ನು ಕಂಡರೆ ತುಂಬ ಗೌರವ. ಅವರು ಬರೆದ ಒಂದು ಪತ್ರದಲ್ಲಿ ಸೈನ್ಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾರೆ. ''ಯುದ್ಧ ಸಮಯದಲ್ಲಿ ಸಾಯುವುದು, ತರಬೇತಿಯ ಕಾಲದ ಕಷ್ಟ ಇವೆರೆಡನ್ನೂ ಮರೆತರೆ ಸೇನೆ ಕೆಲಸ ಬಹಳ ಸುಲಭವೆಂದು ನನಗನ್ನಿಸುತ್ತದೆ'' ಎಂದು ತಮ್ಮ ಪತ್ರದಲ್ಲಿ ಬರೆದಿದ್ದಾರೆ.

ನಂತರ ಗೋಪಾಲಗೌಡರ ಸೇವಕನಾದ ಕರಿಯಭಂಡಾರಿಯು ತಾನು ಒಂದು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿ ಕೊಂಡದ್ದನ್ನು ತಿಳಿಸಿದ್ದಾರೆ. ಅದರಲ್ಲಿ ಖೂನಿ ಕೇಸಿನಲ್ಲಿ ತನಗೆ ತೊಂದರೆಯಾಗಬಾರದೆಂಬ ಮುಗ್ಧ ಗೊಲ್ಲನ ಬೇಡಿಕೆಯೇ ಆ ಪತ್ರದ ಸಾರಾಂಶ.

ಗೋಪಾಲಗೌಡರು ತಮ್ಮ ಸ್ನೇಹಿತರಾದ ಯಜ್ಞೇಶ್ವರ ಐತಾಳರಿಗೆ ಬರೆದ ಪತ್ರದಲ್ಲಿ''ವಾಸ್ತವಿಕ ದೈನಂದಿನ ಜೀವನದಲ್ಲಿ ತನ್ನತನದ ಮೇಲ್ಮೆಗೆ ಸಾಧಕವೂ ಪಗತನದ ಪತನಕ್ಕೆ ಕಾರಣವಲ್ಲದವೂ ಆದ ಮಾರ್ಗಗಳೇ ಹಿತ ಮತ್ತು ಸರ್ವವಿಧಿತ '' ಎಂಬ ಮಾತುಗಳನ್ನು ಹೇಳಿರುವುದನ್ನು ಕಾಣಬಹುದು. ಕನ್ನಡಿಗರಿಗೆ ಆಗುತ್ತಿರುವ ಹಿಂಸೆ, ಅನ್ಯಾಯಗಳ ಬಗ್ಗೆ ನ್ಯಾಯ ದೊರಕಿಸಿ ಕೊಡಲು ಗೋಪಾಲಗೌಡರು ಸರಿಯಾದ ವ್ಯಕ್ತಿ ಎಂದರಿತುಕೊಂಡಿದ್ದ ಯು. ಪುಟ್ಟಸ್ವಾಮಿಯವರು ತಾವು ಬರೆದ ಒಂದು ಪತ್ರದಲ್ಲಿ'ಅಲ್ಪ ಸಂಖ್ಯಾತ ಕನ್ನಡಿಗರಿಗೆ ಎಲ್ಲಿಯೂ ನ್ಯಾಯವೇ ಇಲ್ಲವಾಗಿರುತ್ತೆ. ತಾವಾದರೂ ಅಸೆಂಬ್ಲಿಯಲ್ಲಿ ಪ್ರಶ್ನೆ ತೆಗೆದುಕೊಂಡು ಆದಷ್ಟು ಬೇಗ ಕಾಪಾಡುತ್ತಾರೆಂಬ ಭರವಸೆಯಿಂದ ಇವರಿಗೆ ಪತ್ರ ಬರೆದಿರುವುದನ್ನು ನೋಡಬಹುದು.

ಮುಂದಿನ ಭಾಗ ಅಭಿವ್ಯಕ್ತಿಗಳ. ಗೋಪಾಲಗೌಡರು ಜನರ ಹಿಕ್ಕಾಗಿ ಮಾಡಿದ ಭಾಷಣಗಳು ಪತ್ರಿಕೆಯಲ್ಲಿ ಮುದ್ರಿತವಾಗಿವೆ. ದೊಡ್ಡಬಳ್ಳಾಪುರದಲ್ಲಿ ಜನಜಾಗೃತಿ ಸಂಘದಲ್ಲಿ, ಮಾಡಿದ ಭಾಷಣದಲ್ಲಿ ''ದರೋಡೆಯನ್ನೇ ಧರ್ಮವನ್ನಾಗಿಸಿ ಕೊಂಡಿರುವ ವ್ಯವಸ್ಥೆಯು ದಳ್ಳಾಳಿಗಳ ದಯೆಯ ಮೇಲೆ ನಾವು ಬದುಕಬೇಕು ''ಎಂಬ ಅವರ ಮಾತಿನಲ್ಲಿ ಯಥಾರ್ಥತೆ ಇದೆ. ಜನಜಾಗೃತಿ ಸಂಘದಂತಹ ಸಂಸ್ಥೆಗಳು ನಾಡಿನ ಜನತೆಯನ್ನು ಎಚ್ಚರಿಸಬೇಕು. ಮುಖ್ಯವಾಗಿ ರೈತನ ಅಭಿವೃದ್ಧಿಯಾಗಬೇಕು. ಉಳುವವನೇ ಹೊಲದ ಮಾಲೀಕನಾಗಬೇಕು ಎಂಬುದು ಅವರ ಅಭಿಪ್ರಾಯ. ಕಾಗೋಡು ಹೋರಾಟದಲ್ಲಿ ಇವರ ಪಾತ್ರ, ಪ್ರಮುಖವಾದುದು. 'ನಾನು ಈಗ ಹೀಗೆ ಆಗಿದ್ದರೆ, ಹಾಗೆ ಆಗುವಲ್ಲಿ ಕಾಗೋಡಿನ ಕೈವಾಡ ಬಹಳವಿದೆ ಎಂದು ಸ್ವತಃ ಅವರೇ ಹೇಳುತ್ತಾರೆ. ಇದರಲ್ಲಿ ಸ್ವಯಂ ಸತ್ಯಾಗ್ರಹ ನಡೆಸಿ ಬಂಧನಕ್ಕೊಳಗಾಗುತ್ತಾರೆ.

ತೀರ್ಥಹಳ್ಳಿ ಪ್ರೌಢಶಾಲೆಯಲ್ಲಿ ಇವರು ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಯಾಗಿದ್ದಕಾಲ.''ಆಗ ಬ್ರಿಟಿಷರೇ ಭಾರತದಿಂದ ತೊಲಗಿ'' ಎಂಬ ಚಳುವಳಿ ನಡೆಯುತ್ತಿದ್ದ ಸಂದರ್ಭದಲ್ಲಿ ಇವರು ಹೋರಾಟಕ್ಕೆ ಧುಮುಕಿ ಬಂದೀಖಾನೆಯ ಬಂಧುಗಳಾದರು. ಇಲ್ಲಿ ಇವರಿಗೆ ವಿವಿಧ ರಾಜಕೀಯ ತತ್ವಗಳ ಅರಿವಾಯಿತು. ಅಲ್ಲದೆ ಅನೇಕ ಗಣ್ಯವ್ಯಕ್ತಿಗಳ ಪರಿಚಯವಾಯಿತು.

''ಸೆರೆಮನೆಯೇ ನನಗೆ ಒಂದು ವಿಶ್ವವಿದ್ಯಾನಿಲಯವಾಯಿತು. ಇದೇ ನನ್ನ ರಾಜಕೀಯ ಜೀವನಕ್ಕೆ ನಾಂದಿ'' ಎಂದಿದ್ದಾರೆ. ಜಾತೀಯತೆ ಹೋಗಬೇಕು. ಎಲ್ಲರೂ ಒಂದೇ ಎನ್ನುವ ಅಭಿಪ್ರಾಯ ಇವರದು. ಮತಾಂಧನೊಬ್ಬನ ಗುಂಡಿಗೆ ಬಲಿಯಾಗಿ ಅಸುನೀಗಿದ ಮಹಾತ್ಮಗಾಂಧೀಯ ಬಗ್ಗೆ ''ಅವರ ನೆತ್ತರಿನಿಂದ ದಾಹ ನೀಗಿಸಿಕೊಂಡ ಈ ಧರೆ ಪಾವನ'' ಎಂದಿದ್ದಾರೆ. ಹೀಗೆ ತಾವು ಕಂಡ ಅನುಭವಿಸಿದ ಹೋರಾಟದ ಮುಖಗಳನ್ನು ಲೇಖನಗಳ ಮೂಲಕ ಹೊರ ಹೊಮ್ಮಿಸಿದ್ದಾರೆ.

ಈ ಅಭಿವ್ಯಕ್ತಿ ಸಮುದಾಯದಲ್ಲಿ ಅವರ ಭಾಷಣ, ಹೇಳಿಕೆ ಮೊದಲಾದುವನ್ನು ಕುರಿತು ಪತ್ರಿಕೆಗಳು ಬರೆದ ಲೇಖನಗಳು ಸೇರುತ್ತವೆ. ಉದಾಹರಣೆಗೆ : ವಂದನಾ ನಿರ್ಣಯದ ತಿದ್ದುಪಡಿಗಳ ಸೂಚಕರಿಗೆಲ್ಲ ಗೌಡರು ರಾಜ್ಯಪಾಲರ ಭಾಷಣದ ಪ್ರತಿಯೊಂದನ್ನು ಕೆಳಕ್ಕೆ ಹಾಕಿ ತುಳಿದ ಸಂಗತಿ ಅವರನ್ನು ತಟ್ಟನೆ ನಾಯಕರ ಪಟ್ಟಕ್ಕೇರಿಸಿದ್ದಲ್ಲದೆ, ಅಂಥ ನಾಯಕರು ತೀರ ವಿರಳೆಂಬುದನ್ನು ತೋರಿಸುತ್ತದೆ.

ಅಂದಿನ ಪತ್ರಿಕೆಗಳಲ್ಲಿ ಗೋಪಾಲಗೌಡರದೇ ವಿಶೇಷ ಸುದ್ದಿ ಮಾತ್ರವಲ್ಲ, ಸಂಪಾದಕೀಯ ಲೇಖನಗಳ ವಿಷಯವಾಗುತ್ತದೆ. ಈ ಪತ್ರಿಕಾ ಲೇಖನಗಳನ್ನು ಓದುವುದೆ ರಾಜಕೀಯ ವ್ಯಕ್ತಿಗಳಿಗೆ ದೊಡ್ಡ ಶಿಕ್ಷಣವಾಗುತ್ತದೆಂಬುದನ್ನು ಈ ಸಂದರ್ಭದಲ್ಲಿ ತಿಳಿಸಬಹುದಾಗಿದೆ. ಶ್ರೇಷ್ಠ ಶಾಸಕ ಎನಿಸಿಕೊಳ್ಳಬೇಕಾದವರು ಗೋಪಾಲಗೌಡರ ಲೇಖನಗಳನ್ನು, ಪತ್ರಗಳನ್ನೂ, ಅವರ ಬಗೆಗಿನ ಪತ್ರಿಕಾ ಹೇಳಿಕೆಗಳನ್ನು ಓದಬೇಕು. ಕರ್ನಾಟಕದ ಯೊವೊಂದು ಸಮಸ್ಯೆಯು ಅವರ ಲಕ್ಷ್ಯದಿಂದ ತಪ್ಪಿಸಿಕೊಂಡಿಲ್ಲವೆಂಬುದನ್ನು ಇಂದಿನ ಜನ ಅರಿಯ ಬೇಕಾಗಿದೆ.

ಡಾ|| ಎಚ್.ಸಿ.ವಿಷ್ಣುಮೂರ್ತಿಯವರು ರಚಿಸಿರುವ ಗೋಪಾಲಗೌಡ ಶಾಂತವೇರಿ ನೆನಪುಗಳು ಎಂಬ ಕೊನೆಯ ಭಾಗದಲ್ಲಿ ಗೋಪಾಲಗೌಡರ ಜೀವನ ಅರಳಿದ ವಿಧಾನವನ್ನು ಗಮನಿಸಬಹುದು. ವಿಷ್ಣುಮೂರ್ತಿಯವರು ಅವರನ್ನು ತೀರ ಹತ್ತಿರದಿಂದ ನೋಡಿದವರಾದ್ದರಿಂದ, ಇಲ್ಲಿ ರಚನೆಗೊಂಡಿರುವ ಎಲ್ಲ ಚಿತ್ರಗಳು ವಾಸ್ತವವೆಂದೇಗಣಿಸ ಬೇಕಾಗಿದೆ. ಎಲ್ಲಿಯೂ ಉತ್ಪ್ರೇಕ್ಷೆಯಿಲ್ಲ. ಅನಾವಶ್ಯಕವಾದ ವರ್ಣನೆಗಳಿಲ್ಲ. ಗೋಪಾಲಗೌಡರು ಬಡತನದ ಬದುಕಿನಲ್ಲಿ ಅನುಭವಿಸಿದ ಕಷ್ಟನಷ್ಟಗಳನ್ನು, ಎದುರಿಸಿದ ಸವಾಲುಗಳನ್ನು ಸಮಾಜವಾದಿ ಪಕ್ಷವನ್ನು ಕಟ್ಟುವಲ್ಲಿ ಅವರು ಪಟ್ಟ ಶ್ರಮವನ್ನು ಹೆಜ್ಜೆ ಹೆಜ್ಜೆಗೂ ಅವರು ತೋರಿದ ಸಾಹಸ, ಪ್ರಾಮಾಣಿಕತೆಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಗೇಣಿದಾರರ ಮನೆಯಲ್ಲಿ ಹುಟ್ಟಿದ ಒಬ್ಬ ಬಡ ಹುಡುಗ ಸ್ವಂತ ಶ್ರಮದಿಂದ, ಪ್ರತಿಭೆಯಿಂದ, ಪ್ರಾಮಾಣಿಕತೆಯಿಂದ ನಾಡಿನ ನಾಯಕಪಟ್ಟಕ್ಕೆ ಹೇಗೆ ಏರಬಹುದೆಂಬುದಕ್ಕೆ ಈ ಜೀವನ ಚರಿತ್ರೆಯೇ ಸಾಕ್ಷಿಯಾಗಿದೆ. ನಾಡಿನ ಇತಿಹಾಸದ ನಿರ್ಮಾಪಕರ ಸಾಲಿನಲ್ಲಿ ಗೋಪಾಲಗೌಡರ ಹೆಸರು ಉಜ್ವಲವಾಗಿ ರಾರಾಜಿಸುತ್ತದೆಂಬುದನ್ನು ಈ ಕೃತಿಯಿಂದ ತಿಳಿಯಬಹುದು.

ಒಟ್ಟಿನಲ್ಲಿ ಈ ಗ್ರಂಥ ರಾಜಕೀಯ

ಶಾಸ್ತ್ರದ ವಿದ್ಯಾರ್ಥಿಗಳ ಹಾಗೂ ರಾಜಕೀಯ ವ್ಯಕ್ತಿಗಳ ಕೈಪಿಡಿಯಾಗಲು ಅರ್ಹವಾದುದು. ಇಲ್ಲಿ ಸಿದ್ಧಾಂತಗಳ ಚರ್ಚೆಗಿಂತ ಮಿಗಿಲಾಗಿ ಪ್ರಾಯೋಗಿಕ ಅನುಭವಗಳ ರಾಶಿಯೇ ಇದೆ. ಇಂತಹದೊಂದು ಶ್ರೇಷ್ಠ ಗ್ರಂಥವನ್ನು ಸಂಪಾದಿಸಿಕೊಟ್ಟ ಡಾ|| ಎಚ್. ಸಿ. ವಿಷ್ಣುಮೂರ್ತಿಯವರಿಗೆ ಕನ್ನಡನಾಡು ಕೃತಜ್ಞರಾಗಿರಬೇಕಾಗಿದೆ.

ಎಂ. ವಿ. ವಿಜಯಲಕ್ಷ್ಮಿ
ಅಕ್ಕಿಹೆಬ್ಬಾಳು, ಕೆ. ಆರ್. ಪೇಟೆ
ತಾಲ್ಲೂಕು, ಮಂಡ್ಯಜಿಲ್ಲೆ.

ಆಹಾರ ಮತ್ತು ಆರೋಗ್ಯ : ಲೇಖಕರು-ಕೆ. ಶಾಂತಾಮಣಿ, ಸ್ನೇಹ ಪಬ್ಲಿಕೇಷನ್ಸ್, ಎಂ. ಐ. ಜಿ. ೨, ನಂ. ೮೯, ಹೆಬ್ಬಾಳು ೩ನೇ ಹಂತ, ಮೈಸೂರು-೧೬. ಮೊದಲ ಮುದ್ರಣ-೧೯೯೮ ಪುಟ-೧೨೦. ಬೆಲೆ-ರೂ ೨೯.೦೦

ಹಿಂದಿ ಮತ್ತಿತರ ಮೂಲಗಳಿಂದ, ವಿವಿಧ ಸಮಯಗಳಲ್ಲಿ ಕನ್ನಡಕ್ಕೆ ಅನುವಾದ ಮಾಡಿದ ಹದಿನಾಲ್ಕು ಲೇಖನಗಳ ಸಂಗ್ರಹ ಇಲ್ಲಿದೆ. ಶಾಕಾಹಾರ : ತಥ್ಯ, ಮಿಥ್ಯ, ಆನೆಕಾಲು ರೋಗ ಅಥವಾ ಫೈಲೇರಿಯಾ , ಕ್ಯಾನ್ಸರ್ ರೋಗದಲ್ಲಿ ಆನೆ ಪದ್ಮ ಗಿಡದ ಪ್ರಭಾವ, ಅಲರ್ಜಿ: ಒಂದು ಸಮಸ್ಯೆ , ತುಳಸಿ : ಅನೇಕ ರೋಗಗಳ ಒಂದು ಆಶ್ಚರ್ಯಜನಕ ಔಷಧಿ, ಬಾಳೆಹಣ್ಣು: ಮುಖ್ಯ ಆಹಾರವಾಗಿರಲಿ, ಧನಿಯದ ಅನೇಕ ಉಪಯೋಗಗಳು, ಖರಬೂಜಾ-ಗ್ರೀಷ್ಮ ಋತುವಿನ ಅಮೃತ ಫಲ, ವಿಶ್ವಕಿರಣ ಚಿಕಿತ್ಸಾ ವಿಧಾನ, ಹೂವು ಅರಳುವುದು ಹೇಗೆ ?, ಫರ್ನ್ ಸಸ್ಯಗಳಲ್ಲಿ ಕ್ಯಾನ್ಸರ್, ಉಪ್ಪು ನೀರಿನಲ್ಲಿ ಸಮುದ್ರದ ಪಶು-ಪಕ್ಷಿಗಳ ವಾಸ ಮತ್ತು ಪ್ರಾಚೀನ ಭಾರತದಲ್ಲಿ ಶಸ್ತ್ರಚಿಕಿತ್ಸೆ ಎಂಬ ವೈವಿಧ್ಯಮಯ ಲೇಖನಗಳು ಪುಸ್ತಕದ ಶೀರ್ಷಿಕೆಯನ್ನು ಪ್ರಶ್ನಾರ್ಥಕವನ್ನಾಗಿ ಮಾಡುತ್ತವೆ. ಏಕೆಂದರೆ ಪುಸ್ತಕದ ಮುಖಪುಟದಲ್ಲಿರುವ ವೈದ್ಯಕೀಯ ವಿಜ್ಞಾನದ ಚಿಹ್ನೆ ಕೆಂಪು''+' ಮತ್ತು ತರಕಾರಿಗಳ ಚಿತ್ರ ಹಾಗೂ 'ಆಹಾರ ಮತ್ತು ಆರೋಗ್ಯ' ಎಂಬ ಶೀರ್ಷಿಕೆಯು ಆಹಾರದಿಂದ ಆರೋಗ್ಯವನ್ನು ಹೇಗೆ ಉತ್ತಮಪಡಿಸಿಕೊಳ್ಳಬಹುದು ಎಂಬ ಮಾರ್ಗದರ್ಶನವನ್ನು ನೀಡುವಂತಿದೆ. ಒಳಪುಟಗಳಲ್ಲಿರುವ ಒಂದೆರಡು ಲೇಖನಗಳು ಈ ಅನಿಸಿಕೆಯನ್ನು ಪೂರ್ಣಗೊಳಿಸುತ್ತವೆ ಕೂಡ. ಆದರೆ ಹಲವು ಲೇಖನಗಳು ಈ ಆಶಯದಿಂದ ದೂರ ಉಳಿಯುವುದಷ್ಟೇ ಅಲ್ಲ, 'ಹೂವು ಅರಳುವುದು ಹೇಗೆ?' 'ಫರ್ನ್' ಮುಂತಾದ ಲೇಖನಗಳಂತೂ ಈ ವ್ಯಾಪ್ತಿಯೊಳಗೇ ಬರುವುದಿಲ್ಲ. ಆದುದರಿಂದ ಶೀರ್ಷಿಕೆಯ ಆಯ್ಕೆಯಲ್ಲಿ ಸ್ವಲ್ಪ ಎಚ್ಚರಿಕೆ ವಹಿಸಬಹುದಿತ್ತು ಎನ್ನಿಸುತ್ತದೆ. ಇದನ್ನು ಬಿಟ್ಟರೆ ಪುಸ್ತಕದಲ್ಲಿ ಮೂಡಿರುವ ವಿಚಾರಗಳು ಸ್ವಾಗತಾರ್ಹ ಎನಿಸುವಂತಿವೆ.

ಮೊದಲನೇ ಲೇಖನ 'ಶಾಕಾಹಾರ: ತಥ್ಯ, ಮಿಥ್ಯ. ಇದರಲ್ಲಿ ನಿಜವಾದ ಶಾಕಾಹಾರಿಗಳು ಯಾರು ಎಂಬ ಪ್ರಶ್ನೆಯನ್ನು ಎತ್ತಿಕೊಂಡು ವಿವಿಧ ರೀತಿಯಲ್ಲಿ ಚರ್ಚಿಸಿ ಕಡೆಗೆ ಭಾರತದಲ್ಲಿ ಶುದ್ಧ ಸಸ್ಯಾಹಾರಿಗಳಾಗಿ ಶೇ ೨೮ ಜನ ಮಾತ್ರ ಇದ್ದಾರೆ ಎಂದು

ನಿರೂಪಿಸಲಾಗಿದೆ. ಮಾನವ ಶರೀರ ಸಸ್ಯಾಹಾರಕ್ಕೆ 'ಅನುಕೂಲಕರವಾಗಿ ನಿರ್ಮಿತವಾಗಿರುವ' ವಿಚಾರವನ್ನು ತಿಳಿಸುತ್ತಾ ಮಲಬದ್ಧತೆ, ಕರುಳಿನ ಕ್ಯಾನ್ಸರ್, ಹರ್ನಿಯ, ಅತಿಸಾರ, ರಕ್ತದೊತ್ತಡ, ಹೃದಯರೋಗ, ಆಹಾರ ನಂಜು ಮುಂತಾದ ತೊಂದರೆಗಳು ಮಾಂಸಾಹಾರಿಗಳಲ್ಲೇ ಹೆಚ್ಚು ಎಂದೂ ಆಧಾರಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಮಾಂಸಾಹಾರದಿಂದ ಶಾಕಾಹಾರದ ಕಡೆಗೆ ಹೊರಳುವುದೆಂದರೆ ಬರ್ಬರತೆಯಿಂದ ನಾಗರಿಕತೆ ಕಡೆಗೆ ಪ್ರಯಾಣ ಮಾಡಿದ ಹಾಗೆ ಎಂದು ಹೇಳುತ್ತಾ ಖ್ಯಾತ ಆಹಾರ ವಿಜ್ಞಾನಿ ಡಾ॥ಆಚಾರ್ಯರ ಘೋಷಣೆ, 'ಶಾಕಾಹಾರ: ಪೂರ್ಣ ಆಹಾರ' ಎಂಬುದಕ್ಕೆ ವಿಶೇಷ ಒತ್ತು ಇಲ್ಲಿದೆ.

ಎರಡನೇ ಲೇಖನ 'ಆನೆಕಾಲುರೋಗ ಅಥವಾ ಫೈಲೇರಿಯಾ'ದಲ್ಲಿ ಕಾಲು, ಮುಖ ಹಾಗೂ ಶರೀರದ ಮತ್ತಿತರ ಭಾಗಗಳು ಗಟ್ಟಿಯಾಗಿ ಪೆಡೆತುಕೊಳ್ಳುವ, ಸಾಧಾರಣವಾಗಿ ಆನೆಕಾಲು ರೋಗ ಎಂದು ಕರೆಸಿಕೊಳ್ಳುವ ಫೈಲೇರಿಯಾಸಿಸ್ ರೋಗದ ಬಗೆಗೆ ಅದು ಹರಡುವ ರೀತಿ ಹಾಗೂ ಅದರ ನಿಯಂತ್ರಕ ಲಸಿಕೆ ತಯಾರಿಸುವ ವಿಧಾನದ ಬಗೆಗೆ ಉಪಯುಕ್ತ ಮಾಹಿತಿ ನೀಡುತ್ತದೆ.

ನಂತರದ ಲೇಖನಗಳಲ್ಲಿ ಆನೆಪದ್ಮಗಿಡ, ತುಳಸಿ, ಬಾಳೆಹಣ್ಣು, ಖರಬೂಜದ ಹಣ್ಣು ಧನಿಯಗಳ ಉಪಯುಕ್ತತೆಯನ್ನು ಚರ್ಚಿಸಲಾಗಿದೆ. ಸದ್ಭಾಹಾರ, ಸದಾಪುಷ್ಪಿ (ಮೈಸೂರು ಸೀಮೆಯಲ್ಲಿ ಇದನ್ನು ಛತ್ರೀಹೂ ಎಂದು ಕರೆಯುತ್ತಾರೆ) ಎಂದೆಲ್ಲಾ ಗುರುತಿಸುವ ಆನೆ ಪದ್ಮಗಿಡದ ಔಷಧೀಯ ಉಪಯುಕ್ತತೆ ಹೇಳುತ್ತಾ ಇದು ಕ್ರಿಮಿನಾಶಕ, ಅಲರ್ಜಿ ನಿವಾರಕ ಮತ್ತು ಕಫನಾಶಕ ಎಂದೂ, ಮಧುಮೇಹ ರೋಗವನ್ನು ನಿಯಂತ್ರಿಸುತ್ತದೆ ಎಂದೂ ಗುರುತಿಸುತ್ತಾರೆ. ಇದೀಗ ಕ್ಯಾನ್ಸರ್ ರೋಗ ನಿವಾರಕವಾಗಿ ಇದು ಯಶಸ್ವಿಯಾಗಿರುವುದರ ಬಗೆಗೆ ಆಶಾಭಾವನೆ ವ್ಯಕ್ತಪಡಿಸುತ್ತಾರೆ. ತುಳಸಿಯು ಶರೀರದ ವಿವಿಧ ಅಂಗಳಿಗೆ ತಗುಲುವ ಕ್ಯಾನ್ಸರ್, ರಕ್ತದ ಒತ್ತಡ, ಆಸ್ತಮ, ಅರೆತಲೆನೋವು, ಅಲರ್ಜಿ, ರಕ್ತಹೀನತೆ, ನೆಗಡಿ, ತಲೆನೋವು, ಮಂದಾಗಿ, ಮಲಬದ್ಧತೆ, ಆಮ್ಲತೆ, ಸಂಧಿವಾತ, ಮೂತ್ರಪಿಂಡ ರೋಗ, ತೊನ್ನು, ಕುಷ್ಠ, ಬುದ್ಧಿಮಾಂದ್ಯ ಮುಂತಾದ ರೋಗಗಳಿಗೆಲ್ಲಾ ಸಂಜೀವಿನಿಯಂತೆ ಕೆಲಸ ಮಾಡುವುದನ್ನು ತುಳಸಿ: ಅನೇಕ ರೋಗಗಳ ಒಂದು ಆಶ್ಚರ್ಯ ಜನಕ ಔಷಧಿ ಎಂಬ ಪುಸ್ತಕದಲ್ಲಿ ಗುರುತಿಸಿದ್ದಾರೆ. ಬಾಳೆಹಣ್ಣಿನಲ್ಲಿರುವ ಪ್ರೋಟಿನ್, ವಿಟಮಿನ್, ನಿಯಾಸನ್. ಕ್ಯಾಲ್ಸಿಯಂ, ಮೆಗ್ನೀಷಿಯಂ, ಪಾಸ್ಫರಸ್, ಪೊಟ್ಯಾಷಿಯಂ, ಖನಿಜಾಂಶ ಮತ್ತಿತರ ಪುಷ್ಟಿದಾಯಕ ಅಂಶಗಳನ್ನು ಗುರುತಿಸಿ, ಅದನ್ನು ಮುಖ್ಯ ಆಹಾರವನ್ನಾಗಿ ಮಾಡಿಕೊಂಡು ಶರೀರವನ್ನು ಆರೋಗ್ಯ ಪೂರ್ಣವಾಗಿ ಇರಿಸಿಕೊಳ್ಳಬಹುದು ಎಂದು 'ಬಾಳೆಹಣ್ಣು ಮುಖ್ಯ ಆಹಾರವಾಗಿರಲಿ' ಲೇಖನ ಸಲಹೆ ನೀಡುತ್ತದೆ. ಗ್ರಿಷ್ಮ ಋತುವಿನ ಕೊಡುಗೆ ಖರಬೂಜ ಹಣ್ಣಿನ ಉತ್ತಮ ಗುಣಗಳನ್ನು, ಪುಷ್ಟಿದಾಯಕತ್ವವನ್ನು ವಿವರಿಸಿ ಆ ಹಣ್ಣು ತಿನ್ನುವುದರಿಂದ ದೇಹ ಮನಸ್ಸುಗಳು ಹಗುರಾಗಿ ಚಟುವಟಿಕೆ ಕೂಡಿ ಬರುತ್ತದೆ ಎಂದು ಖರಬೂಜಾ, ಗ್ರೀಷ್ಮ ಋತುವಿನ ಅಮೃತಫಲ ಲೇಖನದಲ್ಲಿ ವಿವರಿಸುತ್ತಾರೆ. ಸಾಂಬಾರ ಪದಾರ್ಥವಾಗಿ ಹೆಸರುವಾಸಿ

ಯಾಗಿರುವ ಧ್ಯಾನ ಅಥವಾ ಕೇಂದ್ರೀಕರಣದಲ್ಲಿ ತಲೆನೋವು, [illegible], ಬೇನೆ, ಹಾಕಳಿಗಳು ಮುಂತಾದ ರೋಗ ನಿವಾರಣೆಯಾಗುವುದೆ ಎಂದು 'ಧ್ಯಾನದ ಅನೇಕ ಉಪಯೋಗಗಳು' ಎಂಬ ಲೇಖನ ತಿಳಿಸುತ್ತದೆ.

ವಿಶಿಷ್ಟವಾದಿಯಾಗಿ 'ಅಲರ್ಜಿ' ಕಾಯಿಲೆ ರೀತಿಯನ್ನೂ ಅದರ ನಿವಾರಣೋಪಾಯಗಳನ್ನೂ 'ಅಲರ್ಜಿ ಒಂದು ಸಮಸ್ಯೆ' ಲೇಖನ ವಿವರಿಸಿದೆ. ಪ್ರಾಚೀನ ಭಾರತದಲ್ಲಿ ರೂಢಿಯಲ್ಲಿದ್ದ [illegible] ಚಿಕಿತ್ಸಾ ವಿಜ್ಞಾನವನ್ನು ಮತ್ತೆ ಅಭಿವೃದ್ಧಿಪಡಿಸಿ ಬೆಳೆಸಬೇಕಾದುದರ ಅಗತ್ಯತೆಯ ಬಗೆಗೆ '[illegible] ಚಿಕಿತ್ಸಾ ವಿಜ್ಞಾನ'ದಲ್ಲಿ ಮಾಹಿತಿಗಳಿವೆ. ಪ್ರಾಚೀನ ಭಾರತದಲ್ಲಿ ಶಸ್ತ್ರಚಿಕಿತ್ಸೆ ಎಂಬ ಲೇಖನದಲ್ಲಿ ಹಿಂದೆ ಭಾರತದಲ್ಲಿ ಪ್ರಯೋಗದಲ್ಲಿದ್ದ ಶಸ್ತ್ರಚಿಕಿತ್ಸೆಗಳನ್ನು ವಿವರಿಸಿ [illegible]ವಾಗಿ ವಿವರಿಸುತ್ತದೆ [illegible] ಮೂರು ಲೇಖನಗಳು [illegible] ಕೇಂದ್ರವು 'ಹೂವು ಅರಳುವುದು ಹೇ[illegible] ಎಂಬ ಲೇಖನದಲ್ಲಿ ಹೂವು ಅರ[illegible] ಬಗೆಯನ್ನು ವೈಜ್ಞಾನಿಕವಾಗಿ ತಿಳಿಸು[illegible] 'ಫರ್ನ್' ಅಲಂಕಾರಸಸ್ಯದ ವಿವರಣೆ[illegible] 'ಸಸ್ಯಗಳಲ್ಲಿ ಕ್ಯಾನ್ಸರ್' ಲೇಖನದಲ್ಲಿ ಸಸ್ಯ[illegible] ಬರುವ ಗಂಟುರೋಗ ಮತ್ತು [illegible] ನಿವಾರಣೆ ಬಗೆಗೆ ತಿಳಿಸುತ್ತದೆ.

ಈ ಎಲ್ಲ ಲೇಖನಗಳೂ ಬಹಳ [illegible] ಪ್ರಸಿದ್ಧವಾಗಿರುವ ಲೇಖನಗಳ ಅನು[illegible] ವಾದದಿಂದ ಮತ್ತು ಅದಕ್ಕೆ ಈ [illegible] ವಿಷಯಗಳು ಹೀಗೆ ಬರುತ್ತಿರುವುದ[illegible] ಸ್ವಸ್ಥ ಹೊಸ ಕೊಡುಗೆ ನೀ[illegible] ಎಂದೇನೂ ಅನ್ನಿಸುವುದಿಲ್ಲ. ಆದರೂ [illegible] ವಿಷಯಗಳನ್ನು ಒಂದೆಡೆ ಸೇರಿಸಿ [illegible]ತ್ತಿರುವ ಪ್ರಯತ್ನವಂತೂ ಸ್ತುತ್ಯರ್ಹ.

ಬೀಗಲೋಕದಲ್ಲಿ ಕ್ರಾಂತಿ : ಲೇಖಕ: [illegible] [illegible], [illegible] [illegible] [illegible]. ಪುಟಗಳು : [illegible], ಬೆಲೆ: ರೂಪಾಯಿ [illegible], [illegible]

ಆಧುನಿಕ [illegible] ಕ್ಷೇತ್ರದಲ್ಲಿ [illegible] ವೈಜ್ಞಾನಿಕ ಲೇಖನಗಳ ಸಂಗ್ರಹ ಇದು. ತಿರ್ಕಳ 'ಬೀಗಲೋಕದಲ್ಲಿ ಕ್ರಾಂತಿ' ಎಂಬುದರೊಂದಿಗೆ [illegible] ಮಾನವನ ಬುದ್ಧಿಶಕ್ತಿಯನ್ನು ಕುರಿತ ಲೇಖನಗಳೂ ಇವೆ. ಅದರೊಂದಿಗೆ [illegible] ಮಾಗಿರುವ ಲೇಖನಗಳು ಬೀಗಲೋಕಕ್ಕೆ ಸಂಬಂಧಿಸಿದೆ.

ಈ ಪುಸ್ತಕದಲ್ಲಿ ಒಟ್ಟು [illegible] ಲೇಖನಗಳಿವೆ. ಅವುಗಳಲ್ಲಿ ಪ್ರಾಚೀನ ಕಾಲದಲ್ಲಿ [illegible] [illegible] ಅಲ್ಲ [illegible] ಕ್ರಾಂತಿ, ಆಧುನಿಕದಲ್ಲಿ [illegible] [illegible] ಬೀಗಗಳು. [illegible] [illegible] [illegible] ಈ [illegible] ಲೇಖನಗಳು ಬೀಗಗಳ ವಿಜ್ಞಾನದ [illegible] ಮಾಹಿತಿ ನೀಡುತ್ತವೆ.

ಮೊದಲ ಲೇಖನ '[illegible] [illegible]ದಲ್ಲಿ [illegible] [illegible] [illegible] ಭಾರತ, [illegible] [illegible] [illegible] [illegible] [illegible] [illegible] ಬೀಗಗಳ ವಿಜ್ಞಾನದ ಬಗೆಗೆ ವಿವರ[illegible] ನೀಡುತ್ತದೆ. [illegible] [illegible] [illegible] [illegible] [illegible]

ಪ್ರಾಂಗಲ್, ಡೆಲ್ಲಿಯ ಕುತುಬ್ ಮಿನಾರ್ ಮುಂತಾದವುಗಳನ್ನು ಪ್ರಾಚೀನ ಕಾಲದಲ್ಲಿ ಖಗೋಳ ವೀಕ್ಷಣೆಗಾಗಿಯೇ ನಿರ್ಮಿಸಿರಬಹುದೆಂದು ಆಧಾರಗಳಿಂದ ಊಹಿಸಲಾಗಿದೆ. 'ಬ್ರಹ್ಮಾಂಡದಲ್ಲಿ ನಾವೊಬ್ಬರೇ ಅಲ್ಲ' ಲೇಖನವು ವಿಶ್ವದಲ್ಲಿ ಭೂಗ್ರಹ ಬಿಟ್ಟರೆ ಅನ್ಯತ್ರ ಇರಬಹುದಾದ ಬುದ್ಧಿಜೀವಿಗಳ ಹುಡುಕಾಟಕ್ಕೆ ಮಾನವ ಮಾಡುತ್ತಿರುವ ಸಾಹಸದ ಬಗೆಗೆ ಚಿಂತಿಸುತ್ತದೆ. 'ಖಗೋಳ ಶಾಸ್ತ್ರದಲ್ಲಿ ಕ್ರಾಂತಿ'ಯಲ್ಲಿ ಮಹಾಭಜನೆಯಿಂದ ವಿಶ್ವ ಪ್ರಾರಂಭವಾಗಿರಬಹುದಾದ ವಿವರದತ್ತ ಬೆರಳು ತೋರಿಸಲಾಗಿದೆ. 'ಅಂತರಿಕ್ಷದಲ್ಲಿ ಮಾನವ ವಸತಿಗಳು' ಲೇಖನದಲ್ಲಿ ಭೂಮಿ ಮತ್ತು ಚಂದ್ರನ ಆಕರ್ಷಣ ಶಕ್ತಿಗಳು ಒಂದನ್ನೊಂದು ಶೂನ್ಯಗೊಳಿಸುವ ಎಲ್-೫ ಎಂಬ ಸ್ಥಳಗಳಲ್ಲಿ ವಸತಿ ಕೇಂದ್ರಗಳನ್ನು ಸ್ಥಾಪಿಸುವುದರಲ್ಲಿರುವ ಔಚಿತ್ಯ, ಅನುಕೂಲತೆ ಲಾಭ ಹಾಗೂ ತೊಂದರೆಗಳನ್ನು ಪಟ್ಟಿ ಮಾಡಲಾಗಿದೆ. 'ಹಾರುವ ತಟ್ಟೆಗಳು' ಲೇಖನದಲ್ಲಿ ಆಕಾಶದಲ್ಲಿ ಹಾರುತ್ತಿದ್ದವೆಂದು ಕಂಡು ಬಂದ ಕೆಲವು ನಿಗೂಢ ಕಾರ್ಯಗಳನ್ನು ಕುರಿತು ಚರ್ಚಿಸಲಾಗಿದೆ. 'ಆರ್ಯಭಟ' ಲೇಖನದಲ್ಲಿ ಪ್ರಾಚೀನ ಭಾರತದಲ್ಲಿ ಜ್ಯೋತಿಷ್ಯದ ಬಗ್ಗೆ ಬರೆದ ಮೊದಲ ಐತಿಹಾಸಿಕ ವ್ಯಕ್ತಿಯಾದ ಆರ್ಯಭಟ ಮತ್ತು ಇವನ ಗ್ರಂಥ 'ಆರ್ಯಭಟೀಯಂ' ಅನ್ನು ಕುರಿತು ಕೆಲ ಉಪಯುಕ್ತ ಮಾಹಿತಿಗಳನ್ನು ನೀಡುತ್ತದೆ. 'ಜೋಡಿ ಗ್ರಹಗಳ ರಹಸ್ಯ' ಲೇಖನದಲ್ಲಿ ಶನಿ ಮತ್ತು ಯುರೇನಸ್ ಗ್ರಹಗಳ ರೂಪಸಾಮ್ಯದ ಬಗೆಗೆ ವಿವರಿಸಿದ್ದ ವಿಚಾರಗಳನ್ನು (೧೯೭೭ರಲ್ಲಿ) ಕೊಡಲಾಗಿದೆ.

'ಇನ್ನೂ ನಮ್ಮಲ್ಲಿರುವ ರಹಸ್ಯಮಯ ಶಕ್ತಿ' ಹಾಗೂ 'ಧ್ವನಿಗಳ ಆಲೇಖ' ಲೇಖನಗಳು ಮಾನವನ ಮಿದುಳು ಮತ್ತು ಶ್ರವಣ ಶಕ್ತಿಯ ಬಗೆಗೆ ವಿವರಿಸುತ್ತವೆ. 'ಪ್ರಕೃತಿಯಲ್ಲಿ ದೀಪಾವಳಿ' ಹೊಳೆಯುವ ಅಣಬೆಗಳನ್ನು ಕುರಿತು ಹೇಳುತ್ತದೆ. 'ವಾಯುವಿನಿಂದ ವಿದ್ಯುಚ್ಛಕ್ತಿ' ಮತ್ತು 'ಶಕ್ತಿಯ ಕೊರತೆ ಮತ್ತು ಸೌರಶಕ್ತಿಯ ಸಾಧ್ಯತೆಗಳು' ಲೇಖನಗಳು ವಾಯುಶಕ್ತಿ, ಸೌರಶಕ್ತಿಗಳನ್ನು ಉಪಯುಕ್ತವಾಗಿ ಬಳಸಿಕೊಳ್ಳುವ ವಿಧಾನಗಳನ್ನು ಕುರಿತು ಚರ್ಚಿಸುತ್ತದೆ. 'ಕಸ' ಆದರೂ ಬೆಲೆಯುಳ್ಳದ್ದು' ಲೇಖನವು ಬೇಡವಾದ ಕಸವನ್ನು ಉಪಯೋಗಕರವಾಗಿ ಮಾಡಿಕೊಳ್ಳುವ ವೈಜ್ಞಾನಿಕ ರೀತಿಯನ್ನು ವಿವರಿಸುತ್ತದೆ.

ಒಟ್ಟಾರೆಯಾಗಿ ಪುಸ್ತಕವು ಹಲವು ಉಪಯುಕ್ತ ಮಾಹಿತಿಗಳನ್ನು ನೀಡುವುದಾದರೂ ಇಲ್ಲಿರುವ ಕೆಲವು ಲೇಖನಗಳು ಎರಡು ದಶಕಗಳ ಹಿಂದಿನ ಪ್ರಕಟಣೆಗಳಾಗಿರುವುದರಿಂದ ಇಂದಿನ ವಸ್ತುಸ್ಥಿತಿ ಸಾಕಷ್ಟು ಮಾರ್ಪಾಡುಗಳನ್ನೂ ಹೊಂದಿದೆ. ಲೇಖಕಿ ಈ ಅಂಶದತ್ತ ಗಮನ ಹರಿಸಬಹುದಿತ್ತು ಎನಿಸುತ್ತದೆ.

ಡಾ|| ಮಂಜುಳಾ ಹುಲ್ಲಹಳ್ಳಿ
ಉಪನ್ಯಾಸಕಿ
ಶ್ರೀ ವಿವೇಕಾನಂದ ಕಾಲೇಜು
ಜಯಲಕ್ಷ್ಮೀಪುರಂ, ಮೈಸೂರು-೧೨

ಓದುಗರ ಅನಿಸಿಕೆ

ಮಾನ್ಯ ಸಂಪಾದಕರಿಗೆ ನಮಸ್ಕಾರಗಳು,

ಜನವರಿ ೨೦೦೦ ರ ಪುಸ್ತಕ ಪ್ರಪಂಚ' ಸಂಚಿಕೆ ಕೈಸೇರಿತು. ನೂತನ ಸಹಸ್ರಮಾನದ ಹೊಸ್ತಿಲಲ್ಲಿ 'ಸಂಪಾದಕೀಯ ಲೇಖನ ತುಂಬಾ ಅರ್ಥಪೂರ್ಣವಾಗಿ ಬಂದಿದೆ. ಜನತೆಯ ಮೇಲೆ ಬೆಳಕು ಚೆಲ್ಲುವಂತಹ ವೈವಿಧ್ಯ ಪೂರ್ಣ ಲೇಖನಗಳನ್ನು ಪ್ರಕಟಿಸುತ್ತಿರುವುದಕ್ಕೆ ಅಭಿನಂದನೆಗಳು. ಇದೇ ರೀತಿ ಉತ್ತಮ ಬರಹಗಳು ಮುಂದೆಯು ಪ್ರಕಟವಾಗಲಿ.

ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

ಎ. ಅಬ್ದುಲ್ ನಬಿ
ಸಯ್ಯಾದ್ ಮೆಹಬೂಬ್ ಖಾದ್ರಿ
ಸಿರಗುಪ್ಪ-೫೮೩೧೨೧
ಬಳ್ಳಾರಿ ಜಿಲ್ಲೆ.

ಮಾನ್ಯರೇ,

ಜನವರಿ ೨೦೦೦ ರ 'ಪುಸ್ತಕ ಪ್ರಪಂಚ' ಸಂಚಿಕೆಯಲ್ಲಿ ಪ್ರಕಟವಾದ, ಎ.ಪಿ.ಗೌರಿಶಂಕರ ರವರ 'ಭಕ್ತಿಪ್ರಿಯ ಕೂಡಲ ಸಂಗಮದೇವ' ಲೇಖನ ತುಂಬಾ ಬೋಧಪ್ರದವಾಗಿದೆ. ಇತಿಹಾಸಕ್ಕೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸಲು ಕೋರಿದೆ.

ದಿನಾಂಕ : ೨೮-೧-೨೦೦೦

ಗುರುಲಿಂಗಯ್ಯ ಮಠಪತಿ
ನೆಗಳೂರು, ಹಾವೇರಿ ತಾಲ್ಲೂಕು
ಹಾವೇರಿ ಜಿಲ್ಲೆ

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಜಿ. ಕೆ. ಲೋಕರೆ, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ಧರ್ಮರಾಜ ಲಿಂಗಪ್ಪ ರಿತ್ತಿ ಮರಿಯಣ್ಣನವರ್, ಉಪಾಧ್ಯಕ್ಷರು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮು

ಎಚ್. ಎಸ್. ನಂಜಪ್ಪ

ಎಸ್. ಮುಂಚಯ್ಯ

ಕೆ.ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಆರ್. ಎಲ್. ಮಂಗಳೂರ್, ಪ್ರಧಾನ ಕಾರ್ಯದರ್ಶಿ

Reg. No KRNN-29 / WPP 6

Licence No. 21
Licenced to Post with Payment

ಲೇಖಕರಲ್ಲಿ ಮನವಿ

ಪುಸ್ತಕ ಪ್ರಪಂಚದಲ್ಲಿ ಪ್ರಕಟನೆಗಾಗಿ ಲೇಖನ, ಪ್ರಬಂಧ, ಕತೆಗಳನ್ನು ಸ್ವಾಗತಿಸಲಾಗಿದೆ. ಪುಸ್ತಕ ಪ್ರಪಂಚ ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು. ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳ ಪರಿಚಯ ಮಾಡಿಕೊಡುವುದು. ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕತೆಗಳು, ಕವಿತೆಗಳು, ಪ್ರಬಂಧಗಳು ಮತ್ತು ವ್ಯಕ್ತಿಚಿತ್ರಗಳನ್ನು ಪುಸ್ತಕ ಪ್ರಪಂಚಕ್ಕೆ ಕಳುಹಿಸಬಹುದು.

ಬರಹಗಳು ಸ್ವತಂತ್ರ ಅಥವಾ ಅನುವಾದಿತ ಕೃತಿಗಳಾಗಿರಬಹುದು. ಅನುವಾದಿತ ಕೃತಿಗಳಾದಲ್ಲಿ ಮೂಲ ಲೇಖಕರ ಹಾಗೂ ಪ್ರಕಾಶಕರ ಅನುಮತಿ ಪತ್ರವನ್ನು ಲಗತ್ತಿಸಿ ಕಳುಹಿಸಿಕೊಡಬೇಕು. ಲೇಖಕರ ಮತ್ತು ಪ್ರಕಾಶಕರ ವಿಳಾಸಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಬೇಕು.

ಲೇಖನಗಳು ೧೨೦೦ ಪದಗಳಿಗೆ ಮೀರದಂತೆ ಇರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಸ್ಪಷ್ಟವಾಗಿ ಬರೆಯಬೇಕು. ಲೇಖನಗಳು ಸ್ವೀಕೃತವಾದಲ್ಲಿ ಯಥಾವಕಾಶ ಪ್ರಕಟಿಸಲಾಗುವುದು. ಪುಸ್ತಕ ಪ್ರಪಂಚವು ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಸಂಭಾವನೆಯನ್ನು ನೀಡಲಾಗುವುದು.

ಸಂಪಾದಕರು ಸ್ವೀಕೃತವಾದ ಲೇಖನಗಳಲ್ಲಿ ಸೂಕ್ತ ಕಂಡ ಬದಲಾವಣೆಗಳನ್ನು ಮಾಡಬಹುದು. ಲೇಖನಗಳು ಅಕಸ್ಮಾತ್ ಕಳೆದು ಹೋದಲ್ಲಿ ಸಂಪಾದಕರು ಹೊಣೆಗಾರರಲ್ಲ.

ಅಸ್ವೀಕೃತ ಬರಹಗಳು ಹಿಂದಿರುಗಬೇಕಾದರೆ ಲೇಖನಗಳ ಸಂಗಡವೇ ಅವಶ್ಯವಿರುವಷ್ಟು ಅಂಚೆ ಚೀಟಿ ಕಳುಹಿಸಿರಬೇಕು.

ಸಂಪಾದಕ

Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006